ಕೊಡಗಿನ ಗೌಡ ಕನ್ನಡದ ಕ್ರಿಯಾ ರಚನೆಗಳು

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಸಂಪ್ರಬಂಧ

ಸಂಶೋಧಕಿ
ಲಾವಣ್ಯ ಸಿ.ಪಿ.

ಮಾರ್ಗದರ್ಶಕರು
ಡಾ. ಸಾಂಬಮೂರ್ತಿ
ಪ್ರವಾಚಕರು

ಭಾಷಾ ನಿಕಾಯ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೭-೦೮

ಕೊಡಗಿನ ಗೌಡ ಕನ್ನಡದ ಕ್ರಿಯಾ ರಚನೆಗಳು

(ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಸಂಪ್ರಬಂಧ)

ಸಂಶೋಧಕಿ
ಲಾವಣ್ಯ ಸಿ.ಪಿ.

ಮಾರ್ಗದರ್ಶಕರು
ಡಾ. ಸಾಂಬಮೂರ್ತಿ
ಪ್ರವಾಚಕರು

ಭಾಷಾನಿಕಾಯ
ಕನ್ನಡ ಭಾಷಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬
೨೦೦೭-೦೮

ದೃಢೀಕರಣ ಪತ್ರ

ಲಾವಣ್ಯ ಇವರು **ಕೊಡಗಿನ ಗೌಡ ಕನ್ನಡದ ಕ್ರಿಯಾ ರಚನೆಗಳು** ಎಂಬ ವಿಷಯ ಕುರಿತ ಸಂಪ್ರಬಂಧವನ್ನು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಸಾದರಪಡಿಸಿರುತ್ತಿರುವ ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: ೨೨-೦೬-೦೮

ಡಾ. ಸಾಂಬಮೂರ್ತಿ

ಮಾರ್ಗದರ್ಶಕರು ಮತ್ತು ಪ್ರವಾಚಕರು

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

ಪ್ರಮಾಣ ಪತ್ರ

ಕೊಡಗಿನ ಗೌಡ ಕನ್ನಡದ ಕ್ರಿಯಾರಚನೆಗಳು ಎಂಬ ವಿಷಯ ಕುರಿತ ಸಂಪ್ರಬಂಧವನ್ನು ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ. ಸಾಂಬಮೂರ್ತಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಸಂಪ್ರಬಂಧ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ:

Lavanya

ಲಾವಣ್ಯ. ಸಿ.ಪಿ.

ಸಂಶೋಧಕರು

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗೆ ಅವಕಾಶ ಮಾಡಿಕೊಟ್ಟ ಮಾನ್ಯ ಕುಲಪತಿಗಳಾಗಿದ್ದ ಶ್ರೀ.ಡಾ.ಕೆ.ವಿ.ನಾರಾಯಣ ಅವರಿಗೆ, ಮಾನ್ಯ ಕುಲಪತಿಗಳಾಗಿರುವ ಶ್ರೀ.ಡಾ.ಎ.ಮುರಿಗೆಪ್ಪ ಅವರಿಗೆ ಹಾಗೂ ಮಾನ್ಯ ಕುಲಸಚಿವರಾದ ಶ್ರೀ.ಡಾ.ಹಿ.ಚಿ.ಬೋರಲಿಂಗಯ್ಯ ಅವರಿಗೆ ಮತ್ತು ಅಧ್ಯಯನಾಂಗದ ನಿರ್ದೇಶಕರಾದ ಶ್ರೀ. ಡಾ.ಡಿ.ಪಾಂಡುರಂಗಬಾಬು ಅವರಿಗೆ ನನ್ನ ಕೃತಜ್ಞತೆಗಳು.

ಈ ಅಧ್ಯಯನ ಕ್ರಮವನ್ನು ಬೋಧಿಸಿ, ನಿಬಂಧದ ವಿಷಯ ಸೂಚಿಸಿ, ಪ್ರೀತಿಯಿಂದ ನನ್ನನ್ನು ಪ್ರೋತ್ಸಾಹಿಸಿ, ಸೂಕ್ತ ಸಲಹೆ ಮಾರ್ಗದರ್ಶನ ಮತ್ತು ಪ್ರೇರಣೆಯನ್ನು ನೀಡಿದ ನನ್ನ ಗುರುಗಳು ಹಾಗೂ ಮಾರ್ಗದರ್ಶಕರಾದ ಶ್ರೀ.ಡಾ.ಸಾಂಬಮೂರ್ತಿ ಅವರಿಗೆ ನನ್ನ ತುಂಬು ಹೃದಯದ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ.

ಕನ್ನಡ ಭಾಷಾಧ್ಯಯನ ವಿಭಾಗದ ಮುಖ್ಯಸ್ಥರು ಹಾಗೂ ನನಗೆ ಸೂಕ್ತ ಸಲಹೆಯನ್ನು ನೀಡಿದ ಶ್ರೀ.ಡಾ.ಪಿ.ಮಹಾದೇವಯ್ಯ ಅವರಿಗೂ, ಗುರುಗಳಾದ ಶ್ರೀ.ಡಾ. ಅಶೋಕಕುಮಾರ ರಂಜೇರೆ ಅವರಿಗೂ, ಪ್ರೊ.ಕೆ.ವಿ.ನಾರಾಯಣ ಅವರಿಗೂ ನನ್ನ ಆತ್ಮೀಯ ಕೃತಜ್ಞತೆಗಳು.

ನನ್ನ ಅಧ್ಯಯನಕ್ಕೆ ಉಪಯುಕ್ತವಾದ ಸಲಹೆ ಮತ್ತು ಸೂಕ್ತ ಮಾಹಿತಿಯನ್ನು ನೀಡಿದ ಪ್ರೊ.ಕೆ. ಕುಶಾಲಪ್ಪಗೌಡ ಅವರಿಗೂ, ಡಾ. ಸುಬ್ಬಣ್ಣ ರೈ ಅವರಿಗೂ, ಹಾಗೂ ಅಧ್ಯಯನದ ಆರಂಭದಿಂದಲೂ ನನಗೆ ಪ್ರೋತ್ಸಾಹ ಹಾಗೂ ಸಹಕಾರ ನೀಡಿದ ಪ್ರಸಾರಾಂಗದ ಸಿ. ಪೂವಯ್ಯ ಅವರಿಗೂ ನನ್ನ ಕೃತಜ್ಞತೆಗಳು.

ನನ್ನ ಅಧ್ಯಯನಕ್ಕೆ ಉಪಯುಕ್ತವಾದ ಮಾಹಿತಿ ಮತ್ತು ಸಲಹೆಗಳನ್ನು ನೀಡಿ ಆತ್ಮೀಯವಾಗಿ ಸಹಕರಿಸಿದ ಕೊಡಗಿನ ನಾಪೋಕ್ಲು ಪದವಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಸರಸ್ವತಿ ಪ್ರಕಾಶ್ ಕೋರನ ಅವರಿಗೂ ಹಾಗೂ ಗೌಡ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ತುಂತಜೆ ವೆಂಕಟೇಶ್ ಗಣೇಶ್ ಅವರಿಗೂ ನನ್ನ ಆತ್ಮೀಯ ಕೃತಜ್ಞತೆಗಳು.

ನನ್ನ ಅಧ್ಯಯನಕ್ಕೆ ಸಲಹೆ ಸೂಚನೆಗಳೊಂದಿಗೆ ಪ್ರೋತ್ಸಾಹವನ್ನಿತ್ತ ನನ್ನ ಪೂಜ್ಯ ತಂದೆ ಪೂಣಚ್ಚ ಅವರಿಗೂ ತಾಯಿ ಜಾಜಿ ಅವರಿಗೂ, ಈ ಅಧ್ಯಯನದ ಸಮಯದಲ್ಲಿ

ನನ್ನೊಂದಿಗೆ ಬಹಳ ಪ್ರೀತಿಯಿಂದ ಸ್ಪಂದಿಸಿ ಸಹಕರಿಸಿದ ಅಕ್ಕ ರಜನಿ ಮತ್ತು ಬಾವನವರಾದ ಗಣೇಶ್ ಅವರಿಗೂ, ಸಂಬಂಧಿಕರಾದ ಅಣ್ಣ ಅಡ್ಡಂಗಾಯ ಕರುಣಾಕರ, ಅತ್ತಿಗೆ ಬೀನಾ ಕರುಣಾಕರ, ಮತ್ತು ಚಿಕ್ಕ ಅತ್ತಿಗೆ ಬೈಲೇರ ರೀನಾ ಮಹೇಶ ಅವರಿಗೂ ಹಾಗೂ ನನಗೆ ಅಧ್ಯಯನದ ದಿನಗಳಲ್ಲಿ ಹೆಚ್ಚಾಗಿ ಪ್ರೋತ್ಸಾಹ ನೀಡಿ, ಜೊತೆಕೊಟ್ಟ ನನ್ನ ಬಾಳ ಸಂಗಾತಿಯಾದ ಕೆ.ಕೆ.ಅರುಣಕುಮಾರ್ ಅವರಿಗೂ ನನ್ನ ಪ್ರೀತಿಯ ಕೃತಜ್ಞತೆಗಳು. ಇವರೊಂದಿಗೆ ನನ್ನ ಮುದ್ದಿನ ಮಗಳು ಇಬ್ಬನಿ ಹಾಗೂ ಅಕ್ಕನ ಮಗ ಪುಟ್ಟ ತುಂಟ ಯಜ್ಞ ಬೋಪಣ್ಣ ಇವರನ್ನು ಪ್ರೀತಿಯಿಂದ ನೆನೆಯಲು ಇಚ್ಛಿಸುತ್ತೇನೆ.

ನನ್ನ ಅಧ್ಯಯನದ ಸಂದರ್ಭದಲ್ಲಿ ಸಹಪಾಠಿಗಳಾಗಿ ಸಹಕರಿಸಿದ ಶಂಕರ್, ಗುರಿಕಾರ್, ಮಲ್ಲಿಕಾರ್ಜುನ ಹಿರೇಮಠ, ಬಸವರಾಜ, ಗಂಗಪ್ಪ ಅವರಿಗೂ, ಸ್ನೇಹಿತೆ ಮಂಗಳಾಳಿಗೂ ಹಾಗೂ ನನ್ನ ಅಧ್ಯಯನದ ಆರಂಭದಿಂದಲೇ ಸೂಕ್ತ ಸಲಹೆ, ಸೂಚನೆ, ಮಾಹಿತಿಗಳನ್ನು ನೀಡಿ ಸಹಕರಿಸಿ ಪ್ರೋತ್ಸಾಹಿಸಿದ ಸಹಪಾಠಿ ಯರಿಯಪ್ಪ ಬೆಳಗುರ್ಕಿ ಅವರಿಗೂ ನನ್ನ ಕೃತಜ್ಞತೆಗಳು.

ಸಂಶೋಧನೆಗೆ ಪೂರಕವಾದ ಪುಸ್ತಕಗಳನ್ನು ಒದಗಿಸಿದ ಗ್ರಂಥಾಲಯದ ಸಿಬ್ಬಂದಿಯವರಿಗೂ ಹಾಗೂ ಕನ್ನಡ ಭಾಷಾಧ್ಯಯನ ವಿಭಾಗದ ಶ್ರೀ ವೀರೇಶಪ್ಪ ಹಾಗೂ ಮಾರಯ್ಯ ಅವರಿಗೂ ಮತ್ತು ನನ್ನ ಸಂಪ್ರಬಂಧವನ್ನು ಅಂದವಾಗಿ ಡಿಟಿಪಿ ಮಾಡಿರುವ ಭಾರತಿ ಹೇಮಂತ ಕರಡಿ ಅವರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ.

–ಲಾವಣ್ಯ.ಸಿ.ಪಿ.

ಪರಿವಿಡಿ

ಅಧ್ಯಾಯ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಗೌಡ ಜನಾಂಗದ ಸಾಂಸ್ಕೃತಿಕ ಚಹರೆ

ಗೌಡರು ಎಂದರೆ ಮುಖ್ಯಸ್ಥರು, ಒಡೆಯರು ಎಂದರ್ಥ. 'ಗೌಡ' ಎಂಬುದು ಹಿಂದೆ ಪ್ರಚಲಿತವಾಗಿದ್ದ ಒಂದು ಸಂಸ್ಕೃತಿ. ಇದು ಹಲವು ಸ್ಥಳಗಳ ಹಾಗೂ ಜನರ ಮಿಲನದ ಫಲವಾಗಿದೆ. ಕೊಡಗಿನ ಗೌಡ ಜನಾಂಗದವರು ಹಿಂದೂಗಳಾಗಿದ್ದು, ಇವರ ಆರಾಧ್ಯದೈವ ತಿರುಪತಿ ಶ್ರೀ ವೆಂಕಟರಮಣಸ್ವಾಮಿ, ದುರ್ಗಿ, ಸುಬ್ಬಮ್ಮ (ಶರ್ವಾಂಬೆ)ರನ್ನೂ ಮನೆದೇವರಾಗಿ ಪೂಜಿಸುತ್ತಾರೆ. ಕೆಲವು ಕುಟುಂಬಗಳಲ್ಲಿ ಭೂತಾರಾಧನೆಯೂ ಇದೆ. ಇವು ಆಚರಣೆಯಿಂದ ನಡೆದು ಬಂದ ಭಕ್ತಿಯ ಮಾರ್ಗಗಳು. ಕೊಡಗಿನ ಗೌಡ ಜನಾಂಗದವರ ಕುಲಗುರು ಶೃಂಗೇರಿ ಜಗದ್ಗುರುಗಳು. ಹಿರಿಯರ ಕಾಲದಲಿ ಗೌಡ ಜನಾಂಗದವರು ಶೃಂಗೇರಿ ಮಠದ ಗುರುಗಳಿಗೆ ಕಾಣಿಕೆ ಅರ್ಪಿಸಿ, ಆಶೀರ್ವಾದ ಪಡೆದು ತನ್ನ ಕುಲದ ಪದ್ಧತಿಯಂತೆ ಶುಭಾಶುಭ ಕಾಲಗಳಲ್ಲಿನ ನಡಾವಳಿಗಳ ಬಗ್ಗೆ ಅಭಿಪ್ರಾಯಗಳನ್ನು ಪಡೆಯುತ್ತಿದ್ದರು. ಈಗಲೂ ವಿವಾಹ ಸಮಾರಂಭಗಳಲ್ಲಿ ವರನ ಕಡೆಯಿಂದ ವಧುವಿಗೆ ಕೊಡುವ 'ತೆರ' ರೂ.೪.೫೦ನ್ನು ಹೆಣ್ಣಿನ ಮುತ್ತೈದೆತನಕ್ಕೆ ಶೃಂಗೇರಿ ಮಠಕ್ಕೆ ತಲುಪಿಸಬೇಕೆಂಬ ನಿಯಮವಿದೆ.

ಗೌಡ ಜನಾಂಗದವರು ಹತ್ತು ಕುಟುಂಬ (ಬುಡಕಟ್ಟು) ಮತ್ತು ಹದಿನೆಂಟು ಗೋತ್ರಗಳಿಗೆ ಸೇರಿದವರಾಗಿದ್ದಾರೆ. ಗೋತ್ರವೆಂದರೆ, ಹಲವಾರು ಕುಟುಂಬಗಳನ್ನೊಳಗೊಂಡ ಒಂದು ಜನಸಮೂಹ. ಇದನ್ನು 'ಬಳಿ' ಎಂದೂ ಕರೆಯಲಾಗುತ್ತದೆ. ಇದಕ್ಕೆ 'ಮಾರ್ಗ' ಹಾಗೂ 'ವಂಶ' ಎಂಬ ಅರ್ಥವೂ ಇದೆ. ಒಂದು ಗೋತ್ರಕ್ಕೆ ಸೇರಿದವರು ಹಿಂದೆ ರಕ್ತ ಸಂಬಂಧಿಗಳಾಗಿದ್ದರು ಎಂದು ಪ್ರತೀತಿ ಇದೆ. ಇದರಿಂದಾಗಿ ಒಂದೇ ಗೋತ್ರಕ್ಕೆ ಸೇರಿದವರ ನಡುವೆ ವಿವಾಹ ನಿಷಿದ್ಧವಾಗಿದೆ. ಈಗಲೂ ಕೊಡಗಿನ ಗೌಡ ಜನಾಂಗದ ವಿವಾಹ ಸಮಾರಂಭಗಳಲ್ಲಿ 'ಹತ್ತು ಕುಟುಂಬ ಹದಿನೆಂಟು ಗೋತ್ರ ಜಾತಿಸಭೆ ಸಮಸ್ತರ ಸಂಗಡ ಕೇಳಿ' ಎಂದು ಎಲ್ಲಾ ಕಾರ್ಯಕ್ರಮಗಳನ್ನು ಪ್ರಾರಂಭಿಸುತ್ತಾರೆ.

ಕೊಡಗಿನ ಗೌಡ ಜನಾಂಗದವರು ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿದ್ದರೆಂದು ಇತಿಹಾಸದಿಂದ ತಿಳಿದುಬರುತ್ತದೆ. ತಾಳಿ ಕೋಟೆಯ ಕದನಾನಂತರ ವಿಜಯನಗರ ಸಾಮ್ರಾಜ್ಯ ಪತನವಾಗಿ ಅಲ್ಲಿ ಮುಸ್ಲಿಮರ ಆಳ್ವಿಕೆ ಬಂದಿತು. ಆ ಸಂದರ್ಭದಲ್ಲಿ ಗೌಡರು ಮುಸ್ಲಿಮರ ಆಳ್ವಿಕೆಯನ್ನು

ವಿರೋಧಿಸಿ ಅಲ್ಲಿಂದ ಇಕ್ಕೇರಿ ಸಂಸ್ಥಾನಕ್ಕೆ ಬಂದು ನೆಲೆಸಿದರು. ಇಕ್ಕೇರಿ ನಾಯಕರು ದಕ್ಷಿಣ ಕನ್ನಡ ಜಿಲ್ಲೆಯ ರಾಜರಾದ ನಂತರ ತಮ್ಮ ಇಕ್ಕೇರಿ ಸಂಸ್ಥಾನದ ಐಗೂರು (ಹಾಸನ) ಸೀಮೆಯಿಂದ ಗೌಡ ಜನಾಂಗವನ್ನು ಬಂಗಾಡಿ, ಶಿರಾಡಿ, ಸುಬ್ರಹ್ಮಣ್ಯಗಳ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯ ಘಟ್ಟದ ಸರಹದ್ದು ಪ್ರದೇಶದಿಂದ ಬೆಳ್ತಂಗಡಿ, ಬಂಟ್ವಾಳ, ಪುತ್ತೂರು, ಸುಳ್ಯ ಕಾಸರಗೋಡಿನ ಪೂರ್ವಭಾಗಗಳಿಗೆ ತಂದು ಅಲ್ಲಿ ಭೂಮಿ ಕೊಟ್ಟು ನಿಲ್ಲಿಸಿದರೆಂದು ತಿಳಿದುಬರುತ್ತದೆ.

ಗೌಡ ಜನಾಂಗದವರು ಗದ್ದೆ ಹಾಗೂ ತೋಟದ ವ್ಯವಸಾಯದಲ್ಲಿ ನುರಿತವರು. ಈ ಕಾರಣದಿಂದಾಗಿ ಇಕ್ಕೇರಿ ನಾಯಕರು ಇವರನ್ನು ದಕ್ಷಿಣ ಕನ್ನಡ ಜಿಲ್ಲೆಯ ಜನವಿರಳ ಪ್ರದೇಶಗಳಾದ ಪುತ್ತೂರು ಹಾಗೂ ಸುಳ್ಯ ತಾಲ್ಲೂಕಿನಲ್ಲಿ ನೆಲೆಸುವಂತೆ ಪ್ರೋತ್ಸಾಹಿಸಿದರು. ಇದರಂತೆ ಗೌಡ ಜನಾಂಗದವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂದು ನೆಲೆಸಿ ಅಲ್ಲಿ ಕೃಷಿಯನ್ನು ಪ್ರಾರಂಭಿಸಿದರು. (ಕರ್ನಾಟಕದ ಪ್ರಖ್ಯಾತ ರಾಜವಂಶ ಗಂಗವಂಶ ಇವರು ಮೂಲದಲ್ಲಿ ಒಕ್ಕಲಿಗರು. ಇವರು ರಾಜಕೀಯವಾಗಿ ನಿಷ್ಕ್ರೀಯರಾದ ಬಳಿಕ ತಮ್ಮ ಮೂಲ ಕಸುಬಾದ ಒಕ್ಕಲುತನವನ್ನೇ ಮತ್ತೇ ಆಶ್ರಯಿಸಿದರು. ಇವರುಗಳೇ ಮುಂದೆ ಹಾಸನದ ಐಗೂರು ಸೀಮೆಯಲ್ಲಿ ವಿಸ್ತರಿಸಿಕೊಂಡರು ಎಂಬ ವಿಚಾರ ತಿಳಿದು ಬರುತ್ತದೆ.) ಆ ನಂತರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲೆಯೂರಿದ್ದ ಗೌಡರಲ್ಲಿ ಕೆಲವರು ಕೊಡಗಿಗೆ ಬಂದು ನೆಲೆಸಿದರು.

ಗೌಡ ಜನಾಂಗದವರು ದಕ್ಷಿಣ ಕನ್ನಡ ಜಿಲ್ಲೆಯಿಂದ ಕೊಡಗಿಗೆ ಬಂದು ನೆಲೆಸುವಂತೆ ಮಾಡುವ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದವರು ಕೊಡಗಿನ ಹಾಲೇರಿ ಅರಸ ದೊಡ್ಡ ವೀರರಾಜೇಂದ್ರ, ಇತಿಹಾಸದ ಪ್ರಕಾರ ಕೊಡಗು ಜಿಲ್ಲೆಯು ಟಿಪ್ಪುಸುಲ್ತಾನನ ಆಳ್ವಿಕೆಗೆ ಒಳಪಟ್ಟ ಸಂದರ್ಭದಲ್ಲಿ ಕೊಡಗಿನ ಜನರು ಆತನ ಆಳ್ವಿಕೆಯನ್ನು ವಿರೋಧಿಸಿ, ಆತನ ವಿರುದ್ಧ ಹಲವು ಬಾರಿ ದಂಗೆ ಎದ್ದರು. ಇದರಿಂದ ಸಿಟ್ಟಿಗೆದ್ದ ಟಿಪ್ಪು ಸುಲ್ತಾನನು ತನ್ನ ದೊಡ್ಡ ಸೈನ್ಯದೊಂದಿಗೆ ಕೊಡಗಿಗೆ ಬಂದು ಅಲ್ಲಿನ ಜನರಲ್ಲಿನ ದೊಡ್ಡ ಪ್ರಮಾಣದಲ್ಲಿ ಸುಮಾರು ಎಂಬತ್ತು ಸಾವಿರ ಜನರನ್ನು ಬಲಾತ್ಕಾರವಾಗಿ ಹಿಡಿದು ಶ್ರೀರಂಗಪಟ್ಟಣಕ್ಕೆ ಕರೆದೊಯ್ದು ಅವರನ್ನು ಮುಸಲ್ಮಾನರನ್ನಾಗಿ ಮತಾಂತರಿಸಿದನು ಎಂದು ತಿಳಿದುಬಂದಿದೆ. (ಗೌಡ ಸಂಸ್ಕೃತಿ ೧೯೮೫) ಇಷ್ಟು ದೊಡ್ಡ ಪ್ರಮಾಣದ ಜನರು ಕೊಡಗಿನಿಂದ ಮೈಸೂರು ಜಿಲ್ಲೆಗೆ ರವಾನಿಸಲ್ಪಟ್ಟ ಪರಿಣಾಮವಾಗಿ ಕೊಡಗಿನಲ್ಲಿ ಜನರ ಕೊರತೆ ಉಂಟಾಯಿತು. ಇದರಿಂದಾಗಿ ಇಲ್ಲಿ ವ್ಯವಸಾಯಗಾರರು ಇಲ್ಲದೆ ಇಲ್ಲಿನ ಹೆಚ್ಚಿನ ಭೂಮಿಗಳು ಪಾಳು ಬಿದ್ದವು. ಕ್ರಿ.ಶ. ೧೭೯೨ರಲ್ಲಿ ಅಮರ ಸುಳ್ಯ ಮಾಗಣೆಗಳು ಕೊಡಗಿನ ಹಾಲೇರಿ ಅರಸರಲ್ಲಿ ಪ್ರಖ್ಯಾತನಾದ ದೊಡ್ಡವೀರ ರಾಜೇಂದ್ರನ ವಶಕ್ಕೆ ಬಂದವು. ಆ ಸಂದರ್ಭದಲ್ಲಿ ದೊಡ್ಡ ವೀರರಾಜೇಂದ್ರನು

ಅಲ್ಲಿನ ಗೌಡ ಜನಾಂಗವನ್ನು ಕೊಡಗಿಗೆ ಬಂದು ನೆಲೆಸುವಂತೆ ಮಾಡಿದನು. ಹೀಗೆ ಕೊಡಗಿಗೆ ಬಂದ ಗೌಡ ಜನಾಂಗದವರಿಗೆ ದೊಡ್ಡವೀರರಾಜೇಂದ್ರನು ಸುಮಾರು ಕ್ರಿ.ಶ. ೧೮೦೮ರಲ್ಲಿ ಅವರು ನೆಲೆನಿಂತ ಭೂಮಿಯನ್ನು ಜಮ್ಮ ಅಥವಾ ಉಂಬಳಿಯಾಗಿ ಕೊಟ್ಟಿರುವನೆಂದು ಚರಿತ್ರೆಯಿಂದ ತಿಳಿದುಬರುತ್ತದೆ. ಹೀಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸಿಸುತ್ತಿದ್ದ ಗೌಡ ಜನಾಂಗದವರಲ್ಲಿ ಕೆಲವರು ೧೮ನೇ ಶತಮಾನದ ಕೊನೆ ಮತ್ತು ೧೯ನೇ ಶತಮಾನದ ಆದಿಯಲ್ಲಿ ಕೊಡಗಿಗೆ ಬಂದು ನೆಲೆಸಿದರು.

ಕೊಡಗಿಗೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದ ಗೌಡ ಜನಾಂಗದವರಲ್ಲಿ ತೊಡಿಕಾನ, ಪಟ್ಟಿ ಮಾರ್ಗವಾಗಿ ಬಂದವರು ಭಾಗಮಂಡಲ ಮತ್ತು ನಾಪೋಕ್ಲು ನಾಡುಗಳಲ್ಲೂ, ಸಂಪಾಜೆ ಮಾರ್ಗವಾಗಿ ಬಂದವರು ಮಡಿಕೇರಿ ನಾಡಿನಲ್ಲೂ, ಹಾಗೂ ಸುಬ್ರಹ್ಮಣ್ಯ ಕಡಮಕಲ್ಲು ಮಾರ್ಗವಾಗಿ ಬಂದ ಜನರು ಗಾಳಿಬೀಡು ಮತ್ತು ಮಡಿಕೇರಿ ನಾಡುಗಳಲ್ಲಿ ನೆಲೆನಿಂತರು. ಈ ರೀತಿ ಬಂದ ಗೌಡ ಜನಾಂಗದವರು ಸುಮಾರು ಕ್ರಿ.ಶ. ೧೭೯೯ರಿಂದ ಕ್ರಿ.ಶ. ೧೮೦೮ರವರೆಗೆ ಅಲ್ಲೇ ನೆಲೆಸಿದರು. ನಂತರ ಕ್ರಿ.ಶ. ೧೮೦೮ರಲ್ಲಿ ಅವರು ನೆಲೆನಿಂತ ಭೂಮಿಯನ್ನು ಅವರಿಗೆ ಜಮ್ಮ ಅಥವಾ ಉಂಬಳಿಯಾಗಿ ನೀಡಲಾಯಿತು. ಕ್ರಮೇಣ ಇವರುಗಳು ಕೊಡಗಿನ ತಾಲ್ಲೂಕುಗಳಾದ ವಿರಾಜಪೇಟೆ, ಮಡಿಕೇರಿ, ಹಾಗೂ ಸೋಮವಾರ ಪೇಟೆಗಳಲ್ಲಿ ನೆಲೆಸಿ ಕೊಡಗಿನ ಸ್ಥಿರವಾಸಿಗಳಾದರು.

ಕೊಡಗಿನ ಗೌಡ ಜನಾಂಗದವರು ಮಾಂಸಾಹಾರಿಗಳು ಮತ್ತು ಸಾಧು ಸ್ವಭಾವದವರು ಅಂತೆಯೇ ಸ್ವಾತಂತ್ರ್ಯಾಭಿಮಾನಿಗಳೂ ಕೂಡ. ಭತ್ತದ ಕೃಷಿಯಲ್ಲಿ ಇವರ ಪಾತ್ರ ಪ್ರಮುಖವಾದುದಾಗಿದೆ. ಇದು ಇವರ ಮೂಲ ಕಸುಬು. ಇದೇ ಅಲ್ಲದೆ, ಕಾಫಿ, ಏಲಕ್ಕಿ, ಕಿತ್ತಳೆ, ತೆಂಗು, ಅಡಿಕೆ, ಗೇರು, ರಬ್ಬರ್ ಮುಂತಾದ ಕೃಷಿಯನ್ನು ಮಾಡುತ್ತಾರೆ.

ಕೊಡಗಿನ ಗೌಡ ಜನಾಂಗದವರು ಹತ್ತು ಬುಡಕಟ್ಟು ಹಾಗೂ ಹದಿನೆಂಟು ಗೋತ್ರಗಳಿಗೆ ಸೇರಿದವರಾದ್ದರಿಂದ, ಈ ಹತ್ತು ಬುಡಕಟ್ಟುಗಳಿಗೆ ಸೇರಿದವರು ತಮ್ಮ ಕುಟುಂಬಗಳಿಗೆ ವಿಭಿನ್ನ ಹೆಸರುಗಳನ್ನಿಟ್ಟುಕೊಂಡಿದ್ದಾರೆ. ಹಾಗಾಗಿ ಕೊಡಗು ಜಿಲ್ಲೆಯಲ್ಲಿ ಸುಮಾರು ೩೫೦ ವಿವಿಧ ಕುಟುಂಬ ನಾಮ ಹೊಂದಿದ ಗೌಡ ಕುಟುಂಬಗಳಿವೆ. ಕೆಲವಡೆ ಆಯಾ ಸ್ಥಳದ ಹೆಸರನ್ನೇ ಕುಟುಂಬದ ಹೆಸರಾಗಿಸಿಕೊಂಡಿರುವರು. ಇನ್ನೂ ಕೆಲವಡೆ ಸ್ಥಳದ ಹೆಸರೇ ಕುಟುಂಬಕ್ಕಿರುವ ಪುರಾವೆಯೂ ಇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ನಾಲ್ಕುನೂರು ಗೌಡ ಕುಟುಂಬದ ಹೆಸರುಗಳಿವೆ. ಈ ಪ್ರಕಾರ ಎರಡೂ ಜಿಲ್ಲೆ ಸೇರಿ ಸುಮಾರು ಏಳುನೂರರಿಂದ ಎಂಟುನೂರು ವಿಭಿನ್ನ ಹೆಸರುಗಳನ್ನೊಳಗೊಂಡ ಗೌಡ ಕುಟುಂಬಗಳಿವೆ.

ಕೊಡಗಿನ ಗೌಡ ಜನಾಂಗದವರ ಸಾಂಪ್ರದಾಯಿಕ ಉಡುಗೆ-ತೊಡುಗೆಗಳು ವಿಶಿಷ್ಟವಾದುದಾಗಿದೆ. ಇವರ ವಿವಾಹ ಸಮಾರಂಭದಲ್ಲಿ ವರನು ಕಡ್ಡಾಯವಾಗಿ ಕಚ್ಚೆ ಹಾಕಿ ಪಂಜೆ ಉಟ್ಟು, ತಲೆಗೆ ಪೇಟ ಬಿಳಿಯ ಬಣ್ಣದ ಕೋಟು, ರುಮಾಲು ಧರಿಸಬೇಕು. ಸ್ತ್ರೀಯರು ಗೇಂಟಿ (ಗಂಟು) ಕಟ್ಟಿ ಸೀರೆಯನ್ನುಡುವರು. ಇದಕ್ಕೆ ಉದ್ದ ತೋಳಿನ ಜಾಕೇಟು(ರವಿಕೆ) ತೊಡಬೇಕು ಮತ್ತು ತಲೆಗೆ ಮುಸುಕು ವಸ್ತ್ರ (ಮುಸುಕು ಚೌಕ) ಹಾಕುತ್ತಾರೆ. ಕೊಡಗಿನ ಗೌಡ ವಿವಾಹಿತ ಸ್ತ್ರೀಯರ ಮುಖ್ಯ ಆಭರಣ ಮಾಂಗಲ್ಯ (ತಾಳಿ) ಇದು ನಿತ್ಯವೂ ಕೊರಳಿನಲ್ಲಿರಬೇಕು. ಇದು ಕೊರಳಿನಲ್ಲಿಲ್ಲದೆ, ಮೂಡಣ ಕಟ್ಟಳೆ (ಪೂರ್ವದಿಕ್ಕಿನ ಬಾಗಿಲು) ದಾಟಬಾರದು. ಹಾಗೂ ಪತಿಗೆ ಉಣಲು ಬಡಿಸಬಾರದೆಂಬ ನಿಯಮವಿದೆ. ಈ ಪದ್ಧತಿಗಳು ಇಂದಿಗೂ ಆಚರಣೆಯಲ್ಲಿದೆ. ಹಿಂದಿನ ಕಾಲದಲ್ಲಿ ಗೌಡ ಜನಾಂಗದ ಸ್ತ್ರೀಯರು ಕಿವಿಗೆ 'ಕಡಕು' ಎಂಬ ಚಿನ್ನದ ಆಭರಣವನ್ನು ಧರಿಸುತ್ತಿದ್ದರು. ಇಂದು ಇದು ಕಡಿಮೆಯಾಗಿದೆ. ವಧುವು ಮೂಗುತಿ ಧರಿಸದಿದ್ದಲ್ಲಿ ಆ ವಧುವನ್ನು ಧಾರೆ ಎರೆಯುವುದು ಗೌಡ ಜನಾಂಗದವರಲ್ಲಿ ನಿಶಿದ್ಧ. ಈ ಕಾರಣದಿಂದಾಗಿ ಹೆಣ್ಣು ಮಕ್ಕಳಿಗೆ ಚಿಕ್ಕಂದಿನಲ್ಲೇ ಕಿವಿ, ಮೂಗು ಚುಚ್ಚಿಸಿರುತ್ತಾರೆ. ಇವರಿಗೆ ಮೂಗುತಿಯು ಮುತ್ತೈದೆ ಭಾಗ್ಯವೆಂದು ಅಂಕಿತವಾದರೆ, ಕಿವಿಯ ಆಭರಣವು ಓಲೆಭಾಗ್ಯ ಎನಿಸಿಕೊಂಡಿದೆ. ಇಲ್ಲಿನ ಗೃಹಿಣಿಯರು ಸೂರ್ಯೋದಯಕ್ಕೆ ಮುಂಚಿತವಾಗಿ ಎದ್ದು ದೇವರಿಗೆ ದೀಪ ಹಚ್ಚಿ, ನಂತರವೇ ಮುಂದಿನ ಕೆಲಸ ಪ್ರಾರಂಭಿಸುವ ರೂಢಿ ಕೊಡಗಿನ ಗೌಡ ಜನಾಂಗದವರಲ್ಲಿ ತಲೆ ತಲಾಂತರಗಳಿಂದಲೂ ನಡೆದುಕೊಂಡು ಬಂದಿದೆ. ಕೊಡಗಿನ ಗೌಡ ಜನಾಂಗದವರ ವಿವಾಹ ಸಂದರ್ಭದಲ್ಲಿ 'ತೆರ' ಪದ್ಧತಿ ಜಾರಿಯಲ್ಲಿದೆ. ವಧುವಿನ ಮುತ್ತೈದೆತನಕ್ಕೆ ರೂ.೪.೫೦ ಎಲೆ ಅಡಿಕೆ ಖರ್ಚು, ಸ್ಥಳ ಮರ್ಯಾದೆಗಳಿಗೆ ತಲಾ ೫೦ ಪೈಸೆಗಳು, ಗೌಡ ಆರತಿ, ತಾಯಿ ಆರತಿ, ಬೀಡು ಆರತಿಗಳಿಗೆ ತಲಾ ೨೫ ಪೈಸೆಗಳು, ಒಟ್ಟು ರೂ. ೬.೨೫ ಮತ್ತು ಶೃಂಗೇರಿ ಮಠಕ್ಕೆ ವಧುವಿನ ಮುತ್ತೈದೆತನಕ್ಕೆ ರೂ.೬.೨೫ ಎಲೆ ಅಡಿಕೆ ಖರ್ಚು ೫೦ ಪೈಸೆ, ಹಾಲೆಮರ ಪಾದ ಕಂಬಕ್ಕೆ, ಆರತಿಗಳಿಗೆ, ಸ್ಥಳ ಮರ್ಯಾದೆಗಳಿಗೆ ತಲಾ ರೂ. ೧.೨೫. ಒಟ್ಟು, ರೂ.೧೦.೫೦ ಗಳನ್ನು 'ತೆರ' ಕಟ್ಟುವ ನಿಯಮವಿದೆ.

ಕೊಡಗಿನ ಗೌಡ ಜನಾಂಗದವರು ಯುಗಾದಿ, ಬಿಸು ಸಂಕ್ರಮಣ, ಕೈಲು ಮುಹೂರ್ತ, ದೀಪಾವಳಿ, ಹುತ್ತರಿ ಹಬ್ಬ, ಕಿಡ್ಡಾಸ ಮುಂತಾದ ಹಬ್ಬಗಳನ್ನು ಸಂಭ್ರಮದಿಂದ ಆಚರಿಸುತ್ತಾರೆ.

ಕೊಡಗಿನಲ್ಲಿ ಕೊಡವರಷ್ಟೇ ಹಕ್ಕಿರುವ ಗೌಡ ಜನಾಂಗದವರಿಗೂ, ಕೊಡವರಿಗೂ ಅಘೋಷಿತ ಸಂಘರ್ಷಗಳು ಇದ್ದರೂ ಇತ್ತೀಚಿಗೆ ಕೊಡವರೂ, ಗೌಡ ಜನಾಂಗದವರೂ ಪ್ರೀತಿ, ವಿಶ್ವಾಸದಿಂದ ಸಹಬಾಳ್ವೆ ನಡೆಸುತ್ತಿದ್ದಾರೆ. ಹಿಂದೆ ಇವರಿಗೆ ಆರ್ಥಿಕ ಬಲ, ಶಿಕ್ಷಣ, ಸಾಮಾಜಿಕ ಪ್ರತಿಷ್ಠೆ ಹೆಚ್ಚಾಗಿ

ಇರಲಿಲ್ಲ. ಆದರೆ ಇವರು ಸಹನಶೀಲರು. ಇವರುಗಳು ಸಹಬಾಳ್ವೆಗೆ ಮಹತ್ವ ನೀಡಿದವರು. ಸ್ವಾತಂತ್ರ್ಯದ ಬಗ್ಗೆ ತಿಳಿದಿದ್ದರೂ, ಇತರರನ್ನು ಹೀಯಾಳಿಸದೆ, ಎದೆ ಎತ್ತಿ ನಡೆಯುವ ಛಲ ಹಾಗೂ ಸ್ವಾಭಿಮಾನವೂ ಇವರಲ್ಲಿತ್ತು. ಬಹಳ ಶ್ರಮಿಕರಾದ ಅರೆಭಾಷೆ ಗೌಡ ಜನಾಂಗದವರು ತಮ್ಮ ಶ್ರಮದಿಂದಲೇ ಉನ್ನತ ಸ್ಥಾನಕ್ಕೇರಿದರು.

ಕೊಡಗಿನಲ್ಲಿ ಗೌಡ ಜನಾಂಗದವರು ಬಂದು ನೆಲೆನಿಂತ ಬಗ್ಗೆ ಶ್ರೀ.ಎನ್.ದೇವಿಪ್ರಕಾಶ್ ಅವರು ಬರೆಯುತ್ತಾ "ಗೌಡ ಜನಾಂಗದವರು ಕೊಡಗಿಗೆ ವಲಸೆ ಬಂದವರಲ್ಲ ವಾದಿಸುತ್ತಾರೆ. (ಕೊಡಗು ಸಂಗಾತಿ, ಪು.ಸಂ.೧೫) ಹಲವು ಕಾರಣಗಳಿಂದಾಗಿ ಒಂದು ಪ್ರದೇಶದಲ್ಲಿನ ಜನಸಂಖ್ಯೆಯಲ್ಲಿ ಏರಿಳಿತಗಳಾಗಿರಬಹುದು. ಉದಾಹರಣೆಗೆ ಬರಗಾಲ, ಸಾಂಕ್ರಾಮಿಕ ರೋಗಗಳು ಎದುರಾದಾಗ ಆ ಪ್ರದೇಶದ ಜನರು ಬೇರೊಂದು ಕಡೆಗೆ ಹೋಗುತ್ತಾರೆ. ಕೊಡಗಿನ ಗೌಡ ಜನಾಂಗದವರ ವಿಚಾರದಲ್ಲಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಜನರನ್ನು ಬಂದು ನೆಲೆಸುವಂತೆ ಮಾಡುವುದು ಸಾಧ್ಯವಾಗದ ಮಾತು. ಆ ಕಾಲದಲ್ಲಿ ಸಂಪರ್ಕ ಸಾಧನಗಳು ತೀರ ಮಿತವಾಗಿದ್ದವು. ಅಂತಹಾ ಸಂದರ್ಭದಲ್ಲಿ ಉದ್ಯೋಗ, ವಿವಾಹ ಸಂದರ್ಭಗಳಲ್ಲಿ ಒಂದು ರಾತ್ರಿ, ಒಂದು ಹಗಲು ನಡೆದು ತಲುಪಬಹುದಾದ ದೂರವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಅಂತಹುದರಲ್ಲಿ ಒಂದು ಸಾಂಸ್ಕೃತಿಕ ಘಟಕದಿಂದ ಬೇರೆ ಬಂದು ನೆಲೆಸಲು ಯಾರೂ ಇಚ್ಛಿಸುವುದಿಲ್ಲ. ಅದೇ ರೀತಿ ಸಾಮಾನ್ಯವಾಗಿ ಯಾವ ಕುಟುಂಬವೂ ಅದರ ಸದಸ್ಯ ತಮ್ಮಿಂದ ದೂರ ಹೋಗಿ ನೆಲೆಸುವುದನ್ನು ಬಯಸುವುದಿಲ್ಲ. ಈ ನಿಟ್ಟಿನಲ್ಲಿ ಗಮನಿಸಿದರೆ ಗೌಡ ಜನಾಂಗದವರು ದಕ್ಷಿಣ ಕನ್ನಡ ಜಿಲ್ಲೆ, ಕೊಡಗು ಜಿಲ್ಲೆ, ಮತ್ತು ಕೇರಳದ ಕಾಸರಗೋಡು ಜಿಲ್ಲೆಗಳಲ್ಲಿ ನೆಲೆ ನಿಂತಿರುವರು. ಈ ಪ್ರದೇಶಗಳು ಸಮೀಪವಾಗಿಯೂ ಇವೆ. ಇಲ್ಲಿನವರು ಕೃಷಿಯ ಅನುಕೂಲಕ್ಕಾಗಿ ಕಾಡನ್ನು ಕಡಿದು ನಾಡಾಗಿಸುತ್ತಾ ಸಾಗಿದರೆ ಅದನ್ನು ವಲಸೆ ಹೋಗುವುದು ಎನ್ನಲಾಗದು. ಟಿಪ್ಪು ಸುಲ್ತಾನನಿಂದಾಗಿ ಕೊಡಗಿನಲ್ಲಿ ಜನರ ಕೊರತೆ ಉಂಟಾಗಿ ಭೂಮಿಗಳು ಪಾಳು ಬಿದ್ದವು. ಇದರಿಂದಾಗಿ ಕೊಡಗಿನ ರಾಜ ದಕ್ಷಿಣ ಕನ್ನಡ ಜಿಲ್ಲೆಯಿಂದ ಗೌಡ ಜನಾಂಗವನ್ನು ಕೊಡಗಿಗೆ ಬಂದು ನೆಲೆಸುವಂತೆ ಮಾಡಿದ ಎಂಬುದು ನಂಬಲಸಾಧ್ಯವಾದ ಮಾತು" ಎನ್ನುತ್ತಾರೆ. ಆದರೆ, ಇತಿಹಾಸದಲ್ಲಿ ಗೌಡ ಜನಾಂಗದವರು ಕೊಡಗಿಗೆ ಬಂದು ನೆಲೆಸುವಲ್ಲಿ ಮಹತ್ವದ ಪಾತ್ರ ವಹಿಸಿದವನು ಹಾಲೇರಿ ವಂಶದ ಅರಸ ದೊಡ್ಡವೀರ ರಾಜೇಂದ್ರ ಎನ್ನಲಾಗಿದೆ.

ಗೌಡ ಜನಾಂಗದವರು ಈಗ ವಾಸವಿರುವ ಪ್ರದೇಶದಲ್ಲಿ ಸಾವಿರಾರು ವರ್ಷಗಳ ಹಿಂದಿನಿಂದಲೇ ವಾಸಿಸುತ್ತಿದ್ದರು ಎಂಬುದಕ್ಕೆ ಜನಪದ ಮೂಲದ ಪುರಾವೆಗಳೂ ಇವೆ. ಕೊಡಗಿನ ಆದಿ ರಾಜನ

'ಹುಕುಂ ನಾಮೆ'ಯಲ್ಲಿ, ಗ್ರಾಮದ ಮುಖ್ಯಸ್ಥನನ್ನು 'ತಕ್ಕ' ಎಂದು ಕರೆಯುತ್ತಿದ್ದರು. ಕೊಡವ ಭಾಷೆಯಲ್ಲಿ 'ತಕ್ಕ' ಎಂಬುದು 'ಗೌಡ' ಎಂಬುದರ ಪರ್ಯಾಯ ಪದ. ಈತನಿಗೆ ಗ್ರಾಮದಲ್ಲಿ ಕಂದಾಯರಹಿತ ಭೂಮಿ ನೀಡಲಾಗುತ್ತಿತ್ತು. ಇದನ್ನು 'ಗೌಡ ಉಂಬಳಿ' ಎಂದು 'ಲಿಂಗರಾಜನ ಹುಕುಂ ನಾಮೆ'ಯಲ್ಲಿ ಉಲ್ಲೇಖಿಸಲಾಗಿದೆ.

ಕೊಡಗಿನ ದೇವತೆಗಳ ವಿಚಾರದಲ್ಲಿ ಗೌಡ ಜನಾಂಗದವರು ಕೊಡಗಿನಲ್ಲಿ ಬಹಳ ಹಿಂದಿನಿಂದಲೇ ನೆಲೆಸಿದ್ದರು ಎಂಬ ಬಗೆಗೆ ಮಾಹಿತಿ ದೊರೆಯುತ್ತದೆ. "ಪಟ್ಟೋಲೆ ಪಳಮೆ"ಯಲ್ಲಿನ ಹದಿನೇಳು ದೇವತೆಗಳು ಸಮುದ್ರದ ಆಚೆಯಿಂದ ದೇವನೆಲೆ ಹುಡುಕುತ್ತಾ ಹೊರಟಾಗ, ಅವರಲ್ಲಿ ಇಗ್ಗುತ್ತಪ್ಪ, ಪಾಲೂರಪ್ಪ, ಪನ್ನಂಗಾಲತಮ್ಮೆ ಕೊಡಗಿಗೆ ಬಂದು ನೆಲೆಸಿದರೆಂದು ಏಳು ದೇವಮಕ್ಕಳ ಹಾಡಿನಲ್ಲಿದೆ. ಐದು ದೇವಮಕ್ಕಳ ಹಾಡಿನಲ್ಲಿ, ಮತ್‌ಲಪ್ಪ, ಪುಕ್‌ಲಮ್ಮೆ, ಒಗೆರಲಪ್ಪ ಮತ್ತು ರುದ್ರಗುಪ್ಪೆಲಮ್ಮೆ ಎಂಬ ಸಹೋದರಿಯರು ಕೊಡಗಿಗೆ ಬರುತ್ತಾರೆ. ಮೂರು ದೇವಮಕ್ಕಳ ಹಾಡಿನಲ್ಲಿ ಮದೇರಪ್ಪ, ಅಪ್ಪಂಗಿರಿಯಪ್ಪ, ಮತ್ತು ಹೊರ ಮಲೆನಾಡು ಭಗವತಿ ಕೊಡಗಿಗೆ ಬರುತ್ತಾರೆ. ಇಬ್ಬರು ದೇವಮಕ್ಕಳ ಹಾಡಿನಲ್ಲಿ ಕಾಕೋಟು ಅಚ್ಚಯ್ಯ, ಅಕ್ಕವ್ವ ಮತ್ತು ಇತರ ಒಟ್ಟು ಹದಿನೇಳು ದೇವತೆಗಳು ಕೊಡಗಿನಲ್ಲಿ ನೆಲೆಸಲು ಕಾವೇರಿ ಮಾತೆಯಲ್ಲಿ ಅನುಮತಿ ಪಡೆಯುತ್ತಾರೆ. ಇದರಲ್ಲಿ ಹದಿಮೂರು ಮಂದಿ ದೇವತೆಗಳೂ, ಜೊತೆಗೆ ಅಯ್ಯಪ್ಪ ಮತ್ತು ನಾಗದೇವತೆಗಳು ಕೊಡಗಿಗೆ ಬಂದು ನೆಲೆಸುತ್ತಾರೆ. ಈ ದೇವತೆಗಳು ಕೊಡಗಿಗೆ ಬಂದು ನೆಲೆಸುವ ಮೊದಲೇ ಕೊಡಗಿನಲ್ಲಿ 'ತಲಕಾವೇರಿ' ಮತ್ತು 'ಭಗಂಡೇಶ್ವರ' ದೇವಸ್ಥಾನಗಳು ಕೊಡಗಿನಲ್ಲಿ ಇದ್ದವು ಎಂಬುದಕ್ಕೆ 'ಪಟ್ಟೋಲೆ ಪಳಮೆ'ಯಲ್ಲಿ ಆಧಾರಗಳಿವೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ತಲಕಾವೇರಿ ದೇವಸ್ಥಾನದ ಮೊಕ್ತೇಸರರು ಗೌಡ ಜನಾಂಗದ 'ಕೋಡಿ' ಮನೆತನದವರು. ಭಗಂಡೇಶ್ವರ ದೇವಸ್ಥಾನದ ಮೊಕ್ತೇಸರರು 'ಬಳ್ಳಡ್ಕ' ಎಂಬ ಗೌಡ ಮನೆತನದವರು. ಇದು ಸಾವಿರಾರು ವರ್ಷಗಳಿಂದ ವಂಶಪಾರಂಪರ್ಯವಾಗಿ ಮುಂದುವರಿದುಕೊಂಡು ಬಂದಿರುವುದಾಗಿದೆ. ಇದರ ಪ್ರಕಾರ ಕೊಡಗಿನಲ್ಲಿ ದೇವತೆಗಳು ಬಂದು ನೆಲೆಸುವ ಮೊದಲೇ ಗೌಡರು ನೆಲೆಸಿದ್ದರು ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಈ ರೀತಿಯ ವಿಮರ್ಶೆಗಳೇನೇ ಇದ್ದರೂ, ಐತಿಹಾಸಿಕ ಆಧಾರಗಳ ಪ್ರಕಾರ ಕೊಡಗಿಗೆ ಗೌಡ ಜನಾಂಗದವರು ವಲಸೆ ಬಂದವರಾಗಿದ್ದಾರೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಭಾಷೆ:

ಕೊಡಗಿನ ಗೌಡ ಜನಾಂಗದವರು ಮಾತನಾಡುವ ಭಾಷೆ 'ಅರೆಭಾಷೆ' ಅಥವಾ 'ಗೌಡ ಕನ್ನಡ'. ಗೌಡ ಜನಾಂಗದವರಲ್ಲಿ ಎರಡು ಭಾಷಿಕ ಗುಂಪುಗಳಿವೆ.

೧. ತುಳು ಮಾತನಾಡುವ ಗೌಡ ಜನಾಂಗ.

೨. ಕನ್ನಡ ಮಾತನಾಡುವ ಗೌಡ ಜನಾಂಗ.

ಮೊದಲನೇ ಗುಂಪಿನವರು ಪುತ್ತೂರು, ಸುಳ್ಯ ಮತ್ತು ಕಾಸಗೋಡಿಗೆ ಸೇರಿದ ಗೌಡ ಜನಾಂಗದವರು. ಈ ಪ್ರದೇಶಗಳಲ್ಲಿ ಸಾಮಾಜಿಕವಾಗಿ ಸಂವಹನ ಭಾಷೆ ತುಳು. ಜೊತೆಗೆ ಕೌಟುಂಬಿಕ ನೆಲೆಯಲ್ಲಿ ಮತ್ತು ಜನಾಂಗದ ನೆಲೆಯಲ್ಲಿ ಗೌಡ ಕನ್ನಡ ಚಾಲ್ತಿಯಲ್ಲಿದೆ.

ಎರಡನೇ ಗುಂಪಿನವರು ಕೊಡಗು ಜಿಲ್ಲೆಗೆ ಸೇರಿದವರಾಗಿದ್ದಾರೆ. ಇವೆರಡೂ ಗುಂಪುಗಳ ಭಾಷೆಯಲ್ಲಿ ವ್ಯತ್ಯಾಸವಿದ್ದರೂ, ಅವರ ಸಾಂಸ್ಕೃತಿಕ ಆಚರಣೆ ಹಾಗೂ ಪದ್ಧತಿಗಳು ಒಂದೇ ಆಗಿವೆ.

'ಅರೆಭಾಷೆ' ಅಥವಾ 'ಅರೆಗನ್ನಡ'ಕ್ಕೆ 'ಗೌಡ ಕನ್ನಡ' ಎಂಬ ಅಧಿಕೃತ ಹೆಸರನ್ನು ತಂದವರು ಪ್ರೊ. ಎಂ.ಮರಿಯಪ್ಪಭಟ್ಟರು. ಒಂದು ಜಾತಿಗೆ ಸೀಮಿತವಾದ ಕನ್ನಡ ಪ್ರಭೇದವನ್ನು ಆಯಾ ಜಾತಿಯ ಹೆಸರಿನಿಂದ ಗುರುತಿಸುವ ರೂಢಿ ಭಾಷಾ ವಿಜ್ಞಾನ ಕ್ಷೇತ್ರದಲ್ಲಿರುವಂತೆ, ಗೌಡರ ಕನ್ನಡ ಮಾತಿನ ಪ್ರಭೇದವನ್ನು 'ಗೌಡ ಕನ್ನಡ' ಎಂದು ಪ್ರೊ.ಎಂ.ಮರಿಯಪ್ಪಭಟ್ಟರು ಅಂಕಿತಗೊಳಿಸಿದರು. (ಕೆ.ಕುಶಾಲಪ್ಪಗೌಡರು ೧೯೬೬) ನಂತರದ ಶಾಸ್ತ್ರೀಯವಾದ ಅಧ್ಯಯನಗಳಲ್ಲಿ ಅರೆಭಾಷೆಯನ್ನು 'ಗೌಡ ಕನ್ನಡ' ಎಂದೇ ಗುರುತಿಸಲಾಗಿದೆ. ಈ ಭಾಷೆಯ ಮೇಲೆ ಮೊದಲ ಬಾರಿಗೆ ವೈಜ್ಞಾನಿಕ ಅಧ್ಯಯನ ನಡೆಸಿದ ಪ್ರೊ.ಕೆ. ಕುಶಾಲಪ್ಪಗೌಡರು 'ಗೌಡ ಕನ್ನಡ' ಎಂಬ ಹೆಸರನ್ನೇ ಉಳಿಸಿಕೊಂಡಿದ್ದಾರೆ.

ಈ ಭಾಷೆಯ ಪ್ರಾಚೀನತೆಯ ಬಗ್ಗೆ ನಿಖರವಾಗಿ ಹೇಳಲು ಆಧಾರ ಸಾಲದು. ಗೌಡ ಜನಾಂಗದವರು ಮೊದಲು ನೈಸರ್ಗಿಕವಾಗಿ ಸಂಪನ್ಮೂಲಗಳಿಂದ ಶ್ರೀಮಂತರಾಗಿರುವ ಸುಳ್ಯ ಪ್ರದೇಶದಲ್ಲಿ ನೆಲೆ ನಿಂತರು. ಈ ಪ್ರದೇಶದಲ್ಲಿ ನೆಲೆನಿಂತ ಗೌಡರು ಕನ್ನಡ ಮಾತನಾಡುತ್ತಿದ್ದರು. ಮುಂದೆ ಇವರುಗಳೊಂದಿಗೆ ಅನ್ಯ ಪರಿಸರದ ಸಂಸರ್ಗವಾದಾಗ, ಇವರು ತಮ್ಮದೇ ಆದ 'ಗೌಡ ಕನ್ನಡ' ಎಂಬ ಭಾಷೆಯನ್ನು ರೂಪಿಸಿಕೊಂಡರು. ಇದರಿಂದ ಸಾಮಾಜಿಕ ಹಾಗೂ ಭೌಗೋಳಿಕ ಹಿನ್ನಲೆಯಲ್ಲಿ ಪರಿಸರದ ಸಾಂಸ್ಕೃತಿಕ ನೆಲೆಗಟ್ಟುಗಳನ್ನು ಸ್ವೀಕರಿಸಿದರು. ತುಳುನಾಡಿಗೆ ಬಂದ ಗೌಡರು ಸುಳ್ಯ ಪ್ರದೇಶದಲ್ಲಿ ನೆಲೆನಿಂತ ತರುವಾಯ ಕಾಸರಗೋಡು ಹಾಗೂ ಕೊಡಗು ಪ್ರದೇಶಗಳಲ್ಲಿ ಕೃಷಿ ಭೂಮಿಗಾಗಿ ವಿಸ್ತರಿಸಿಕೊಂಡರು. ಪಟ್ಟ–ವರ್ಗ ಭೂಮಿಗಳ ಒಡೆಯರಾಗಿ ಇವರು ಆರ್ಥಿಕವಾಗಿಯೂ, ಸಾಮಾಜಿಕವಾಗಿಯೂ ಒಡೆಯರಾಗಿ ಸ್ಥಿರವಾದ ನೆಲೆಯನ್ನು ಹೊಂದಿದರು. ಈ ಸಬಲತೆಯಿಂದ ತಮ್ಮ ಭಾಷೆಯನ್ನು ಉಳಿಸಿಕೊಳ್ಳುವಲ್ಲಿ ಅವರು ಸಫಲರಾದರು. ಕೊಡಗು ಪರಿಸರದಲ್ಲಿ ಎಲ್ಲಾ ಜಾತಿ ಸಮುದಾಯಗಳೂ ಇವೆ. ಆದರೆ ಸಂಖ್ಯಾದೃಷ್ಟಿಯಿಂದ ಬಹುಪಾಲು ಕೊಡವ ಹಾಗೂ

ಗೌಡ ಸಮುದಾಯದಿಂದ ಕೂಡಿದೆ. ಸಾಮಾಜಿಕವಾಗಿ ಇಲ್ಲಿನ ಸಂವಹನ ಭಾಷೆ ಕೊಡವ ಭಾಷೆ. ಜೊತೆಗೆ ಕೌಟುಂಬಿಕ ನೆಲೆ ಹಾಗೂ ಜನಾಂಗದ ನೆಲೆಯಲ್ಲಿ ಗೌಡ ಕನ್ನಡ ಚಾಲ್ತಿಯಲ್ಲಿದೆ.

ಕೊಡಗಿನಲ್ಲಿ ಗೌಡಕನ್ನಡವನ್ನು ಕೇವಲ ಗೌಡ ಜನಾಂಗದವರು ಮಾತ್ರ ಮಾತನಾಡುವುದಿಲ್ಲ. ಈ ಭಾಷೆಯನ್ನು ಗೌಡ ಜನರ ಸಂಸರ್ಗದಿಂದಾಗಿ ಇತರರೂ ಮಾತನಾಡುತ್ತಾರೆ. ಆದರೆ, ಈ ಭಾಷೆಯು ಪೂರ್ಣ ಪ್ರಮಾಣದಲ್ಲಿ ಗೌಡ ಜನಾಂಗದವರಲ್ಲಿ ಬಳಕೆಯಾಗುತ್ತದೆ. ಕೊಡಗು ಜಿಲ್ಲೆಯು ಸುಳ್ಯ ಹಾಗೂ ಕೇರಳದ ಕಾಸರಗೋಡಿಗೆ ಸಮೀಪದಲ್ಲಿದೆ. ಹಾಗಾಗಿ ಕೊಡಗಿನ ಗೌಡ ಕನ್ನಡ ತುಳು ಹಾಗೂ ಮಲೆಯಾಳ ಭಾಷಾ ಸಂಸ್ಕೃತಿಗಳ ಸಂಸರ್ಗಕ್ಕೆ ಒಳಗಾಗಿದೆ. ಜೊತೆಗೆ ಇಲ್ಲಿ ಬ್ಯಾರಿ ಭಾಷೆ ಮಾತನಾಡುವ ಇಸ್ಲಾಮೀಯರಿದ್ದಾರೆ. ತುಳು ಭಾಷೆ ಮಾತನಾಡುವ ಒಂಟ ಬಿಲ್ಲವರಿದ್ದಾರೆ. ಇದರೊಂದಿಗೆ 'ಅರೆ ಭಾಷೆ' ಎಂದು ಕರೆಸಿಕೊಳ್ಳುವ 'ಗೌಡರು' ಮಾತನಾಡುವ 'ಗೌಡ ಕನ್ನಡ' ನೆಲೆಗೊಂಡಿದೆ.

ಗೌಡ ಕನ್ನಡ ಶಿಷ್ಟಕನ್ನಡದ ಪ್ರಾದೇಶಿಕ ಹಾಗೂ ಸಾಮಾಜಿಕ ಉಪಭಾಷೆಗಳಲ್ಲಿ ಒಂದಾಗಿದೆ. ಲಭಿಸಿರುವ ಆಧಾರಗಳನ್ನು ಗಮನಿಸಿಕೊಂಡು "ಗೌಡ ಕನ್ನಡವು" ಉತ್ತರ ದ್ರಾವಿಡದ, ಈಗ ಪಶ್ಚಿಮ ಪಾಕಿಸ್ತಾನದ ಕಲತ್ ಹಾಗೂ ದಕ್ಷಿಣ ಆಫಘಾನಿಸ್ತಾನದ ಇರಾಣಗಳಲ್ಲಿ ಬಳಕೆಯಲ್ಲಿರುವ ಬ್ರಾಹೂಈ ಭಾಷೆಗೆ ತೀರ ಹತ್ತಿರವಾಗಿದ್ದು, ಇದು ಅದರ ನಂತರದ ಸ್ಥಾನವನ್ನು ಪಡೆಯುತ್ತದೆಂದು ಖ್ಯಾತ ವಿದ್ವಾಂಸ ಎಸ್.ವಿ.ಷಣ್ಮುಗಂ ಉಲ್ಲೇಖಿಸಿರುವುದನ್ನು ಪ್ರೊ.ಕೆ.ಕುಶಾಲಪ್ಪಗೌಡರು ಪ್ರಸ್ತಾಪಿಸುತ್ತಾರೆ. ಆದರೆ, ಇದನ್ನು ಅವರು ತಮ್ಮ ಬರಹಗಳಲ್ಲಿ ದಾಖಲಿಸಿಲ್ಲ. (ಪೂವಪ್ಪ ಕಣಿಯೂರು, ೨೦೦೭) ವ್ಯಾಪಾರ ವಹಿವಾಟುಗಳಲ್ಲಿ, ಶಾಲಾ ಕಾಲೇಜುಗಳಲ್ಲಿ, ಹಾಗೂ ಸರಕಾರದ ವ್ಯವಹಾರಗಳಲ್ಲಿ ಬಳಕೆಯಾಗುವ ಕನ್ನಡಕ್ಕಿಂತ ಗೌಡ ಕನ್ನಡವು ವಿಶಿಷ್ಟವಾಗಿದೆ. ಜೊತೆಗೆ ಈ ಭಾಷೆ ತನ್ನೊಳಗೇ ಪ್ರಾದೇಶಿಕ ಭಿನ್ನತೆಯನ್ನು ಹೊಂದಿದೆ. ಅಂದರೆ, ಸುಳ್ಯ ಪರಿಸರದಲ್ಲಿ ಈ ಭಾಷೆ ಗಡುಸಾದ ಅಭಿವ್ಯಕ್ತಿಯನ್ನು ಹೊಂದಿದ್ದರೆ, ಮಡಿಕೇರಿ ಸುತ್ತಮುತ್ತಲಿನ ಗೌಡ ಕನ್ನಡವು ಲಾಲಿತ್ಯದಿಂದ ಕೂಡಿದುದಾಗಿದೆ. ಕೇರಳದ ಗಡಿಭಾಗದಲ್ಲಿ ಮಲೆಯಾಳದ ಪ್ರಭಾವವಿದ್ದರೆ, ಮಡಿಕೇರಿಯಲ್ಲಿ ಕೊಡವ ಭಾಷೆಯ ಪ್ರಭಾವ ಎದ್ದು ಕಾಣುತ್ತದೆ. ಜೊತೆಗೆ ಹವ್ಯಕ ಭಾಷಾ ಪ್ರಭಾವಕ್ಕೂ ಈ ಭಾಷೆ ಒಳಗಾಗಿದೆ.

ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ ಗೌಡ ಜನಾಂಗದವರು ಕನ್ನಡವನ್ನೇ ಮನೆಮಾತಾಗಿ ಇಟ್ಟುಕೊಂಡಿರುವವರು ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರೆ. ಇದಕ್ಕೆ ಮದುವೆಯಾದ ಹೆಣ್ಣು ಅಥವಾ ಗಂಡುಗಳಿಗೆ ಪರಸ್ಪರ ಭಾಷೆ ಗೊತ್ತಿಲ್ಲದಿರುವುದು ಅಥವಾ ಭಾಷೆಯಲ್ಲಿ ಪರಿಣತಿ

ಇಲ್ಲದಿರುವುದು ಕಾರಣವಿರಬಹುದು. ಕೆಲವರು ಮಕ್ಕಳಿಗೆ ಅಕ್ಕ ಪಕ್ಕದಲ್ಲಿ ಅರೆಭಾಷೆ ಮಾತನಾಡುವ ಯಾರೂ ಇರದಿದ್ದ ಕಾರಣ ಶುದ್ಧ ಕನ್ನಡವನ್ನೇ ಕಲಿಸಿರುತ್ತಾರೆ.

'ಗೌಡ ಕನ್ನಡ'ವೆಂದು ಕರೆಸಿಕೊಂಡಿರುವ ಈ ಭಾಷೆ ಜನರಲ್ಲಿ 'ಅರೆಭಾಷೆ', 'ಅರೆಗನ್ನಡ'ಎಂದು ಬಳಕೆಯಲ್ಲಿದೆ. ಹಿಂದೆ ಇದು ಕೇವಲ ಗೌಡ ಜನಾಂಗದವರ ನಡುವೆ ಮತ್ತು ಗೃಹ ವ್ಯವಹಾರದ ನೆಲೆಯಲ್ಲಿ ಮಾತ್ರ ಬಳಕೆಯಲ್ಲಿದ್ದ ಭಾಷೆಯಾಗಿತ್ತು. ಇದು ಕೇಳುಗರಿಗೆ ಹಲವು ಭಾಷೆಗಳು ಅರ್ಧಂಬರ್ಧ ಸೇರಿಕೊಂಡ ಭಾಷೆಯಂತೆ ಕೇಳುತ್ತಿತ್ತು. ಇದು ಪೂರ್ಣ ಪ್ರಮಾಣದಲ್ಲಿ ಅವರಿಗೆ ಅರ್ಥವಾಗದೆ, ಅರ್ಧಂಬರ್ಧ ಅರ್ಥವಾಗುತ್ತಿದ್ದರಿಂದ ಬಹುಶಃ ಇದನ್ನು 'ಅರೆಭಾಷೆ' ಎಂದು ಕರೆದಿರಬೇಕು. ಆದರೆ, ಭಾಷಾ ವೈಜ್ಞಾನಿಕತೆಯ ಹಿನ್ನಲೆಯಲ್ಲಿ ಗಮನಿಸಿದರೆ, ಈ ರೀತಿ ಕರೆಯುವುದು ಬಾಲಿಶವಾಗುತ್ತದೆ. ಏಕೆಂದರೆ, ಇದು ಅರ್ಧಂಬರ್ಧ ಭಾಷೆಯಾಗಿರದೆ, ಪೂರ್ಣ ಭಾಷೆಯಾಗಿದೆ. ಇದನ್ನು 'ಗೌಡ ಕನ್ನಡ' ಎಂದು ಗುರುತಿಸುವುದರ ಮೂಲಕ ಅದರ ವೈಶಿಷ್ಟ್ಯವನ್ನು ಪರಿಗಣಿಸಿದಂತಾಗುತ್ತದೆ.

ಪ್ರೊ.ಕೆ.ಕುಶಾಲಪ್ಪಗೌಡರು ಉಲ್ಲೇಖಿಸಿರುವ ಹವ್ಯಕ ಭಾಷೆಯಲ್ಲಿ ಕೂಡ ತುಳು ಮಾತನಾಡುವ ಅಥವಾ ಹವ್ಯಕ ಮಾತನಾಡುವ ಸಮ್ಮಿಶ್ರ ಭಾಷಾದಾಂಪತ್ಯ ಸಾಮಾನ್ಯವಾಗಿದೆ. ಇದು ಹಿಂದಿನ ಜಾತಿ ಹಾಗೂ ಭಾಷೆಗಳ ನಿರಂತರತೆಗೂ ಕಾರಣವಾಗಿದೆ. ಈ ದೃಷ್ಟಿಯಿಂದ ಹವ್ಯಕ ಕನ್ನಡವನ್ನು ಹೆಸರಿಸಿದಂತೆ, ಗೌಡ ಕನ್ನಡವನ್ನು ಕೂಡ ಪ್ರತ್ಯೇಕವಾಗಿ ಹೆಸರಿಸುವಲ್ಲಿ ಆನ್ವಯಿಕ ಅರ್ಥವಂತಿಕೆ ಇದೆ. ಒಂದು ನಿರ್ದಿಷ್ಟ ಪ್ರದೇಶ ಮತ್ತು ಗೌಡ ಜನಾಂಗದಲ್ಲಿ ಮಾತ್ರ ಬಳಕೆಯಲ್ಲಿರುವ ಭಾಷೆಯಾದ ಗೌಡ ಕನ್ನಡವು ಏಕಕಾಲದಲ್ಲಿ ಪ್ರಾದೇಶಿಕ ಹಾಗೂ ಸಾಮಾಜಿಕ ಭಾಷೆಯಾಗಿ ಗುರುತಿಸಿಕೊಳ್ಳುತ್ತದೆ.

ಉದ್ದೇಶ:

ಪ್ರಸ್ತುತ ಪ್ರಬಂಧದಲ್ಲಿ ಕನ್ನಡದ ವಿಶಿಷ್ಟ ಪ್ರಭೇದವೆಂದು ಗುರುತಿಸಲಾಗಿರುವ ಗೌಡ ಕನ್ನಡದ ಕ್ರಿಯಾರಚನೆಗಳ ಬಗೆಗೆ ವಿಶೇಷ ಒತ್ತು ನೀಡಲಾಗಿದ್ದು, ಜೊತೆಗೆ ಗೌಡ ಕನ್ನಡದ ವೈಶಿಷ್ಟ್ಯಗಳನ್ನು ಉದಾಹರಣೆ ಸಹಿತ ನೀಡಿ ಅದು ಶಿಷ್ಟಕನ್ನಡಕ್ಕಿಂತ ಹೇಗೆ ಭಿನ್ನ ಎಂಬುದನ್ನು ತಿಳಿಸುವ ಉದ್ದೇಶವನ್ನು ಹೊಂದಿದೆ. ಈ ಅಧ್ಯಯನದಲ್ಲಿ ಶಿಷ್ಟ ಕನ್ನಡಕ್ಕಿಂತ ಗೌಡ ಕನ್ನಡದ ಕ್ರಿಯಾ ರಚನೆಗಳು ಭಿನ್ನ ರೀತಿಯಲ್ಲಿದ್ದು ಅವುಗಳು ಧ್ವನಿ, ಆಕೃತಿ ಮತ್ತು ಅರ್ಥದ ಸಂಬಂಧದಲ್ಲಿ ಹೇಗೆ ಭಿನ್ನ ಎಂಬುದನ್ನು ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿದೆ.

ಶಿಷ್ಟ ಕನ್ನಡದ ಕ್ರಿಯಾರಚನೆಗಳಲ್ಲಿ ಮೊದಲ ಸ್ವರ 'ಅ' ಅಥವಾ 'ಉ' ಇದ್ದರೆ, ಗೌಡ ಕನ್ನಡದಲ್ಲಿ ಅದು 'ಒ' ಆಗುತ್ತದೆ. ಅದೇ ರೀತಿ ಶಿಷ್ಟಕನ್ನಡಕ್ಕಿಂತ ಭಿನ್ನವಾದ ಕ್ರಿಯಾರಚನೆಗಳೂ ಇವೆ. ಅಲ್ಲದೆ, ಶಿಷ್ಟಕನ್ನಡದ ಕ್ರಿಯಾರಚನೆಗಳಿಗೆ ಭಿನ್ನವಾದ ಅರ್ಥಗಳು ಇಲ್ಲಿ ಬಳಕೆಯಲ್ಲಿದೆ. ಈ ಎಲ್ಲದರ ಮಾಹಿತಿಯನ್ನು ಬೆಳಕಿಗೆ ತರುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ.

ವ್ಯಾಪ್ತಿ:

ಪ್ರಸ್ತುತ ಪ್ರಬಂಧವು ಕೊಡಗು ಜಿಲ್ಲೆಯ ವ್ಯಾಪ್ತಿಯನ್ನು ಹೊಂದಿದೆ. ಕೊಡಗಿನ ತಾಲೂಕುಗಳಾದ ವಿರಾಜಪೇಟೆ, ಮಡಿಕೇರಿ ಹಾಗೂ ಸೋಮವಾರ ಪೇಟೆಯಲ್ಲಿನ ಗೌಡ ಜನಾಂಗದವರ ಭಾಷೆಯಲ್ಲಿನ ಮಾಹಿತಿಯನ್ನು ಇಲ್ಲಿ ಗಮನಿಸಲಾಗಿದೆ.

ಅಧ್ಯಾಯ ೨
ಅಧ್ಯಯನಗಳ ಸಮೀಕ್ಷೆ

ಕನ್ನಡದ ಮೊದಲ ಲಭ್ಯಗ್ರಂಥ ಕವಿರಾಜ ಮಾರ್ಗದಲ್ಲಿ ಅನೇಕ ಪ್ರಬೇಧಳಿದ್ದವೆಂದು ಹೇಳಿ ಅವುಗಳಲ್ಲಿ ಒಂದು ಭಾಗದ ಕನ್ನಡವನ್ನು 'ತಿರುಳ್ಗನ್ನಡ' ಎಂದು ಕವಿರಾಜ ಮಾರ್ಗಕಾರ ಹೇಳಿದ್ದಾನೆ. ಅಂದರೆ, ಆಗಿನ ಕಾಲಕ್ಕೆ ಕನ್ನಡ ನಾಡಿನಲ್ಲಿ ಹಲವು ಪ್ರಭೇದಗಳು ಇದ್ದುದು ತಿಳಿದು ಬರುತ್ತದೆ. ಕೇಶಿರಾಜನು ಇವುಗಳನ್ನು ಉತ್ತರ ಮತ್ತು ದಕ್ಷಿಣ ಪ್ರಭೇದಗಳು ಎಂದು ಹೇಳುತ್ತಾನೆ. ಹಲವು ವ್ಯಕ್ತಿಗಳಿಂದ ಕೆಲವು ಭಾಷಾ ವೈಶಿಷ್ಟ್ಯಗಳನ್ನು ಬೆಳೆಸಿಕೊಂಡು, ನಿರ್ದಿಷ್ಟ ಪ್ರದೇಶ, ಸಾಮಾಜಿಕ ಪರಿಸರದಲ್ಲಿ ಬಳಸುವ ಭಾಷೆಯನ್ನು ಪ್ರಭೇದ ಭಾಷೆ ಎಂದು ಕರೆಯಲಾಗಿದೆ. ಆಧುನಿಕ ಸಂದರ್ಭದಲ್ಲಿ ಪ್ರಾದೇಶಿಕವಾಗಿ, ಸಾಮಾಜಿಕವಾಗಿ ಮತ್ತು ಅನ್ಯಭಾಷಾ ಪ್ರಭಾವಗಳನ್ನಾಧರಿಸಿ ಕನ್ನಡ ಭಾಷೆಯ ಪ್ರಭೇದಗಳನ್ನು ಗುರುತಿಸುವುದು ನಡೆದಿದೆ. ಇಲ್ಲಿ ಪ್ರಾದೇಶಿಕವಾಗಿ ನಾಲ್ಕು ಉಪಭಾಷೆಗಳ (ಕಲಬುರ್ಗಿ ಕನ್ನಡ, ಧಾರವಾಡ ಕನ್ನಡ, ಕರಾವಳಿ ಕನ್ನಡ, ಮೈಸೂರು ಕನ್ನಡ) ಬಗೆಗೆ ಅಧ್ಯಯನ ನಡೆಸಲಾಗಿದ್ದರೆ, ಸಾಮಾಜಿಕವಾಗಿ ಹಲವು ಪ್ರಭೇದಗಳ ಬಗೆಗೆ ಅಧ್ಯಯನ ನಡೆಸಲಾಗಿದೆ. ಅವುಗಳಲ್ಲಿ ಹಾಲಕ್ಕಿ ಕನ್ನಡ, ಹವ್ಯಕ ಕನ್ನಡ, ಒಕ್ಕಲಿಗರ ಕನ್ನಡ, ಹರಿಜನರ ಕನ್ನಡ, ನಾಡವರ ಕನ್ನಡಗಳ ಬಗೆಗೆ ಅಧ್ಯಯನಗಳು ನಡೆದಿವೆ.

ಭಾಷಾಶಾಸ್ತ್ರಜ್ಞರ ಪ್ರಕಾರ ಪ್ರತಿ ಇಪ್ಪತ್ತು ಕಿಲೋಮೀಟರ್‌ಗಳಿಗೆ ಭಾಷೆ ಬದಲಾಗುವುದು ಎಂದು ಹೇಳಲಾಗಿದೆ. ಹಾಗಾಗಿ ಕನ್ನಡದ ಪ್ರಾದೇಶಿಕ ಪ್ರಭೇದಗಳನ್ನು ಇನ್ನೂ ಹೆಚ್ಚು ಗುರುತಿಸಬಹುದಾಗಿದೆ. ಅಂದರೆ, ಒಂದೊಂದು ತಾಲ್ಲೂಕು ಒಂದೊಂದು ಪ್ರಭೇದದ ಪ್ರದೇಶವಾಗಬಹುದು. ಇದರ ಪ್ರಕಾರ ಕರ್ನಾಟಕದಲ್ಲಿ ಎಷ್ಟು ತಾಲ್ಲೂಕುಗಳಿವೆಯೋ ಅಷ್ಟು ಪ್ರಭೇದ ಭಾಷೆಗಳು ಇವೆ ಎನ್ನಬಹುದು. ಪ್ರಾದೇಶಿಕವಾಗಿ ಕೊಡಗಿನ 'ಗೌಡ ಕನ್ನಡ' ಕರಾವಳಿ ಕನ್ನಡಕ್ಕೆ ಸೇರಿದುದ್ದಾಗಿದೆ. ಕರಾವಳಿ ಕನ್ನಡ ಮಂಗಳೂರು ಜಿಲ್ಲೆ, ಮಡಿಕೇರಿ ಹಾಗೂ ಕಾರವಾರ, ಚಿಕ್ಕಮಗಳೂರು ಜಿಲ್ಲೆಯ ಕೆಲವು ಪ್ರದೇಶಗಳನ್ನೊಳಗೊಂಡಿದೆ. ಅಂದರೆ ಕರಾವಳಿ ಕನ್ನಡವು ಹವ್ಯಕ ಕನ್ನಡ, ಗೌಡಕನ್ನಡ, ಮತ್ತು ಶಿವಳ್ಳಿ ಕನ್ನಡ ಇವುಗಳ ಮಿಶ್ರಣವಾಗಿದೆ. ಉಚ್ಚಾರಣೆ ಶಬ್ದಸಮೂಹ ವ್ಯಾಕರಣ ಪ್ರಕ್ರಿಯೆಯಲ್ಲಿ ಶಿಷ್ಟ ಕನ್ನಡಕ್ಕಿಂತ ಕೆಲವು ಭಿನ್ನತೆ ತೋರಿ ಬರುವ ದೃಷ್ಟಿಯಿಂದ ಗೌಡಕನ್ನಡವನ್ನು ಕನ್ನಡ ಭಾಷೆಯ ಉಪಭಾಷೆ ಎಂದು ಗುರುತಿಸಲಾಗಿದೆ.

ಭಾಷಿಕ ಸ್ವರೂಪದಲ್ಲಿ ಗೌಡ ಕನ್ನಡಕ್ಕೆ ಶಿಷ್ಟಕನ್ನಡದೊಂದಿಗೆ ನಿಕಟತೆ ಇದೆ. ಈ ದೃಷ್ಟಿಯಿಂದ ಗೌಡ ಕನ್ನಡ ಶಿಷ್ಟಕನ್ನಡದಿಂದ ನಿಷ್ಪನ್ನಗೊಂಡ ಭಾಷೆ ಎಂದು ಗುರುತಿಸಬಹುದಾಗಿದೆ. ಅಂದರೆ, ಗೌಡ ಕನ್ನಡ ಶಿಷ್ಟ ಕನ್ನಡದೊಂದಿಗೆ ಕುತೂಹಲಕಾರಿಯಾದ ಸಂಬಂಧ ಹೊಂದಿದೆ. ಸಾಮಾಜಿಕವಾಗಿ ಗೌಡ ಜನಾಂಗದ್ದೇ ಭಾಷೆಯಾಗಿರುವ ಗೌಡ ಕನ್ನಡದ ಮೂಲವನ್ನು ಆ ಜನಾಂಗದ ಮೂಲದಲ್ಲಿ ಕಂಡುಕೊಳ್ಳಬೇಕಾಗಿದೆ. ಕೊಡಗಿನಲ್ಲಿ ಈ ಭಾಷೆ ಲಾಲಿತ್ಯದಿಂದ ಕೂಡಿದೆ. ಹಾಗೂ ಇಲ್ಲಿ ಕೊಡವ ಭಾಷೆಯ ಪ್ರಭಾವವೂ ಕಂಡುಬರುತ್ತದೆ. ಹಾಗೆಯೇ ಹವ್ಯಕ ಭಾಷೆಯ ಪ್ರಭಾವವೂ ಇದರ ಮೇಲಿದೆ.

ಉದಾ: 'ಅಂತೆ' ಅರ್ಥದ ಗಡ ಪದ ಬಳಕೆ ಹವ್ಯಕ ಭಾಷೆಯಲ್ಲಿಯೂ ಇದೆ.

ಹೋತ್‌ಗಡ (ಹೋಯಿತಂತೆ)

ಅಂವಬಾತ್‌ಗಡ (ಅವನು ಬಂದನಂತೆ) ಇತ್ಯಾದಿ.

ಈ ಪದ ಹಳಗನ್ನಡ ಪದವಾದ್ದರಿಂದ ಗೌಡಕನ್ನಡಕ್ಕೆ ಅವು ನೇರ ಹಳಗನ್ನಡದಿಂದ ಬಂದಿರುವ ಸಾಧ್ಯತೆಯನ್ನು ಕೂಡ ಒಪ್ಪಬೇಕಾಗುತ್ತದೆ.

The Annual Oriantal Research Institute, Madras ನಲ್ಲಿ ಒಂದು ಭಾಷಾ ಗೋಷ್ಠಿಯ ಸಂದರ್ಭದಲ್ಲಿ ಪ್ರೊ.ಎಂ.ಮರಿಯಪ್ಪ ಭಟ್ಟರು ಅರೆಭಾಷೆಯನ್ನು 'ಗೌಡ ಕನ್ನಡ' ಎಂದು ಪ್ರಸ್ತಾಪಿಸಿದನ್ನು ಈ ಹಿಂದೆಯೇ ಹೇಳಲಾಗಿದೆ. ಹೀಗೆಂದು ದಾಖಲಿಸಿದ ಅವರು ಈ ಹೆಸರಿಗೆ ಇರುವ ತೊಡಕನ್ನು ಪ್ರಸ್ತಾಪಿಸುತ್ತಾರೆ. ಅಂದರೆ "ಸಾಮಾಜಿಕವಾಗಿ ಒಂದೇ ಆಗಿರುವ ಗೌಡರು ಎಲ್ಲರೂ ಈ ಭಾಷೆಯನ್ನು ಆಡುವುದಿಲ್ಲ. ಗೌಡರ ಭಾಷೆ ಬೇರೆ ಬೇರೆಯಾದರಿಂದ ಇದನ್ನು ಅಧಿಕೃತವಾಗಿ ಗೌಡರ ಭಾಷೆ ಎನ್ನುವುದಿಲ್ಲ. ಹವ್ಯಕ ಮುಂತಾದ ಪ್ರಭೇದಗಳಲ್ಲಿ ಆ ಸಮಾಜದಲ್ಲಿನ ಎಲ್ಲರೂ ಒಂದೇ ಮಾತನ್ನು ಆಡುತ್ತಾರೆ. ಈ ಪರಿಮಿತಿಯಲ್ಲಿ ಅರೆಭಾಷೆಯನ್ನು ಗೌಡಕನ್ನಡ ಎಂದು ಬಳಸಬಹುದು ಎಂದು ತೀರ್ಮಾನಿಸಿದರು."

ವೈಜ್ಞಾನಿಕವಾಗಿ ಕನ್ನಡದ ಪ್ರಭೇದವಾದ ಗೌಡಕನ್ನಡ ಭಾಷೆಯನ್ನು ಅಧ್ಯಯನಕ್ಕೊಳಪಡಿಸಿದವರು ಪ್ರೊ.ಕೆ.ಕುಶಾಲಪ್ಪ ಗೌಡರು. ೧೯೭೦ರಲ್ಲಿ ಇದು 'ಗೌಡ ಕನ್ನಡ' ಎಂಬ ಶೀರ್ಷಿಕೆಯಲ್ಲಿ ಅಣ್ಣಾಮಲೈ ವಿಶ್ವವಿದ್ಯಾಲಯದಿಂದ ಇಂಗ್ಲಿಷಿನಲ್ಲಿ ಪ್ರಕಟವಾಗಿದೆ. ಇದು ಗೌಡಕನ್ನಡ ಕುರಿತಾದ ಅಧಿಕೃತ ಆಕರ ಗ್ರಂಥವಾಗಿದೆ. ಇದರಲ್ಲಿ ಗೌಡಕನ್ನಡದ ವಿವಿಧ ಅಂಶಗಳನ್ನು ಧ್ವನಿಮಾ, ಸಂಧಿ, ನಾಮ, ಸರ್ವನಾಮ, ಕ್ರಿಯಾಪದ ಹೀಗೆ ಅಧ್ಯಯನಿಸಿದ್ದಾರೆ.

ಮುಂದೆ ಗೌಡಕನ್ನಡದ ಕುರಿತಾದ ಅನೇಕ ಬಿಡಿ ಬರಹಗಳು ಬಂದಿವೆ. ಹಾಗೂ ಕೆಲವು ಕಡೆ ಗೌಡ ಕನ್ನಡದ ಉಲ್ಲೇಖಗಳಾಗಿವೆ. ಮೈಸೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆಯ ಮೊದಲನೆಯ ಸಂಪುಟದಲ್ಲಿ ಕನ್ನಡ ಉಪಭಾಷೆಗಳ ಬಗ್ಗೆ ಬರೆಯುವ ಸಂದರ್ಭದಲ್ಲಿ ಶ್ರೀ.ಎಸ್. ಎಸ್. ಯದುರಾಜನ್(೧೯೭೮) ಅವರು 'ಗೌಡ ಕನ್ನಡ'ದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ ಇವರ ಈ ಭಾಷೆಯ ಸ್ವರೂಪದ ಕುರಿತು ತಿಳಿಸಿಲ್ಲ. ಕೇವಲ ಈ ಭಾಷೆಯನ್ನು ಕನ್ನಡ ಉಪಭಾಷೆ ಎಂದು ಹೇಳಿದ್ದಾರೆ. ಎನ್.ಲಲಿತ(೧೯೭೮) ಅವರು 'ಕನ್ನಡದ ಉಪಭಾಷೆ ಗೌಡಕನ್ನಡ' ಎಂಬ ಲೇಖನವನ್ನು ಬರೆದಿದ್ದಾರೆ. ಇಲ್ಲಿ ಅವರು ಗೌಡ ಕನ್ನಡದ ವೈಶಿಷ್ಟ್ಯಗಳನ್ನು ದಾಖಲಿಸುವ ಪ್ರಯತ್ನ ಮಾಡಿದ್ದಾರೆ.

೧೯೭೮ರಲ್ಲಿ ಜರುಗಿದ ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲಾ ಗೌಡ ಸಮ್ಮೇಳನ, ಸುಳ್ಯ ಇದರ ಸ್ಮರಣ ಸಂಚಿಕೆ 'ವೀಳ್ಯ'ದಲ್ಲಿ ಪ್ರೊ. ಕೆ. ಕುಶಾಲಪ್ಪಗೌಡರು 'ಗೌಡ ಕನ್ನಡ' ಎಂಬ 'ಕನ್ನಡ ಪ್ರಭೇದ' ಎಂಬ ಲೇಖನವನ್ನು ಬರೆದಿದ್ದಾರೆ. ಈ ಲೇಖನದಲ್ಲಿ ಇವರು ಗೌಡಕನ್ನಡದ ವೈಶಿಷ್ಟ್ಯಗಳನ್ನು ಬರೆದಿದ್ದಾರೆ. ಜಿ. ರಾಮಸ್ವಾಮಿಯವರು ತಮ್ಮ ಕೃತಿ 'ಕನ್ನಡ ಭಾಷಾನುಯೋಗ'ದಲ್ಲಿ ಕನ್ನಡದ ಉಪಭಾಷೆಗಳು, ಕಾಲ, ವಿಭಕ್ತಿಗಳು ಇವುಗಳನ್ನು ವಿವೇಚಿಸುವಾಗ ಗೌಡ ಕನ್ನಡವನ್ನು ಪರಿಗಣಿಸಿದ್ದಾರೆ. ಗೌಡ ಸಮಾಜ, ಇವರ ಪ್ರಕಟಣೆಯ 'ಕಲ್ಯಾಣ' ಸ್ಮರಣ ಸಂಚಿಕೆಯಲ್ಲಿ ಡಿ.ಜಿ.ನಡ್ಯರವರು 'ಗೌಡ ಜನಾಂಗ ಒಂದು ಐತಿಹಾಸಿಕ ಅವಲೋಕನ' ಎಂಬ ಲೇಖನ ಬರೆದಿದ್ದಾರೆ. ಇದು ಗೌಡ ಜನಾಂಗದ ಮೂಲದ ಕುರಿತಾಗಿ ಕೆಲ ಮಾಹಿತಿ ನೀಡುತ್ತದೆ.

೧೯೭೬ರಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಡಗು ಜಿಲ್ಲಾ ಗೌಡ ಸಮ್ಮೇಳನದ ಸ್ಮರಣ ಸಂಚಿಕೆಯಲ್ಲಿ ಡಾ. ಪುರುಷೋತ್ತಮ ಬಿಳಿಮಲೆಯವರು 'ಬೊಜ್ಜ : ಸಾವಿನ ಸಾಂಕೇತಿಕ ಪ್ರತಿನಿಧಿಕರಣ' ಎಂಬ ಲೇಖನದಲ್ಲಿ ಗೌಡರು ಸಾವಿನ ಕುರಿತಾಗಿ ನಡೆಸುವ ಸಂಸ್ಕಾರದ ಸಮಗ್ರ ವಿವರಗಳನ್ನು ಬರೆದಿದ್ದಾರೆ. ಹಾಗೂ ೧೯೯೦ರಲ್ಲಿ ಇವರು ಬರೆದು ಪ್ರಕಟಿಸಿರುವ ಕರಾವಳಿ ಜಾನಪದ ಕೃತಿಯಲ್ಲಿ ಗೌಡರ ಮದುವೆ – ಹಸಿವು ಕಾಮಗಳ ಸಮನ್ವಯ ಎಂಬ ಭಾಗವು ಗೌಡರ ವಿವಾಹದ ವಿವರಗಳನ್ನು ನೀಡುತ್ತದೆ. ಕೆ. ಚಿನ್ನಪ್ಪಗೌಡರ ಸಂಪಾದಕತ್ವದಲ್ಲಿ ೨೦೦೩ ರಲ್ಲಿ ಪ್ರಕಟಗೊಂಡ 'ಗೌಡ ಜನಾಂಗ – ಇತಿಹಾಸ ಮತ್ತು ಸಂಸ್ಕೃತಿ' ಕೃತಿಯಲ್ಲಿ ಪೂವಪ್ಪ ಕಣಿಯೂರು ಬರೆದಿರುವ 'ದಕ್ಷಿಣ ಕನ್ನಡ ಜಿಲ್ಲಾ ಗೌಡರ ಐನ್ ಮನೆಗಳು' ಎಂಬ ಲೇಖನವಿದೆ. ಇದು ಗೌಡರ ಮನೆಯ ವಾಸ್ತುಶೈಲಿ ವೈಶಿಷ್ಟ್ಯಗಳ ಬಗ್ಗೆ ತಿಳಿಸುತ್ತದೆ. ಇವೇ ಅಲ್ಲದೆ, ಹಲವು ಬಿಡಿ ಲೇಖನಗಳು ಈ

ಭಾಷೆಯ ಹಿನ್ನಲೆಯಲ್ಲಿ ಬಂದಿವೆ. ಆದರೆ, ಅವು ಈ ಭಾಷೆಯ ಆಂತರಿಕ ಸ್ವರೂಪ ವಿಶ್ಲೇಷಣೆಯನ್ನು ಹೊಂದಿರದೆ, ಭಾಷಾಭಿಮಾನ, ತುಡಿತವನ್ನೊಳಗೊಂಡುವುಗಳಾಗಿವೆ. ಅವುಗಳೆಂದರೆ, ಎ.ಕೆ.ಹಿಮಕರ ಅವರ 'ಪುರುಷ' ಗೌಡ ಕನ್ನಡದ ಮೊದಲ ನಾಟಕ. ಸೂದನ ಈರಪ್ಪರವರ ಸಂಪಾದಕೀಯದಲ್ಲಿ 'ಗೌಡದನಿ' ಮೊದಲ ಪತ್ರಿಕೆ ಮತ್ತು ಪಟ್ಟಡ ಪ್ರಭಾಕರರವರ 'ಕೊಡುಗು ಸಂಗಾತಿ' ಪಾಕ್ಷಿಕ ಪತ್ರಿಕೆ. ಇವೆರಡೂ ಕಾರಣಾಂತರಗಳಿಂದ ಹೆಚ್ಚು ಕಾಲ ನಡೆಯಲಿಲ್ಲ. ನಂತರ ಹೊದ್ದೆಟ್ಟಿ ಭವಾನಿಶಂಕರರ ಗೌಡ ಕನ್ನಡದಲ್ಲಿ 'ಸಂತೃಪ್ತಿ' ಕವನ ಸಂಕಲನ ಬಿಡುಗಡೆಯಾಯಿತು. ಬಾರೆಯಂಡ ಜೋಯಪ್ಪ ಅವರು ಗೌಡ ಕನ್ನಡದಲ್ಲಿ 'ಚಾಂಪಾ' ಸಣ್ಣಕತೆಗಳನ್ನು ಬರೆದಿದ್ದಾರೆ. ಯಶವಂತ ಕುಡೆಕಲ್ಲು ಇವರು ಗೌಡ ಕನ್ನಡದ ಕವನಗಳನ್ನು ಪ್ರಕಟಿಸಿದ್ದಾರೆ. ಗೌಡ ಕನ್ನಡದ ಮೂಲ ಕವಿಗಳಾದ ಶ್ರೀ ಹೊದ್ದೆಟ್ಟಿ ಭವಾನಿಶಂಕರ್, ಕೂಡಕಂಡಿರ ಹೊನ್ನವ್ವ, ಕುಲ್ಲಚನ ಕಾರ್ಯಪ್ಪ ಮೊದಲಾದವರು ಅನೇಕ ಲೇಖನಗಳು, ಕಥೆಗಳನ್ನು ಬರೆದಿದ್ದಾರೆ. ಗೌಡ ಕನ್ನಡದ ವ್ಯಾಕರಣದ ರಚನೆಗಳು ಇನ್ನೂ ಆಗಿಲ್ಲ. ಇದರ ಶಬ್ದಕೋಶ ರಚನೆಯ ಸಿದ್ಧತೆ ನಡೆದಿದೆ.

ಇವೇ ಅಲ್ಲದೇ ಮೌಖಿಕವಾಗಿ ಜನಪದ ಕತೆಗಳು, ಗಾದೆಗಳು, ಒಗಟುಗಳೂ ಇವೆ. ಇವುಗಳನ್ನು ಸಂಗ್ರಹಿಸಿ ಅಕ್ಷರದಲ್ಲಿ ದಾಖಲಿಸುವ ಕೆಲಸ ನಡೆದಿಲ್ಲ. ಇಲ್ಲಿ ಬರವಣಿಗೆಗಾಗಿ ಕನ್ನಡ ಲಿಪಿಯನ್ನು ಉಪಯೋಗಿಸಿದರೂ ಇದರ ಉಚ್ಚಾರವನ್ನು ಬರವಣಿಗೆಯಲ್ಲಿ ತೋರಿಸುವುದು ಕಷ್ಟಕರವಾದುದಾಗಿದೆ. ಗೌಡ ಕನ್ನಡದಲ್ಲಿ ಗಾದೆ, ಒಗಟು, ಸೋಬಾನೆ ಮುಂತಾದ ಜನಪದ ಸಾಹಿತ್ಯ ಪ್ರಕಾರವೂ ಇವೆ. ಉದಾಹರಣೆಗೆ :

ಗಾದೆಗಳು:

ಐಶ್ವರ್ಯ ಬಾಕನ ಅರ್ಧರಾತ್ರಿಲಿ ಕೊಡೆ ಹಿಡ್‌ದೊಗಡ. (ಐಶ್ವರ್ಯ ಬಂದಾಗ ಅರ್ಧರಾತ್ರಿಯಲ್ಲಿ ಕೊಡೆ ಹಿಡಿದರಂತೆ).

ನಿಲ್‌ಗಿದ ಕೂಸಿಗೆ ಅನ್ನ ಇಲ್ಲೆ. (ನಿದ್ರಿಸಿದ ಮಗುವಿಗೆ ಊಟವಿಲ್ಲ).

ಒಗಟುಗಳು:

ಕಣ್ಣ್ ಕಾಣದ ಅಜ್ಜಿ ಪಾಲದಾಟುದು (ಉಂಬುಳು) – ಬೆಗಣೆ.

ಅವ್ವ ಕೊಟ್ಟ ಮಂದ್ರಿ ಮಡ್ಚಿಕಾದುಲೆ, ಅಪ್ಪ ಕೊಟ್ಟ ದುಡ್ಡು ಲೆಕ್ಕ ಮಾಡಿಕಾದುಲೆ – ಆಕಾಶ, ನಕ್ಷತ್ರ ಇತ್ಯಾದಿ.

ಗೌಡ ಕನ್ನಡದ ಸಂಸ್ಕೃತಿ, ಚಲನಶೀಲತೆ ಕುರಿತಂತೆ ಅನೇಕ ಸಂಶೋಧನೆಗಳು ನಡೆದಿವೆ. ಸುಳ್ಯ ಪರಿಸರದ ಗೌಡ ಜನಾಂಗದ ಒಂದು ಸಾಂಸ್ಕೃತಿಕ ಅಧ್ಯಯನ (ಡಾ.ಪುರುಷೋತ್ತಮ ಬಿಳಿಮಲೆ), ಗೌಡ ಕನ್ನಡದ ಜನಪದ ಕತೆಗಳು (ಡಾ. ವಿಶ್ವನಾಥ ಬದಿಕಾನ), ಕೊಡಗಿನ ಗೌಡ ಸಮುದಾಯದ ಸಾಂಸ್ಕೃತಿಕ ಅನನ್ಯತೆ ಮತ್ತು ವಿಚಾರಶೀಲತೆ. (ಶ್ರೀಮತಿ ಸರಸ್ವತಿ ಪ್ರಕಾಶ್ ಕೋರನ) ಹೀಗೆ ಪಿಎಚ್.ಡಿ. ಮತ್ತು ಎಂ.ಫಿಲ್ ಪದವಿಗಳಿಗಾಗಿ ಅಧ್ಯಯನ ನಡೆದಿದ್ದು ಪದವಿ ನೀಡಲಾಗಿದೆ.

ಗೌಡ ಕನ್ನಡದ ಪರಿಸರದಲ್ಲಿ ಕನ್ನಡ ಸಾಹಿತ್ಯದಲ್ಲಿ ಶಕ್ತಿಯುತವಾದ ಬರಹಗಾರರಿದ್ದಾರೆ. ಅವರಲ್ಲಿ ಕೆ.ಆರ್. ವಿದ್ಯಾಧರ ಬಿಡ್ಡಡ್ಕ, ಕೆ.ಆರ್.ತೇಜಕುಮಾರ್ ಬಿಡ್ಡಡ್ಕ, ವೆಂಕಟ್ ಮೊಂಟಡ್ಕ, ಜಯಮ್ಮ ಚೆಟ್ಟಿಮಾಡ ಇವರುಗಳು ಪ್ರಮುಖರು. ಇವರುಗಳು ತಮ್ಮ ಬರಹಗಳಲ್ಲಿ ಗೌಡ ಭಾಷೆಯನ್ನು ಬಳಸುವ ಪ್ರಯತ್ನ ಮಾಡಿದ್ದಾರೆ. ಒಟ್ಟಿನಲ್ಲಿ ನಡೆದಿರುವ ಅಧ್ಯಯನಗಳಿಂದ ಗೌಡ ಕನ್ನಡವನ್ನು ಸಮಗ್ರವಾಗಿ ತಿಳಿಯಲು ಆಕರ ಸಾಮಾಗ್ರಿಗಳಿಲ್ಲ.

ಅಧ್ಯಾಯ ೩

ಗೌಡ ಕನ್ನಡದ ಭಾಷಾ ವೈಶಿಷ್ಟ್ಯಗಳು

ಕೊಡಗಿನ ಗೌಡ ಜನಾಂಗದವರು "ಗೌಡ ಕನ್ನಡ" ಭಾಷೆಯನ್ನು ಆಡುತ್ತಾರೆ. ಇದು ಕನ್ನಡದ ಉಪಭಾಷೆಯಾಗಿದೆ. ಇದು ಶಿಷ್ಟಕನ್ನಡಕ್ಕಿಂತ ಧ್ವನಿ, ವ್ಯಾಕರಣ, ವಾಕ್ಯರಚನೆ ಇವುಗಳಲ್ಲಿ ಸಾಕಷ್ಟು ವ್ಯತ್ಯಾಸವನ್ನು ಹೊಂದಿದೆ. ಶಿಷ್ಟ ಭಾಷೆಯೊಂದಿಗೆ ಹೋಲಿಸುವಾಗ ಉಚ್ಚಾರಣೆ, ಶಬ್ದಸಮೂಹ, ವ್ಯಾಕರಣ ಪ್ರಕ್ರಿಯೆಗಳಲ್ಲಿ ಕೆಲವೊಂದು ಭಿನ್ನತೆ ತೋರಿ ಬರುವುದು ಉಪಭಾಷೆಯ ಪ್ರಧಾನಗುಣಗಳು. ಈ ದೃಷ್ಟಿಕೋನದಿಂದ ಗೌಡ ಕನ್ನಡವನ್ನು ಕನ್ನಡ ಭಾಷೆಯ ಉಪಭಾಷೆ ಎಂದು ಭಾಷಾ ವೈಜ್ಞಾನಿಕ ವಿಶ್ಲೇಷಣೆಯ ಸಂದರ್ಭದಲ್ಲಿ ಗುರುತಿಸಲಾಗಿದೆ. ಒಂದು ಉಪಭಾಷೆಯ ಹುಟ್ಟು ಮುಖ್ಯವಾಗಿ ಅನ್ಯಭಾಷಾ ಸಂಪರ್ಕ, ಪರಿಸರ ಮತ್ತು ಸಂಸ್ಕೃತಿಯ ಪ್ರಭಾವ, ಸಾಮಾಜಿಕ, ಭೌಗೋಳಿಕ ಕಾರಣಗಳು ಇವುಗಳಿಂದಾಗುತ್ತದೆ. ಗೌಡಕನ್ನಡವು ಶಬ್ದಸಮೂಹ ಹಾಗೂ ವ್ಯಾಕರಣ ಸಂಬಂಧಿ ವಿಚಾರಗಳಲ್ಲಿ ಕನ್ನಡಕ್ಕೆ ಸಮೀಪವಾಗಿದೆ. ಅದೇ ರೀತಿ ಶಿಷ್ಟ ಕನ್ನಡಕ್ಕಿಂತ ಅನೇಕ ಬಗೆಯಾದ ಭಿನ್ನತೆಯನ್ನು ಹೊಂದಿದೆ. ಈ ಅಂಶಗಳನ್ನು ಪರಿಗಣಿಸಿ, ಗೌಡಕನ್ನಡವು ಭಿನ್ನತೆ ಮತ್ತು ವೈವಿಧ್ಯಗಳಿಂದ ವೈಶಿಷ್ಟ್ಯಪೂರ್ಣವಾಗಿದೆ ಎಂದು ಹೇಳಬಹುದು. ಗೌಡಕನ್ನಡ ಭಾಷೆಯು ತನ್ನ ಆಂತರಿಕ ಸಂರಚನೆಗಳಲ್ಲಿ ಹೊಂದಿರುವ ಕೆಲವೊಂದು ವೈಶಿಷ್ಟ್ಯಗಳಿಂದಾಗಿ ಇತರ ಭಾಷೆಗಳಿಗಿಂತ ಭಿನ್ನವಾಗಿದೆ.

ಸ್ವರಗಳು:

ಗೌಡ ಕನ್ನಡದಲ್ಲಿ ಶಿಷ್ಟ ಕನ್ನಡ ವರ್ಣ ಮಾಲೆಯಲ್ಲಿನ ಸ್ವರ ಹಾಗೂ ವ್ಯಂಜನಗಳೇ ಬಹುತೇಕ ಕಂಡು ಬರುತ್ತದೆ. ಆದರೆ, ಇದರಲ್ಲಿ ಮಹಾಪ್ರಾಣಗಳಿಲ್ಲ. ಇದರಲ್ಲಿ ಸಂಸ್ಕೃತದಿಂದ ಎರವಲಾಗಿ ಬಂದ ಪದಗಳಲ್ಲಿಯೂ ಕೂಡ ಮಹಾಪ್ರಾಣಗಳ ಬಳಕೆ ಇಲ್ಲ.

ಸ್ವರಗಳು:

ಹ್ರಸ್ವ		ದೀರ್ಘ	
ಇ(i)	ಉ(u)	ಈ(ii)	ಊ(ui)
ಎ(e)	ಒ(o)	ಏ(ei)	ಓ(oi)
ಅ(a)		ಆ(ai)	

ವ್ಯಂಜನಗಳು:

ಪ್(p) ತ್(t) ಟ್(t) ಚ್(c) ಕ್(k)

ಬ್(b) ದ್(d) ಡ್(d) ಜ್(j) ಗ್(g)

ಮ್(m) ನ್(n) ಣ್(n) ಞ್(n) ಙ್(n)

(w) ಯ್(y)

ಸ್(s) ಹ್(h)

ಲ್(l) ಳ್(l)

ರ್(t)

ಗೌಡ ಕನ್ನಡದಲ್ಲಿ ಅನುನಾಸಿಕಗಳು ಧ್ವನಿಮಾಗಳಾಗಿ ದ್ವಿತ್ವರೂಪದಲ್ಲಿ ಸಹಜವಾಗಿ ಬಳಕೆಯಲ್ಲಿವೆ.

ಉದಾ: ಮಙ (ಮಗ)

ಹಙ್ಞ (ಸ್ವಲ್ಪ)

ನೊಙ (ನೊಗ)

ಕೊಙ್ಞಲೆ (ತೊದಲುಮಾತು)

ಗೌಡಕನ್ನಡದ ಅವರ್ಗೀಯ ವ್ಯಂಜನಗಳಲ್ಲಿ "ಸ, ಶ, ಷ" ಎಂಬ ಊಷ್ಮಗಳ ಬದಲಿಗೆ ಒಂದೇ "ಸ" ಮಾತ್ರ ಬಳಕೆಯಲ್ಲಿದೆ. ಉದಾ: ಭಾಸೆ, ಆಸೆ, ಕುಸಿ, ಸಂತೋಷ, ಸಂಕ.

ಲಿಂಗ ವಿವಕ್ಷೆ :

ಗೌಡ ಕನ್ನಡದಲ್ಲಿ ಕಂಡುಬರುವ ಇನ್ನೊಂದು ವೈಶಿಷ್ಟ್ಯವೆಂದರೆ ಸ್ತ್ರೀಲಿಂಗ ವಿವಕ್ಷೆ. ಗೌಡ ಕನ್ನಡದ ಲಿಂಗ ವಿವಕ್ಷೆಯನ್ನು ವಿವಕ್ಷಿಸಿ ಎಸ್.ವಿ.ಷಣ್ಮುಗಂರವರು, ಇದು ಉತ್ತರ ದ್ರಾವಿಡದ ಬ್ರಾಹೂಈ ಭಾಷೆಗೆ ತೀರ ಹತ್ತಿರವಾಗಿದೆ ಎಂದು ಉಲ್ಲೇಖಿಸಿರುವುದನ್ನು ಪ್ರೊ. ಕೆ.ಕುಶಾಲಪ್ಪಗೌಡರು ಪ್ರಸ್ತಾಪಿಸುತ್ತಾರೆ. (ಬರಹಗಳಲ್ಲಿ ದಾಖಲಿಸಿಲ್ಲ).

ಗೌಡ ಕನ್ನಡದಲ್ಲಿ ಪುಲ್ಲಿಂಗ, ಪುಲ್ಲಿಂಗೇತರ, ಸರ್ವನಾಮಗಳಲ್ಲಿ ಸ್ತ್ರೀಲಿಂಗಕ್ಕೆ ಪ್ರತ್ಯೇಕ ಪದ ಇಲ್ಲ. ಪುಲ್ಲಿಂಗ ಮತ್ತು ಪುಲ್ಲಿಂಗೇತರ ಎಂಬ ಎರಡು ವಿಧಗಳಿವೆ.

ಉದಾ: ಅಂವ (ಅವನು), ಇಂವ (ಇವನು)

ಅದ್ (ಅವಳು ಅಥವಾ ಅದು) ಇದ್ (ಇವಳು ಅಥವಾ ಇದು)

ಸರ್ವನಾಮಗಳಲ್ಲಿ ಪುಲ್ಲಿಂಗ ಮತ್ತು ಪುಲ್ಲಿಂಗೇತರಗಳಿಗೆ ಸಂವಾದಿಯಾಗಿ ಬರುವ ಕ್ರಿಯಾಪದಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲದೆ, ಏಕ ರೀತಿಯ ನಪುಂಸಕ ಪ್ರತ್ಯಯಾಂತ ರೂಪಬರುತ್ತದೆ.

ಉದಾ: ಅಂವ ಬಾತ್ (ಅವನು ಬಂದಿತು)

ಇಂವ ಬಾತ್ (ಇವನು ಬಂದಿತು)

ಅದ್ ಬಾತ್ (ಅವಳು ಅಥವಾ ಅದು ಬಂದಿತು)

ಇದ್ ಬಾತ್ (ಇವಳು ಅಥವಾ ಇದು ಬಂದಿತು)

ಗೌಡ ಕನ್ನಡದಲ್ಲಿ ಪುಲ್ಲಿಂಗ ಮತ್ತು ಪುಲ್ಲಿಂಗೇತರ ಎಂಬ ಭೇದವಿದ್ದರೂ ಬಹುವಚನದಲ್ಲಿ ಆ ವ್ಯತ್ಯಾಸವಿಲ್ಲ.

ಉದಾ: ಗೌಡ ಕನ್ನಡ – ಅವು/ಇವು ಬಂದೊ (ಮನುಷ್ಯರು/ಪ್ರಾಣಿಗಳು)

ಶಿಷ್ಟಕನ್ನಡ – ಅವರು/ಇವರು ಬಂದರು (ಗಂಡಸರು/ಹೆಂಗಸರು)

ಗೌಡಕನ್ನಡದ ಸರ್ವನಾಮಗಳಲ್ಲಿ ಸ್ತ್ರೀಲಿಂಗಕ್ಕೆ ಸ್ಥಾನವಿಲ್ಲ. ಆದರೆ, ತದ್ಧಿತಾಂತಗಳಲ್ಲಿ ಸ್ತ್ರೀಲಿಂಗಕ್ಕೆ ಪ್ರತ್ಯಯ ರೂಪವಿರುವುದು ಕಂಡುಬರುತ್ತದೆ.

ಉದಾ: ಪ್ರತ್ಯಯ ಇ (i)

ಕುರುಡಿ – Kurd-i

ಕುಳ್ಳಿ – Kuḷḷ-i

ಕುಂಟಿ – Kunṭ-i

ಪೊಟ್ಟಿ – Pott-i

ಪ್ರತ್ಯಯ ಎ (e)

ಜಾಣೆ – Jaṇ-e

ಕಳ್ಳೆ – Kaḷḷ-e

ಪ್ರತ್ಯಯ ತಿ (ti)

ನಂಟಿತಿ – naṇṭa-ti

ಬಂಟತಿ – banṭa-ti

ಮೊಡ್ಡೋಳ್ತಿ – moḍḍoḷ-ti

ಹಾರ್‌ತಿ – hair-ti

ವಿಭಕ್ತಿ ಪ್ರತ್ಯಯಗಳು :

ಗೌಡ ಕನ್ನಡದಲ್ಲಿ ಸಾಮಾನ್ಯವಾಗಿ ಶಿಷ್ಟ ಕನ್ನಡದಲ್ಲಿರುವಂತೆಯೇ ವಿಭಕ್ತಿಗಳು ಬಳಕೆಯಲ್ಲಿವೆ.

ಪ್ರಥಮಾ ವಿಭಕ್ತಿ ಪ್ರತ್ಯಯಗಳು:

ಹಳಗನ್ನಡ ರೂಪ 'ಮ್' ಹೊಸಗನ್ನಡದಲ್ಲಿ 'ಉ' ಗೌಡಕನ್ನಡದಲ್ಲಿ ಪ್ರಥಮಾ ವಿಭಕ್ತಿಗೆ ಪ್ರಕೃತಿಯೇ ವಿಭಕ್ತ್ಯಂತ ರೂಪವಾಗುತ್ತದೆ.

ಉದಾ: ಮರ, ಮಜ್ಜ, ರಾಧ ಇತ್ಯಾದಿ.

ದ್ವಿತೀಯಾ ವಿಭಕ್ತಿ ಪ್ರತ್ಯಯಗಳು

ಹಳಗನ್ನಡ ಪ್ರತ್ಯಯ 'ಅಮ್' ಹೊಸಗನ್ನಡದಲ್ಲಿ 'ಅನ್ನು' ಆಗಿದೆ. ಗೌಡ ಕನ್ನಡದಲ್ಲಿ ದ್ವಿತೀಯಾ ವಿಭಕ್ತಿ ಪ್ರತ್ಯಯ 'ನ'(na) ಆಗಿದೆ.

ಉದಾ: ಅಕ್ಕನ – akka-na

ಏಣಿನ – e:ṇi-na

ಕೋಟೆನ – Ko:ṭe-na

ಅಪ್ಪನ – appa-na

ತೃತೀಯಾ ವಿಭಕ್ತಿ ಪ್ರತ್ಯಯಗಳು:

ಹಳಗನ್ನಡದಲ್ಲಿ 'ಇಮ್', 'ಇಂದರಿ', 'ಇಂದೆ' ಎಂದು ಮೂರು ರೂಪಗಳನ್ನು ಕೇಶಿರಾಜನು ನೀಡುತ್ತಾನೆ. ಹೊಸಗನ್ನಡದಲ್ಲಿ 'ಇಂದ' ಎಂಬ ಒಂದೇ ರೂಪವಿದೆ. ಗೌಡಕನ್ನಡದಲ್ಲಿ 'ಂದ' (nda) ತೃತೀಯಾ ವಿಭಕ್ತಿ ಪ್ರತ್ಯಯವಾಗದೆ.

ಉದಾ: ಏಣಿಂದ – e:ṇi-nda

ಕೋಟುಂದ – ko:ṭu-nda

ಮರಂದ – mara-nda

ಕೊತ್ತಿಂದ – kotti-nda

ಚತುರ್ಥಿ ವಿಭಕ್ತಿ ಪ್ರತ್ಯಯಗಳು:

ಕನ್ನಡದಲ್ಲಿ ಚತುರ್ಥಿ ವಿಭಕ್ತಿಗೆ ಗೆ, ಅಗೆ, ಇಗೆ, ಕೆ, ಅಕ್ಕೆ, ಹೀಗೆ ಹಲವು ರೂಪಗಳಿವೆ. ಗೌಡಕನ್ನಡದಲ್ಲಿಯೂ ಕೆ(ke), ಗೆ(ge) : ಂಗೆ(-nge) ಪ್ರತ್ಯಯಗಳನ್ನು ಹೊಂದಿದೆ.

ಉದಾ: 'ಅ' ಕಾರಾಂತ ನಪುಂಸಕ ಲಿಂಗದ ಪದಗಳಿಗೆ 'ಕೆ' ಪ್ರತ್ಯಯ ಹತ್ತುತ್ತದೆ.

ಮರಕೆ – mara-ke

ಜನಕೆ – jana-ke

ಅವ್‌ಕೆ – ava-ke

ಇದ್‌ಕೆ – ida-ke

'ಇ' ಕಾರಾಂತ ಮತ್ತು 'ಎ' ಕಾರಾಂತ ಪದಗಳಿಗೆ 'ಗೆ' ಪ್ರತ್ಯಯ ಹತ್ತುತ್ತದೆ.

ತಂಗೆಗೆ – tange-ge

ಕತ್ತೆಗೆ – katte-ge

ಕೊತ್ತಿಗೆ – kotti-ge

ಏಣಿಗೆ – e:ṇi-ge

ಸಂಬಂಧ ವಾಚಕಗಳೊಡನೆ 'ಂಗೆ' ಪ್ರತ್ಯಯ ಬಳಕೆಯಾಗುತ್ತದೆ.

ಅಪ್ಪಂಗೆ – appa-nge

ಅಕ್ಕಂಗೆ – akka-nge

ಅವ್ವಂಗೆ – avva-nge

ಅಣ್ಣಂಗೆ – aṇṇa-nge

ಪಂಚಮಿ ವಿಭಕ್ತಿ ಪ್ರತ್ಯಯ:

'ಅತ್ತಣಿಂ' ಹಳಗನ್ನಡ ರೂಪ. ಹೊಸಗನ್ನಡದಲ್ಲಿ 'ಇಂದ' ಆಗಿದೆ. (ತೃತೀಯ 'ಇಂದ'ಕ್ಕಿಂತ ಭಿನ್ನ). ಗೌಡಕನ್ನಡದಲ್ಲೂ '–ಂದ' (-nda) ಪ್ರತ್ಯಯ ಇದು ತೃತೀಯಾ '–ಂದ' ಕ್ಕಿಂತ ಭಿನ್ನವಾಗಿದೆ.

ಉದಾ: ಅಪ್ಪಂದ – appa-nda

ಮರಂದ – mara-nda

ಅದರ್‌ಂದ – ad-ar-nda

ಮನೆಂದ – mane-nda ಇತ್ಯಾದಿ.

ಷಷ್ಠಿ ವಿಭಕ್ತಿ ಪ್ರತ್ಯಯ:

'ಅದ್' ಎಂಬುದು ಹಳಗನ್ನಡ ರೂಪ. ಹೊಸಗನ್ನಡದಲ್ಲಿ 'ಅ' ಎಂದಾಗಿದೆ. ಗೌಡಕನ್ನಡದಲ್ಲಿ 'ನ' (-na) ಎಂದಿದೆ.

ಉದಾ: ಅಪ್ಪನ – appa-na

ಅವ್ವನ – avva-na

ಮನೆನ – mane-na

ಕೊತ್ತಿನ – kotti-na ಇತ್ಯಾದಿ.

ಸಪ್ತಮಿ ವಿಭಕ್ತಿ ಪ್ರತ್ಯಯ:

ಹಳಗನ್ನಡದಲ್ಲಿ 'ಒಳ್' ಪ್ರತ್ಯಯ. ಹೊಸಗನ್ನಡದಲ್ಲಿ 'ಅಲ್ಲಿ' ಎಂದಾಗಿದೆ. ಗೌಡಕನ್ನಡದಲ್ಲಿ '–ಲಿ' (-li) ಹಾಗೂ '–ಹಕ್ಕಲೆ' (-hakkale) ಎಂಬಿವುಗಳು ಸಪ್ತಮಿ ವಿಭಕ್ತಿ ಪ್ರತ್ಯವಾಗಿದೆ.

ಉದಾ: –ಲಿ (-li)

ಮರಲಿ – mara-li

ಅದರ್‌ಲಿ – ad-ar-li

ಮನೆಲಿ – mane-li

ಊರ್‌ಲಿ – ūr-li ಇತ್ಯಾದಿ.

ಜೊತೆಗೆ ಸಪ್ತಮಿಯ ಅರ್ಥದಲ್ಲಿ '–ಹಕ್ಕಲೆ' ಕೂಡ ಬಳಕೆಯಲ್ಲಿದೆ.

ಉದಾ: ನನ್ನ ಹಕ್ಕಲೆ – nanna-hakkale

ಅಪ್ಪನ ಹಕ್ಕಲೆ – appana-hakkale

ಅವ್ವನ ಹಕ್ಕಲೆ – avvana-hakkale ಇತ್ಯಾದಿ.

ವಿಭಕ್ತಿಗಳು	ಪ್ರತ್ಯಯಗಳು		
ಪ್ರ.ವಿ.	–	ಮರ	ಮಜ
ದ್ವಿ.ವಿ.	–ನ	ಮರನ	ಮಜನ
ತೃ.ವಿ.	–ಂದ	ಮರಂದ	ಮಜಂದ
ಚ.ವಿ.	–ಕೆ.ಗೆ.ಂಗೆ	ಮರಕೆ	ಮಜಂಗೆ
ಪಂ.ವಿ.	–ಂದ	ಮರಂದ	ಮಜಂದ
ಷ.ವಿ.	–ನ	ಮರನ	ಮಜನ
ಸ.ವಿ.	–ಲಿ/ಹಕ್ಕಲೆ	ಮರಲಿ	ಮಜನಹಕ್ಕಲೆ

ಗೌಡಕನ್ನಡದಲ್ಲಿ ದ್ವಿತೀಯಾ ಮತ್ತು ಷಷ್ಠಿ ವಿಭಕ್ತಿ ಪ್ರತ್ಯಯಗಳು ಹಾಗೂ ತೃತೀಯಾ ಮತ್ತು ಪಂಚಮಿ ವಿಭಕ್ತಿ ಪ್ರತ್ಯಯಗಳು ಏಕರೂಪದಲ್ಲಿರುವುದನ್ನು ಕಾಣುತ್ತೇವೆ.

ವಚನಗಳು:

ಗೌಡಕನ್ನಡದಲ್ಲಿ ಶಿಷ್ಟ ಕನ್ನಡದಂತೆ ಏಕವಚನ ಹಾಗೂ ಬಹುವಚನಗಳೆಂಬ ಎರಡು ವಚನಗಳಿವೆ. ಇದರಲ್ಲಿ ಕೆಲವೊಂದು ವ್ಯತ್ಯಾಸವೂ ಇದೆ.

ಗೌಡಕನ್ನಡದಲ್ಲಿ ಬಹುವಚನ ಪ್ರತ್ಯಯಗಳಾಗಿ – 'ಅಂದರ್', '–ಕಳ್' ಪ್ರತ್ಯಯಗಳು ಹಾಗೂ ಸಾಮಾನ್ಯವಾಗಿ 'ಗ' ಮತ್ತು 'ಕ' ಪ್ರತ್ಯಯಗಳು ಬರುತ್ತವೆ.

ಉದಾ: –'ಅಂದರ್'

ಅಪ್ಪಂದ್‌ರ್ (ಅಪ್ಪಂದಿರು)

ಅಣ್ಣಂದ್‌ರ್ (ಅಣ್ಣಂದಿರು)

ಅಕ್ಕಂದ್‌ರ್ (ಅಕ್ಕಂದಿರು)

ತಮ್ಮಂದ್‌ರ್ (ತಮ್ಮಂದಿರು)

–'ಗ'

ದನಗ (ದನಗಳು)

ಜನಗ (ಜನರು)

ರಾಣಿಗ (ರಾಣಿಯರು)

ಮನೆಗ (ಮನೆಗಳು)

–'ಕ'

ಮಕ್ಕ – (ಮಕ್ಕಳು)

ಅಯ್ಯಕ – (ತಾಯಂದಿರು)

ನಾದಿನಿಕ – (ನಾದಿನಿಯರು)

ಸೊಸೆಕ – (ಸೊಸೆಯರು)

ಅತ್ತೆಕ – (ಅತ್ತೆಯರು)

ಇತರೆ:

ಹಳಗನ್ನಡದಲ್ಲಿ ಸಬಿಂದುಕವಾಗಿದ್ದ ಪದಗಳು ನಡುಗನ್ನಡದಲ್ಲಿ ಅಬಿಂದುಕಗಳಾಗಿವೆ. ಗೌಡ ಕನ್ನಡದಲ್ಲಿ ಇಂದು ಈ ಎರಡೂ ರೂಪಗಳು ಬಳಕೆಯಲ್ಲಿವೆ.

ಉದಾ :	ಹ.ಗ.	ನ.ಗ.	ಗೌ.ಕ
	ಅಡಂಗು	ಅಡಗು	ಅಡ್‌ಗ್/ಅಡ್‌ಂಗ್
	ಕಲಂಕು	ಕಲಕು	ಕಲ್‌ಕ್/ಕಲ್‌ಂಕ್

ಹಳಗನ್ನಡದ ಪದಗಳು ಗೌಡಕನ್ನಡದಲ್ಲಿ ಅದೇ ರೀತಿಯಲ್ಲಿ ಪ್ರಯೋಗವಾಗುತ್ತವೆ.

ಉದಾ: ಹೈದ, ಗಡ, ಕೂಸು, ಇಕ್ಕ್, ಹುಗ್ಗೆ, ಕೊತ್ತಿ, ಹಡಪ ಇತ್ಯಾದಿ.

ಕೆಲವು ಹಳಗನ್ನಡದ ಪದಗಳ ಕೊನೆಯ ಅಕ್ಷರಗಳು ಲೋಪವಾಗಿ ಗೌಡಕನ್ನಡದಲ್ಲಿ ಬಳಕೆಯಾಗುತ್ತದೆ. ಇದು ಉಚ್ಚಾರದ ಸೌಲಭ್ಯಕ್ಕಾಗಿ ಆಗಿದೆ ಎನ್ನಬಹುದು.

ಉದಾ:	ಹ.ಗ.	ಗೌ.ಕ.
	ಮಗಳ್	ಮಗ
	ಮಕ್ಕಳ್	ಮಕ್ಕ
	ಅವನ್	ಅಂವ
	ಮರಗಳ್	ಮರಗ ಇತ್ಯಾದಿ

ಶಿಷ್ಟ ಕನ್ನಡದ ಕೆಲವು ಪದಗಳು ಗೌಡಕನ್ನಡದಲ್ಲಿ ಸ್ವಲ್ಪ ಬದಲಾವಣೆಗಳೊಂದಿಗೆ ಅಥವಾ ಅದೇ ರೂಪಾರ್ಥಗಳೊಂದಿಗೆ ಬಳಕೆಯಲ್ಲಿದೆ.

ಉದಾ :	ಶಿ.ಕ.	ಗೌ.ಕ.
	ಬಿಳಿಮ	ಬೊಳ್ಳು
	ಕುಳಿ	ಕುಳಿ
	ಹುರಿ	ಹೊರಿ ಇತ್ಯಾದಿ.

ಶಿಷ್ಟ ಕನ್ನಡದ ವರ್ತಮಾನ ಕಾಲದ ಕ್ರಿಯಾಪದಗಳು ಗೌಡಕನ್ನಡದಲ್ಲಿ ಸಂಕ್ಷೇಪೊಂಡು ಬಳಕೆಯಾಗುತ್ತದೆ.

ಉದಾ:	ಹೋಗುತ್ತೇನೆ	ಪ್ಪೋನೆ
	ತರುತ್ತೇನೆ	ತನ್ನೆ
	ಬರುತ್ತೇನೆ	ಬನ್ನೆ
	ಒರಬೇಕು	ಬಾಕು
	ತರಬೇಕು	ತಾಕು ಇತ್ಯಾದಿ.

ಶಿಷ್ಟ ಕನ್ನಡದ ಕ್ರಿಯಾರಚನೆಗಳಲ್ಲಿ ಮೊದಲ ಸ್ವರ 'ಅ' ಅಥವಾ 'ಉ' ಆಗಿದ್ದರೆ, ಗೌಡ ಕನ್ನಡದಲ್ಲಿ ಅದು 'ಒ' ಆಗುತ್ತದೆ.

ಉದಾ:	ಶಿ.ಕ.	ಗೌ.ಕ.
	ಬಗ್ಗು	ಬೊಗ್ಗು
	ಬಲಿ	ಬೊಲಿ

ಹವ್ಯಕ ಭಾಷೆಯಿಂದಲೂ ಗೌಡ ಕನ್ನಡ ಪ್ರಭಾವಕ್ಕೊಳಗಾಗಿದೆ.

ಉದಾ: ಹೋತ್, ಹೆರ್ಕ್, ಕೂಸ್. ಇತ್ಯಾದಿ.

ಈ ರೀತಿ ಗೌಡಕನ್ನಡ ಕನ್ನಡದ ಉಪಭಾಷೆಯಾಗಿದ್ದು, ಕೊಡಗಿನ ಸಾಂಸ್ಕೃತಿಕ ಪರಿಸರಕ್ಕನುಗುಣವಾಗಿ ತನ್ನದೇ ಆದ ರೀತಿಯ ವಿಶಿಷ್ಟತೆಯನ್ನು ಹೊಂದಿದೆ.

ಅಧ್ಯಾಯ ೪

ಗೌಡ ಕನ್ನಡದ ಕ್ರಿಯಾ ರಚನೆಗಳು

ಕ್ರಿಯಾಪದಗಳು ಭಾಷೆಯ ಬಹು ಮುಖ್ಯವಾದ ಅಂಗ. ಏಕೆಂದರೆ, ಅವು ಘಟನೆಯನ್ನು ಹೇಳುತ್ತವೆ. ಕ್ರಿಯಾ ರಚನೆಗಳಿಲ್ಲದಿದ್ದರೆ ಸಂವಹನ ಆಗುವುದಿಲ್ಲ. ಪ್ರೇರಣಾರ್ಥಕ ಪ್ರತ್ಯಯಗಳು. ಕಾಲವಾಚಕಗಳು ಮತ್ತು ಸರ್ವನಾಮ ಪ್ರತ್ಯಯಗಳು ಐಚ್ಛಿಕವಾಗಿ ಕ್ರಿಯಾಧಾತುಗಳಿಗೆ ಸೇರುತ್ತವೆ. ಸರ್ವನಾಮ ಪ್ರತ್ಯಯಗಳು ಸೇರಿ ಕ್ರಿಯಾಪದಗಳು ಪೂರ್ಣ ಕ್ರಿಯಾಪದಗಳು ಎನ್ನಿಸಿಕೊಳ್ಳುತ್ತದೆ. ಸರ್ವನಾಮ ಪ್ರತ್ಯಯಗಳು ಸೇರದಿರುವ ಕ್ರಿಯಾಪದಗಳು ಅಪೂರ್ಣ ಕ್ರಿಯಾಪದಗಳು. ಅಪೂರ್ಣ ಕ್ರಿಯಾಪದ ಜೊತೆಗೆ ಇನ್ನೊಂದು ಪೂರ್ಣ ಕ್ರಿಯಾಪದ ಬಂದಾಗ ಮಾತ್ರ ವಾಕ್ಯ ಪೂರ್ಣ ಅರ್ಥವನ್ನು ಕೊಡುತ್ತದೆ. ಪೂರ್ಣ ಕ್ರಿಯಾಪದವನ್ನು ಹೊಂದಿದ ವಾಕ್ಯದಲ್ಲಿ ಒಂದು ಕರ್ಮಪದ ಬರುತ್ತದೆ. ಎಲ್ಲ ಕ್ರಿಯಾಪದಗಳು ವಾಕ್ಯದ ನೆಲೆಯಲ್ಲಿ ಸಕರ್ಮಕ ಕ್ರಿಯಾಪದಗಳು ಅಥವಾ ಅಕರ್ಮಕ ಕ್ರಿಯಾಪದಗಳು ಎಂದು ಎರಡು ಪ್ರಧಾನ ವರ್ಗಗಳಾಗುತ್ತವೆ. ಕನ್ನಡದಲ್ಲಿ ಧಾತುವಿಗೆ ವರ್ತಮಾನ ಮತ್ತು ಭವಿಷ್ಯತ್ಕಾಲ ಪ್ರತ್ಯಯಗಳು ನೇರವಾಗಿ ಸೇರುತ್ತವೆ. ಆಗ ಧಾತುವಿನಲ್ಲಿ ಯಾವುದೇ ಬದಲಾವಣೆಗಳಾಗುವುದಿಲ್ಲ. ಆದರೆ, ಭೂತಕಾಲ ಪ್ರತ್ಯಯಗಳು ಸೇರುವಾಗ ಧಾತುವಿನಲ್ಲಿ ಬದಲಾವಣೆಗಳಾಗುತ್ತವೆ. ಗೌಡಕನ್ನಡದ ಕ್ರಿಯಾರಚನೆಗಳು ಮತ್ತು ಶಿಷ್ಟ ಕನ್ನಡದ ಕ್ರಿಯಾರಚನೆಗಳಲ್ಲಿ ಭಿನ್ನತೆಗಳಿವೆ. ಈ ಭಿನ್ನತೆಗಳನ್ನು ಗಮನಿಸಿಕೊಂಡು ಗೌಡ ಕನ್ನಡದ ಕ್ರಿಯಾರಚನೆಗಳನ್ನು ವರ್ಗೀಕರಿಸಿಲಾಗಿದೆ.

ಪೂರ್ಣ ಕ್ರಿಯಾಪದ : ಕಾಲಗಳು

ಅ. ನಾ ಹೇಳ್ದಂಗೆ ಅವ್ಳು ಅದರ ಮೇಲೆ ನಡ್‌ದದೆ.

(ನಾನು ಹೇಳಿದ ರೀತಿ ಅವಳು ಅದರ ಮೇಲೆ ನಡೆಯುತ್ತಾಳೆ).

ಆ. ಈ ಮುಳ್ಳ್‌ಲಿ ಬರಿಗಾಲ್‌ಲಿ ಯಾಕೆ ನಡ್‌ದಿಯ?

(ಈ ಮುಳ್ಳಿನಲ್ಲಿ ಬರಿಗಾಲಿನಲ್ಲಿ ಏಕೆ ನಡೆಯುತ್ತಿಯೇ?)

ಇ. ನಮ್ಮ ಅಪ್ಪ ಹೇಳ್ದಂಗೆ ನಾವ್ ನಡ್‌ದವೆ.

(ನಮ್ಮ ಅಪ್ಪ ಹೇಳಿದ ರೀತಿ ನಾವು ನಡೆಯುತ್ತೇವೆ).

ಈ. ಅವನ ನೋಡಿ ಅವ್ವು ಸುಮ್ಮನೆ ನಡ್‌ತ್.

(ಅವನನ್ನು ನೋಡಿ ಅವಳು ಸುಮ್ಮನೆ ನಡೆದಳು).

ಉ. ಅಣ್ಣನ ಮ್ಯಾಲೆ ಸಿಟ್ಟ್‌ಲಿ ನೀ ತಪ್ಪ್ ದಾರಿಲಿ ನಡ್‌ದ

(ಅಣ್ಣನ ಮೇಲಿನ ಸಿಟ್ಟಿನಲ್ಲಿ ನೀನು ತಪ್ಪು ದಾರಿಯಲ್ಲಿ ನಡೆದೆ)

ಊ. ಯಾಗೋಳ್ ಮನೇನ್ ಬುಟ್ಟ್ ಆ ಗೂಡೆ ನಡ್‌ದದೆ.

(ಯಾವಾಗಲೂ ಜಗಳವಾಡುವವರ ಮನೆಯನ್ನು ಬಿಟ್ಟು ಆ ಹುಡುಗಿ ನಡೆಯುವಳು).

ಋ. ನಾವ್ ಅಲ್ಲಿಂದ ಇಲ್ಲಿಮಟ್ಟ ಕತ್ತಲೆಲೇ ನಡ್‌ದೊ.

(ನಾವು ಅಲ್ಲಿಂದ ಇಲ್ಲಿಯವರೆಗೂ ಕತ್ತಲೆಯಲ್ಲೇ ನಡೆದವು).

ೠ. ಯಾಗಾರ್ ಒಮ್ಮೆ ನೀ ನನ್ನಂಗೇ ನಡ್‌ದಿಯ

(ಯಾವಾಗಲಾದರೂ ಒಮ್ಮೆ ನೀನು ನನ್ನಂತೆಯೇ ನಡೆಯುವೆ.

ಮೇಲಿನ ವಾಕ್ಯಗಳಲ್ಲಿ 'ನಡೆ' ಎಂಬ ಧಾತುವಿನ ಬೇರೆ ಬೇರೆ ರೂಪಗಳು ಬಂದಿವೆ. ಅವುಗಳನ್ನು ಕೆಳಗಿನಂತೆ ವಿಂಗಡಿಸಬಹುದು.

ವರ್ತಮಾನಕಾಲ

ಪ್ರ.ಪು.ಏಕ.	ನಡ್‌ದದೆ	=	ನಡ್ + ದ್ + ಅದ್ + ಎ
ಮ.ಪು.ಏಕ	ನಡ್‌ದಿಯ	=	ನಡ್ + ದ್ + ಇಯ
ಉ.ಪು.ಏಕ	ನಡ್‌ದವೆ	=	ನಡ್ + ದ್ + ಅವೆ.

ಭೂತಕಾಲ

ಪ್ರ.ಪು.ಏಕ.	ನಡ್‌ತ್	=	ನಡ್ + ಅತ್
ಮ.ಪು.ಏಕ	ನಡ್‌ದ	=	ನಡ್ + ದ್ + ಅ
ಉ.ಪು.ಏಕ	ನಡ್‌ದೊ	=	ನಡ್ + ದ್ + ಒ

ಭವಿಷ್ಯತ್ಕಾಲ:

ಪ್ರ.ಪು.ಏಕ.	ನಡ್‌ದದೆ	=	ನಡ್ + ದ್ + ಅದ್ + ಎ
ಮ.ಪು.ಏಕ	ನಡ್‌ದಿಯ	=	ನಡ್ + ದ್ + ಇಯ
ಉ.ಪು.ಏಕ	ನಡ್‌ದವೆ	=	ನಡ್ + ದ್ + ಅವೆ.

ಧಾತುವಿಗೆ ಸೇರಿ ಕಾಲವನ್ನು ತೋರಿಸುವ ಪ್ರತ್ಯಯಗಳಿಗೆ ಕಾಲಸೂಚಕ ಪ್ರತ್ಯಯಗಳೆನ್ನುವರು. ಗೌಡಕನ್ನಡದಲ್ಲಿ ಭೂತ, ವರ್ತಮಾನ, ಭವಿಷ್ಯತ್ಕಾಲ ಸೂಚಕ ಪ್ರತ್ಯಯಗಳು 'ದ್' ಒಂದೇ ಆಗಿವೆ. ಆದರೆ, ಇಲ್ಲಿ ಧಾತುವಿನ ಕಾಲ ಪ್ರತ್ಯಯದ ಮುಂದೆ ಸೇರುವ, ಪುರುಷ, ವಚನ, ಲಿಂಗಗಳನ್ನು ಸೂಚಿಸುವ ಆಖ್ಯಾತ ಪ್ರತ್ಯಯಗಳು ಗೌಡಕನ್ನಡದಲ್ಲಿ ಭೂತ, ವರ್ತಮಾನ, ಹಾಗೂ ಭವಿಷ್ಯತ್ಕಾಲವನ್ನು ಸೂಚಿಸುತ್ತವೆ.

ಮೇಲೆ ಪಟ್ಟಿಯಲ್ಲಿ ಬಿಡಿಸಿ ತೋರಿಸಿರುವ ಆಖ್ಯಾತ ಪ್ರತ್ಯಯಗಳು ಭೂತಕಾಲಕ್ಕೆ ಪ್ರತ್ಯೇಕವಾಗಿವೆ. ವರ್ತಮಾನ ಹಾಗೂ ಭವಿಷ್ಯತ್ಕಾಲಗಳಿಗೆ ಒಂದೇ ಆಗಿವೆ.

ಧಾತುವಿಗೆ ಕಾಲಪ್ರತ್ಯಯ ಆಖ್ಯಾತ ಪ್ರತ್ಯಯಗಳು ಸೇರುವ ಕ್ರಮ:

ವರ್ತಮಾನಕಾಲ ಹಾಗೂ ಭವಿಷ್ಯತ್ಕಾಲಗಳಿಗೆ ಏಕ ರೀತಿಯ ಆಖ್ಯಾತ ಪ್ರತ್ಯಯಗಳು ಗೌಡಕನ್ನಡದಲ್ಲಿದೆ.

ಆಖ್ಯಾತ ಪ್ರತ್ಯಯಗಳು:

	ಏಕ	ಬಹು
ಪ್ರ.ಪು.ಪು.	(ಆನೆ) –ದೆ	–ವೆ
ಸ್ತ್ರೀಲಿಂಗ	(ಆಳೆ) –ದೆ	–ವೆ
ನಪುಂ	(ಅದೆ) –ದೆ	–ವೆ
ಮ.ಪು.	(ಈಯೆ)–ಇಯ	–ಅರಿ
ಉ.ಪು.	(ಏನೆ) –ನೆ	–ವೆ/ಇವೆ.

ಗೌಡ ಕನ್ನಡದಲ್ಲಿ 'ತಿಳಿ' 'ಮಾಡು' ಎಂಬ ಧಾತುಗಳ ವರ್ತಮಾನ ಕಾಲ ಹಾಗೂ ಭವಿಷ್ಯತ್ಕಾಲದ ರೂಪಗಳು.

'ತಿಳಿ'

	ಏಕ	ಬಹು
ಪ್ರ.ಪು.ಪು.	ಅಂವ ತಿಳ್ದದೆ	ಅವು ತಿಳ್ದವೆ
ಸ್ತ್ರೀಲಿಂಗ	ಅವ್ಳ ತಿಳ್ದದೆ	ಅವು ತಿಳ್ದವೆ
ನಪುಂ	ಅದ್ ತಿಳ್ದದೆ	ಅವು ತಿಳ್ದವೆ

ಮ.ಪು.	ನೀ ತಿಳ್ದಿಯ	ನೀವ್ ತಿಳಿಯುವರಿ
ಉ.ಪು.	ನಾ ತಿಳ್ದನೆ	ನಾವ್ ತಿಳ್ದವೆ.

'ಮಾಡ್'

	ಏಕ	ಬಹು
ಪ್ರ.ಪು.ಪು.	ಅಂವ ಮಾಡ್‌ದೆ	ಅವು ಮಾಡ್‌ವೆ
ಸ್ತ್ರೀಲಿಂಗ	ಅವ್ಳ ಮಾಡ್‌ದೆ	ಅವು ಮಾಡ್‌ವೆ
ನಪುಂ	ಅದ್ ಮಾಡ್‌ದೆ	ಅವು ಮಾಡ್‌ವೆ
ಮ.ಪು.	ನೀ ಮಾಡಿಯ	ನೀವ್ ಮಾಡ್‌ವರಿ
ಉ.ಪು.	ನಾ ಮಾಡ್‌ನೆ	ನಾವ್ ಮಾಡ್‌ವೆ

ಗೌಡಕನ್ನಡದಲ್ಲಿ 'ಇದೆ' ಎಂಬುದಕ್ಕೆ 'ಉಟ್ಟು' ಎಂಬ ರೂಪವಿದೆ.

ಉದಾ: ಇದ್ದಾನೆ

ಇದ್ದಾಳೆ ಉಟ್ಟು (ಏಕವಚನ ರೂಪ)

ಇದೆ

ಇದ್ದೀರಿ – ಒಳರಿ

ಇದ್ದೇನೆ – ಒಳೆ

ಇದ್ದೇವೆ – ಒಳೊ ಎಂಬ ರೂಪವೂ ಇದೆ.

ಭೂತಕಾಲ:

ಕಾಲಪ್ರತ್ಯಯ – ದ್

ಆಖ್ಯಾತ ಪ್ರತ್ಯಯಗಳು:

	ಏಕ	ಬಹು
ಪ್ರ.ಪು.ಪು.	–ಅತ್	–ದೊ
ಸ್ತ್ರೀಲಿಂಗ	–ಅತ್	–ದೊ
ನಪುಂ	–ಅತ್	–ದೊ
ಮ.ಪು.	–ದ	–ಅರಿ
ಉ.ಪು.	–ದೆ	–ದೊ

'ತಿಳಿ' 'ಮಾಡ್' ಎಂಬ ಧಾತುಗಳ ಭೂತಕಾಲ ರೂಪಗಳು

	'ತಿಳಿ'		'ಮಾಡ್'	
	ಏಕ	ಬಹು	ಏಕ್	ಬಹು
ಪ್ರ.ಪು.	ತಿಳ್‌ದತ್	ತಿಳ್‌ದೊ	ಮಾಡ್‌ತ್	ಮಾಡ್‌ದೊ
ಸ್ತ್ರೀಲಿಂಗ	ತಿಳ್‌ದತ್	ತಿಳ್‌ದೊ	ಮಾಡ್‌ತ್	ಮಾಡ್‌ದೊ
ನಪುಂ	ತಿಳ್‌ದತ್	ತಿಳ್‌ದೊ	ಮಾಡ್‌ತ್	ಮಾಡ್‌ದೊ
ಮ.ಪು.	ತಿಳ್‌ದ	ತಿಳ್‌ದರಿ	ಮಾಡ್‌ದ	ಮಾಡ್‌ದರಿ
ಉ.ಪು.	ತಿಳ್‌ದೆ	ತಿಳ್‌ದೊ	ಮಾಡ್‌ದೆ	ಮಾಡ್‌ದೊ

ಗೌಡ ಕನ್ನಡದಲ್ಲಿ ಆಖ್ಯಾತ ಪ್ರತ್ಯಯಗಳು ಧಾತುವಿಗೆ ಸೇರುವಾಗ ಹಲವು ವ್ಯತ್ಯಾಸಗಳುಂಟಾಗುತ್ತವೆ.

ಉದಾಹರಣೆಗೆ :-

೧. ಆ ಅಜ್ಜಿ ಮೆಲ್ಲಂಗೆ ಬೆಟ್ಟಂದ ಇಳ್‌ತ್ (ಇಳ್ + ತ್)

(ಆ ಅಜ್ಜಿ ಮೆಲ್ಲಗೆ ಬೆಟ್ಟದಿಂದ ಇಳಿದಳು).

೨. ನೀ ಅಂವಂಗೆ ಯಂತಕೆ ಹೊಡ್‌ದ? (ಹೊಡ್ + ದ್)

(ನೀನು ಅವನಿಗೆ ಏಕೆ ಹೊಡೆದೆ?)

೩. ಅವು ಅಂವಂಗೆ ಬೈದೊ. (ಬಯ್+ದ+ಒ)

(ಅವರು ಅವನಿಗೆ ಬಯ್ದರು)

೪. ಅವ್ಳು ಅಲ್ಲಿಂದ ಹೋತ್ (ಹೋಗ್+ತ್)

(ಅವಳು ಅಲ್ಲಿಂದ ಹೋದಳು)

೫. ಅಂವ ತಿಂಡಿ ತೀಂತ್–ಇತ್ಯಾದಿ,

ಮೇಲಿನ ಉದಾಹರಣೆಗಳಲ್ಲಿ ಒಂದರಂತೆ ಇನ್ನೊಂದು ಇಲ್ಲ. ಕೆಲವು ಕಡೆಗಳಲ್ಲಿ ಧಾತುಗಳ ವರ್ಣಗಳೂ, ಕಾಲ ಪ್ರತ್ಯಯಗಳೂ ವ್ಯತ್ಯಾಸ ಹೊಂದಿವೆ. ಭೂತಕಾಲದಲ್ಲಿ ಪ್ರಥಮ ಪುರುಷ ಪುಲ್ಲಿಂಗ ಸ್ತ್ರೀಲಿಂಗ , ನಪುಂಸಕಲಿಂಗದ ಹಲವು ಕಡೆಗಳಲ್ಲಿ '–ದ' ಎಂಬ ಕಾಲ ಪ್ರತ್ಯಯವು ಬರುವುದಿಲ್ಲ.

ಉದಾ:- ತಿಳ್ತ್, ಬಾತ್, ಬೀತ್, ತೊಳ್ತ್, ಹೋತ್, ಇತ್ಯಾದಿ ಇಲ್ಲಿ ಇದ್ದಿತು, ಬಿದ್ದಿತು, ಬಂದಿತು, ತಿಂದಿತು, ರೂಪಗಳಿಗೆ ಬದಲಾಗಿ ಇತ್ತ್, ಬೀತ್, ಬಾತ್, ತೀಂತ್ ಎಂಬ ರೂಪಗಳಿವೆ.

ಪೂರ್ಣ ಕ್ರಿಯಾಪದ : ಅರ್ಥಗಳು

ಶಿಷ್ಟಕನ್ನಡದಲ್ಲಿ ಒಂದು ಕ್ರಿಯೆಯ ವಿಷಯದಲ್ಲಿ ವಿಧಿ, ನಿಷೇಧ, ಸಂಭಾವನೆಗಳನ್ನು ತಿಳಿಸುವುದಕ್ಕಾಗಿ ವಿದ್ಯಾರ್ಥ, ನಿಷೇದಾರ್ಥ, ಸಂಭಾವನಾರ್ಥ ರೂಪಗಳು ಧಾತುವಿಗೆ ಬರುತ್ತವೆ.

ಗೌಡಕನ್ನಡದ ವಿಧ್ಯರ್ಥಕ ರೂಪ ಕೆಳಕಂಡಂತಿದೆ.

'ತಿಳಿ', 'ಮಾಡ್' ಎಂಬ ಧಾತುಗಳ ವಿಧ್ಯರ್ಥದ ರೂಪಗಳು.

	'ಮಾಡ್'		'ತಿಳಿ'	
	ಏಕ	ಬಹು	ಏಕ	ಬಹು
ಪ್ರ.ಪು.ಪು.	ಮಾಡ್‌ಲಿ	ಮಾಡ್‌ಲಿ	ತಿಳಿಯಲಿ	ತಿಳಿಯಲಿ
ಸ್ತ್ರೀಲಿಂಗ	ಮಾಡ್	ಮಾಡಿ	ತಿಳಿ	ತಿಳಿಯನಿ
ಉ.ಪು.	ಮಾಡ್‌ಲಿ(?)	ಮಾಡ್‌ನೊ	ತಿಳಿಯಲಿ(?)	ತಿಳಿಯನೊ.

ವಿಧ್ಯರ್ಥಕ್ಕೆ ಸಂಬಂಧಿಸಿದ ಕೆಲವು ರೂಪಗಳು.

ಪ್ರಥಮಪುರುಷ:

ಶಿಷ್ಟಕನ್ನಡದಂತೆ ಗೌಡಕನ್ನಡದಲ್ಲಿ ಪ್ರಥಮ ಪುರುಷದಲ್ಲಿ ಲಿಂಗ, ವಚನ ಭೇದವಿಲ್ಲ.

ಉದಾ: ಪುಲ್ಲಿಂಗ – ಅಂವ ಮನೆಗೆ ಹೋಗ್‌ಲಿ (ಅವನು ಮನೆಗೆ ಹೋಗಲಿ)

ಸ್ತ್ರೀಲಿಂಗ – ಅವ್ಳ ಅಡ್‌ಗೆ ಮಾಡ್‌ಲಿ (ಅವಳು ಅಡುಗೆ ಮಾಡಲಿ)

ಪುಲ್ಲಿಂಗ ಸ್ತ್ರೀಲಿಂಗ ಬಹುವಚನ:

– ಇವೆಲ್ಲವೂ ನನ್ನೊಟ್ಟಿಗೆ ಬರ್‌ಲಿ (ಇವರೆಲ್ಲರೂ ನನೊಂದಿಗೆ ಬರಲಿ)

ನಪುಂಸಕಲಿಂಗ – ದನಗ ಲಾಯ್‌ಕ ಮೇಯಲಿ (ದನಗಳು ಚೆನ್ನಾಗಿ ಮೇಯಲಿ)

ಗೌಡಕನ್ನಡದಲ್ಲಿ ಹಾರೈಸುವಾಗ ಇವುಗಳಲ್ಲಿನ –ಅಲಿ ಪ್ರತ್ಯಯಕ್ಕೆ ಬದಲಾಗಿ –ಕೆ ಎಂಬ ಪ್ರತ್ಯಯ ಸೇರುವುದುಂಟು.

ಉದಾ: ಅಂವನ ಮನೆ ಹಾಳಾಕೆ,

ನಿನ್ನ ದೊಂಡೆ ಕಟ್ಟಿಕೆ.

ಮಧ್ಯಮ ಪುರುಷ ಏಕವಚನ:

ಶಿಷ್ಟಕನ್ನಡದಂತೆಗೌಡಕನ್ನಡದಲ್ಲಿಯೂ ವಿಧ್ಯರ್ಥದ ಮಧ್ಯಮ ಪುರುಷ ಏಕವಚನಕ್ಕೆ ಯಾವುದೇ ಪ್ರತ್ಯಯ ಹತ್ತುವುದಿಲ್ಲ. ಧಾತುವಿನ ಪ್ರಕೃತಿರೂಪವೇ ಕ್ರಿಯಾಪದ ರೂಪವಾಗಿರುತ್ತದೆ.

ಉದಾ: ನೀ ಮಾಡ್ (ನೀನು ಮಾಡು)

ಆ ವಿಷ್ಯನ ಲಾಯ್ಕ ತಿಳಿ (ಆ ವಿಷಯವನ್ನು ಚೆನ್ನಾಗಿ ತಿಳಿ) ಇತ್ಯಾದಿ.

ಶಿಷ್ಟಕನ್ನಡದಂತೆ ಗೌಡ ಕನ್ನಡದಲ್ಲಿಯೂ 'ಸಾ, ಬೇ, ನೋ' ಮೊದಲಾದ ಒಂದು ಅಕ್ಷರವನ್ನುಳ್ಳ ಧಾತುಗಳಿಗೂ, ಬಯ್, ಕೊಯ್ ಮೊದಲಾದ ವ್ಯಂಜನಾಂತ ಧಾತುಗಳಿಗೂ –ಇ ಸ್ವರ ಸೇರಿ ಮಧ್ಯಮ ಪುರಷ ಏಕವಚನ ರೂಪಗಳಾಗುತ್ತವೆ.

ಉದಾ: ನೀ ಅಲ್ಲೇ ಸಾಯಿ (ಸಾ + ಇ)

ಆ ಹಣ್ಣ್‌ನ ಕೊಯಿ (ಕೊ + ಇ)

ಅಂತೆಯೇ ಬೇ–ಬೇಯಿ, ನೋ–ನೋಯಿ, ಬಯ್–ಬಯಿ–ಬೈ ಇತ್ಯಾದಿ ರೂಪಗಳಿವೆ.

೧. ವಿಧ್ಯರ್ಥಕ ಮಧ್ಯಮಪುರುಷ ಬಹುವಚನ :

೧. ಗೌಡಕನ್ನಡದಲ್ಲಿ –ಅರಿ, –ಇ, –ಅನಿ ಎಂಬ ಪ್ರತ್ಯಯ ಎಲ್ಲ ಧಾತುಗಳಿಗೂ ಹತ್ತುತ್ತದೆ.

ಉದಾ: ಅರಿ – ಆ ಕೆಲ್ಸನ ನೀವ್ ಮಾಡ್ದರಿ (ಆ ಕೆಲಸವನ್ನು ನೀವು ಮಾಡಿದಿರಿ)

ಅನಿ – ಅವ್‌ಕೆ ನೀವ್ ಬೈಯನಿ

ಇ – ನೀವ್ ಇದ್‌ನ ಅವ್‌ಕೆ ಕೊಡಿ.

೨. ಗೌಡಕನ್ನಡದಲ್ಲಿ ತರು, ಬರು ಎಂಬ ಧಾತುಗಳಿಗೆ ಶಿಷ್ಟಕನ್ನಡದಂತೆ 'ತನ್ನಿ, ಬನ್ನಿ ಎಂಬ ರೂಪಗಳೇ ಬರುತ್ತವೆ.

ಉದಾ: ಪ್ಯಾಟೆಂದ ಬಾಕನ ಹಣ್ಣ್ ತನ್ನಿ (ಪೇಟೆಯಿಂದ ಬರುವಾಗ ಹಣ್ಣು ತನ್ನಿ)

ನೀವ್ ಇಲ್ಲಿ ಬನ್ನಿ (ನೀವು ಇಲ್ಲಿ ಬನ್ನಿ)

೩. ಮಧ್ಯಮ ಪುರಷದ ಏಕವಚನ ಬಹುವಚನಗಳಲ್ಲಿ ವಿಧ್ಯರ್ಥವನ್ನು ತೋರಿಸುವುದಕ್ಕಾಗಿ ಧಾತುವಿಗೆ –ಉದು ಎಂಬ ಪ್ರತ್ಯಯ ಸೇರುವುದು.

ಉದಾ: ನಿನ್ನ ಕೆಲ್‌ಸ ಇಲ್ಲಿ ಬಂದವ್‌ಕೆ ಹೂಮಾಲೆ ಹಾಕುದು. ಬಾಕಿ ಕೆಲ್‌ಸ ನೀ ಮಾಡ್‌ದು.

ವಿಧ್ಯರ್ಥಕ ಉತ್ತಮ ಪುರುಷ ಏಕವಚನ

ಗೌಡಕನ್ನಡದಲ್ಲಿ ಶಿಷ್ಟಕನ್ನಡದಂತೆ ಉತ್ತಮ ಪುರುಷ ಏಕವಚನದ ವಿಧ್ಯರ್ಥಕ ರೂಪಗಳು ಸಾಮಾನ್ಯವಾಗಿ ದೊರೆಯುವುದಿಲ್ಲ. ವಾಕ್ಯದಲ್ಲಿ ಪ್ರಶ್ನೆ ಸೇರಿದ್ದರೆ, –ಅಲಿ ಎಂಬ ಪ್ರತ್ಯಯ ಧಾತುವಿಗೆ ಹತ್ತುತ್ತದೆ.

ಉದಾ: ಎಲ್ಲವು ನನ್ನ ದೂರ ತಳ್ಳಿದೊ ನಾ ಯಾರತ್ರ ಹೋಗ್‌ಲಿ?

ಉತ್ತಮ ಪುರುಷ ಬಹುವಚನ:

ಗೌಡಕನ್ನಡದಲ್ಲಿ ಉತ್ತಮ ಪುರುಷ ಬಹುವಚನದಲ್ಲಿ –ನೊ ಎಂಬ ಪ್ರತ್ಯಯ ಸೇರುತ್ತದೆ.

ಉದಾ: ನಾವ್ ಎಲ್ಲವೂ ಹೋಗಿ ಕೇಳ್‌ನೊ. ಇತ್ಯಾದಿ

ವಿಧ್ಯರ್ಥಕ ಪ್ರಯೋಗ

ಕೋರಿಕೆ, ಹಾರೈಕೆ, ಅನುಮತಿ, ಉದ್ದೇಶ ಮೊದಲಾದ ಅರ್ಥಗಳನ್ನು ತೋರಿಸುವ ವಿಧ್ಯರ್ಥಕ ಕ್ರಿಯಾಪದಗಳು.

ಉದಾ: ಕೋರಿಕೆ : ಇದ್ ಒಂದ್ ಕೆಲ್‌ಸ ಮಾಡಿ ಕೊಡಿ.

ಹಾರೈಕೆ : ಹೊದ ಕಾರ್ಯ ಲಾಯಕ್ ನಡ್‌ಯಲಿ

ಅನುಮತಿ : ನೀವ್ ಒಳಗೆ ಬನ್ನಿ.

ಉದ್ದೇಶ : ಇನ್ನ್ ಊಟ ಮಾಡ್‌ನೊ.

ನಿಷೇಧಾರ್ಥ:

ಕ್ರಿಯೆಯು ನಡೆಯಲಿಲ್ಲ ಅಥವಾ ನಡೆಯುವುದಿಲ್ಲ ಎಂಬುದನ್ನು ನಿಷೇಧಾರ್ಥ ರೂಪಗಳು ತಿಳಿಸುತ್ತವೆ. ಗೌಡ ಕನ್ನಡದಲ್ಲಿ ಧಾತು ನಿಷೇಧಾರ್ಥ ಸೂಚಿಸುವಾಗ ಪುರುಷ, ಲಿಂಗ, ವಚನಗಳಿಗೆ –ಇಲೆ ಅಥವಾ –ಉಲೆ ಪ್ರತ್ಯಯ ಮಾತ್ರ ಹತ್ತುತ್ತದೆ.

ಉದಾ:	ಏಕ	ಬಹು
ಪ್ರ.ಪು.ಪು.	ಮಾಡ್‌ದುಲೆ	ಮಾಡುದುಲೆ/ಮಾಡಿರಿಲೆ
ಸ್ತ್ರೀಲಿಂಗ	ಮಾಡ್‌ದುಲೆ	ಮಾಡುದುಲೆ/ಮಾಡಿರಿಲೆ
ಉ.ಪು.	ಮಾಡ್‌ದುಲೆ	ಮಾಡುದುಲೆ/ಮಾಡಿರಿಲೆ

'ತರು', 'ಬರು' ಧಾತುಗಳ ನಿಷೇಧಾರ್ಥ ರೂಪ 'ತಾದುಲೆ/ಬಾದುಲೆ' ಎಂದಾಗುತ್ತದೆ.

ಕೆಲವು ಧಾತುಗಳು ನಿಷೇಧಾರ್ಥ ರೂಪಗಳು.

ಆ ಕರ್ ಯಾರ ಕೈಗೂ ಸಿಕ್ಕುಲೆ.

ಅಂವ ತಾನ್ ತಿಂಬುಲೆ, ಇನ್ನೊಬ್ಬರಿಗೂ ಕೊಡ್‌ದುಲೆ.

ಇನ್ನ್ ಮುಂದೆ ಅತ್ತ ತಿರ್‌ಗಿ ನೋಡ್‌ದುಲೆ.

ಗೌಡ ಕನ್ನಡದಲ್ಲಿ ನಿಷೇಧಾರ್ಥ ಪ್ರತ್ಯಯಗಳು ಹತ್ತುವಾಗ 'ತರು' 'ಬರು' ಎಂಬ ಧಾತುಗಳ ಮೊದಲನೆಯ ಸ್ವರ ದೀರ್ಘವಾಗುತ್ತದೆ.

ಉದಾ: ಅದ್ ಮತ್ತೆ ಬಾಕಿಲೆ, ಅವು ತಾಕಿಲೆ, ನಾವ್ ಬಾದುಲೆ.

ಸಂಭಾವನಾರ್ಥ:

ಗೌಡಕನ್ನಡದ ಆಖ್ಯಾತ ಪ್ರತ್ಯಯಗಳು ಕೆಳಕಂಡಂತಿದೆ.

	ಏಕ	ಬಹು
ಪ್ರ.ಪು.ಪು.	–ದು	–ವೊ
ಸ್ತ್ರೀಲಿಂಗ	–ಇಯ	–ಅರಿ
ಉ.ಪು.	–ನೆ	–ಅವೆ

'ಕೇಳ್' 'ಮಾಡ್' ಧಾತುವಿನ ಸಂಭಾವನಾರ್ಥ ರೂಪಗಳು.

	'ಕೇಳ್'		**'ಮಾಡ್'**	
	ಏಕ	**ಬಹು**	**ಏಕ**	**ಬಹು**
ಪ್ರ.ಪು.ಪು.	ಕೇಳ್‌ದು	ಕೇಳ್‌ವೊ	ಮಾಡ್‌ದು	ಮಾಡ್‌ವೊ
ಸ್ತ್ರೀಲಿಂಗ	ಕೇಳಿಯ	ಕೇಳ್‌ವರಿ	ಮಾಡಿಯ	ಮಾಡ್‌ವರಿ
ಉ.ಪು.	ಕೇಳ್‌ನೆ	ಕೇಳ್‌ವೆ	ಮಾಡ್‌ನೆ	ಮಾಡ್‌ವೆ

ಕೆಲವು ಧಾತುಗಳ ಭೂತಕಾಲರೂಪ ಹಾಗೂ ಭೂತಕಾಲರೂಪ ಹಾಗೂ ಸಂಭಾವನಾರ್ಥದ ರೂಪಗಳ ಹೋಲಿಕೆಗಳು ಕೆಳಕಂಡಂತಿದೆ.

ಧಾತು	**ಪ್ರ.ಪು.ಏಕ ಭೂತಕಾಲರೂಪ**	**ಪ್ರ.ಪು.ಏಕ ಸಂಭಾವನಾರ್ಥದ ರೂಪಗಳು**
ಮಾಡ್	ಮಾಡ್‌ತ್	ಮಾಡ್‌ದು

ಕಲ್ಸ್	ಕಲ್ಸಿತ್	ಕಲ್ಸುದು
ಓಡ್ಸ್	ಓಡ್ಸಿತ್	ಓಡ್ಸುದು
ಮಲ್ಗ್	ಮಲ್ಗಿತ್	ಮಲ್ಗುದು
ತಿಳಿ	ತಿಳ್ತ್	ತಿಳಿಯುದು
ತಡಿ	ತಡ್ತ್	ತಡಿಯುದು
ಕೊಯ್	ಕೊಯ್ತ್	ಕೊಯ್ಯುದು
ಕೊಡ್	ಕೊಡ್ತ್	ಕೊಡ್‌ದು
ಬೀಳ್	ಬೀಳ್ತ್	ಬೀಳ್‌ದು
ಸೋಲ್	ಸೋತತ್	ಸೋಲ್‌ದು
ಇರ್	ಇತ್ತ್	ಇರ್‌ದು.

ಒಂದು ಕ್ರಿಯೆ ನಡೆದರೂ ನಡೆಯಬಹುದು, ನಂಬಿಕೆ ಇಲ್ಲ, ಆದರೆ, ಸಂಶಯಕ್ಕಿಂತಾ ಮೇಲು. ಈ ರೀತಿ ಊಹಿಸುವುದಕ್ಕೆ ಸಂಭಾವನೆ ಎಂದು ಹೆಸರು. ಮೇಲೆ ಕೊಟ್ಟಿರುವ ಉದಾಹರಣೆಗಳಿಂದ ಇದು ಸ್ಪಷ್ಟವಾಗುತ್ತದೆ.

ಪೂರ್ಣ ಕ್ರಿಯಾಪದ : ಕ್ರಿಯಾರ್ಥಕಾವ್ಯಯಗಳು

'ಇರುತ್ತದೆ; ಇರವು, ಇರರು' – ಈ ಬಗೆಯ ಪೂರ್ಣಕ್ರಿಯಾಪದಗಳ ಬದಲು 'ಉಟ್ಟು' (ಉಂಟು) 'ಇಲ್ಲೆ' (ಇಲ್ಲ) ಎಂಬ ಪೂರ್ಣ ಕ್ರಿಯಾಪದದ ಅರ್ಥವನ್ನು ಕೊಡುವ ಪದಗಳು ಶಿಷ್ಟಕನ್ನಡದಂತೆ ಗೌಡ ಕನ್ನಡದಲ್ಲೂ ಇವೆ. ಹೀಗೆ ರೂಪ ಭೇದ ಹೊಂದದೆ ಪೂರ್ಣ ಕ್ರಿಯಾಪದದ ಅರ್ಥವನ್ನು ಕೊಡುವ ಪದಕ್ಕೆ 'ಕ್ರಿಯಾರ್ಥಕಾವ್ಯಯ' ಎಂದು ಹೆಸರು.

ಶಿಷ್ಟಕನ್ನಡದಂತೆ ಗೌಡ ಕನ್ನಡದಲ್ಲೂ ಉಟ್ಟು (ಉಂಟು), ಇಲ್ಲೆ (ಇಲ್ಲ), ಹೌದ್ (ಹೌದು), ಅಲ್ಲ (ಅಲ್ಲ) ಬೇಕ್ (ಬೇಕು), ಸಾಕ್ (ಸಾಕು) ಮೊದಲಾದ ಕ್ರಿಯಾರ್ಥಕಾವ್ಯಗಳು ಬಳಕೆಯಲ್ಲಿವೆ.

ಉದಾ: ಅಂವಂಗೆ ಬೇಕಾದ್ ಉಟ್ಟು,
ಅವ್‌ಕೆ ಮಕ್ಕ ಇಲ್ಲೆ.
ನೀ ಬೆಂಗಳೂರ್‌ಂದ ಈಗ ಬಂದ? ಹೌದು.
ಅಂವ ಅವರ ಮಜ್ಞ ಅಲ್ಲ.
ನಂಗೆ ಊಟ ಸಾಕ್ ಇತ್ಯಾದಿ.

ಕೆಲವೊಮ್ಮೆ ಈ ಕ್ರಿಯಾರ್ಥಕಾವ್ಯಯಗಳ ಮುಂದೆ 'ಆಗು' ಧಾತುಗಳ ರೂಪಗಳೂ ಸೇರುವುದುಂಟು.

ಗೌಡ ಕನ್ನಡದಲ್ಲಿ 'ಆತ್'

ಉದಾ: ಇದ್‌ನೆಲ್ಲ ಕಂಡ್ ಅಂವಂಗೆ ಕನಿಕರ ಇಲ್ಲದಾತ್

ನಂಗೆ ಬಿಸ್‌ಲ್‌ಲಿ ಸುತ್ತಿ ಸುತ್ತಿ ಸಾಕಾತ್.

ಭಾವಾರ್ಥ:

'ಅವು ನ್ಯಾಯ ಕೇಳಿಕೆ ಬಂದೊ.

ನಾವ್ ಹಬ್ಬ ನೋಡಿಕೆ ಹೋದೊ.

ಇಲ್ಲಿ 'ನೋಡಿಕೆ' 'ಕೇಳಿಕೆ' ಎಂಬ ರೂಪವು 'ಬಂದೊ' 'ಹೋದೊ' ಎಂಬ ಕ್ರಿಯೆಯು ಪ್ರಯೋಜನವನ್ನು ತೋರಿಸುತ್ತದೆ. ಇದಕ್ಕೆ ಭಾವಾರ್ಥ ಎಂದು ಹೆಸರು. ಗೌಡಕನ್ನಡದ ಭಾವಾರ್ಥಪ್ರತ್ಯಯ –ಇಕೆ.

ಸಂಯುಕ್ತ ಕ್ರಿಯಾಪದಗಳು

ಎರಡು ಅಥವಾ ಹಲವು ಧಾತುಗಳ ಬೇರೆ ಬೇರೆ ಕ್ರಿಯಾಪದಗಳು ಒಟ್ಟು ಸೇರಿ ಆಗುವ ಕ್ರಿಯಾಪದಕ್ಕೆ ಸಂಯುಕ್ತ ಕ್ರಿಯಾಪದ ಎಂದು ಹೆಸರು. ಇದು ಕನ್ನಡ ವ್ಯಾಕರಣದಲ್ಲಿ ಅಂತೆಯೇ ಗೌಡ ಕನ್ನಡದ ಸಂಯುಕ್ತ ಕ್ರಿಯಾಪದಗಳನ್ನು ಗಮನಿಸೋಣ.

೧. ವರ್ತಮಾನ ಕಾಲದ ರೂಪಗಳು.

ಅಪ್ಪ ಪ್ಯಾಟೆಗೆ ಹೋದೆ (ಅಪ್ಪ ಪೇಟೆಗೆ ಹೋಗುತ್ತಾನೆ)

ಅಲ್ಲಿ ನೋಡ್ ಅಪ್ಪ ಪ್ಯಾಟೆಗೆ ಹೋಗ್ ತುಟ್ಟು, (ಅಪ್ಪ ಪೇಟೆಗೆ ಹೋಗುತ್ತಿದ್ದಾರೆ)

ಇಂದ್ ಅಪ್ಪ ಪ್ಯಾಟೆಗೆ ಹೋವುಟು (ಅಪ್ಪ ಪೇಟೆಗೆ ಹೋಗಿದ್ದಾರೆ)

ಇಲ್ಲಿ 'ಹೋದೆ' ಎಂಬ ರೂಪವು ವರ್ತಮಾನ ಕಾಲದ ಸಾಮಾನ್ಯಾರ್ಥವನ್ನು ಕೊಡುತ್ತದೆ. ಏಕೆಂದರೆ, ಇಲ್ಲಿ ಹೋದೆ (ಹೋಗುತ್ತದೆ) ಎಂಬುದು 'ಈಗ ಹೋದೆ' 'ನಾಳೆ ಹೋದೆ' 'ವಾರವಾರನೂ ಹೋದೆ' ಎಂಬ ಯಾವ ಅರ್ಥವಾದರೂ ಆಗುತ್ತದೆ. ಆದ್ದರಿಂದ ಇದು ಸಾಮಾನ್ಯಾರ್ಥವನ್ನು ಕೊಡುತ್ತದೆ.

'ಹೋಗ್‌ತುಟ್ಟು' ಎಂಬುದು ಕ್ರಿಯೆ ಈಗ ನಡೆಯುವ ಸಂಗತಿಯನ್ನು ತಿಳಿಸುತ್ತದೆ. ಕ್ರಿಯೆ ಇನ್ನೂ ಮುಗಿದಿಲ್ಲವಾದ ಕಾರಣ ಇದು ವರ್ತಮಾನ ಕಾಲ ರೂಪವಾಗಿದೆ.

'ಹೋವುಟು' ಎಂಬುದು –ಪೇಟೆಗೆ ಹೋಗಿ ಆಗಿದೆ. ಆದರೆ, ಇನ್ನೂ ತಿರುಗಿ ಹಿಂದಕ್ಕೆ ಬಂದಿಲ್ಲ. ಆದ ಕಾರಣ ಅದನ್ನು ಭೂತಕಾಲಕ್ಕೆ ಸೇರಿಸಲು ಆಗುವುದಿಲ್ಲ. ಕ್ರಿಯೆ ಮುಗಿದು ಹೆಚ್ಚು ಕಾಲವಾಗಿಲ್ಲವಾದ ಕಾರಣ ಇದೂ ಕೂಡ ವರ್ತಮಾನ ಕಾಲದ ರೂಪವೇ ಆಗಿದೆ.

ಹೋದೆ = ಹೋಗ್ + ದ್ + ಎ

ಹೋತುಟ್ಟು = ಹೋಗ್ತ + ಉಟ್ಟು

ಹೋವುಟು = ಹೋಗಿ + ಉಟ್ಟು

ಇಲ್ಲಿ 'ಹೋಗಿ' 'ಹೋಗ್ತ', ಎಂಬುವು 'ಹೋಗು' ಧಾತುವಿನ ವರ್ತಮಾನ ನ್ಯೂನ ರೂಪಗಳು ಮತ್ತು ಭೂತನ್ಯೂನ ರೂಪಗಳು. 'ಉಟ್ಟು' ಎಂಬುದು 'ಇರು' ಧಾತುವಿನ ವರ್ತಮಾನಕಾಲದ ವಿಶೇಷ ರೂಪ 'ಉಟ್ಟು' ರೂಪವಾಗುತ್ತದೆ. ಇದು 'ಅಪೂರ್ಣ ವರ್ತಮಾನಕಾಲ'ದ ರೂಪವಾಗುತ್ತದೆ.

'ಹೋವ್‌ಟು' ಎಂಬಲ್ಲಿ ಕ್ರಿಯೆ ವರ್ತಮಾನಕಾಲದ್ದು, ಅದು ಈಗತಾನೆ ಮುಗಿದಿದೆ ಎಂದು ಹೇಳುತ್ತದೆ. ಇಲ್ಲಿ 'ಹೋಗಿ' ಎಂಬ ಭೂತನ್ಯೂನ್ ರೂಪಕ್ಕೆ 'ಇರು' ಧಾತುವಿನ ವರ್ತಮಾನಕಾಲದ ವಿಶೇಷ ರೂಪ 'ಉಟ್ಟು' ಹತ್ತಿದೆ. ಇದು ಪೂರ್ಣ ವರ್ತಮಾನ ಕಾಲದ ರೂಪ.

ಇಲ್ಲಿ – ಹೋದೆ – ಸಾಮಾನ್ಯ ವರ್ತಮಾನಕಾಲ

ಹೋತುಟ್ಟು – ಅಪೂರ್ಣ ವರ್ತಮಾನಕಾಲ

ಹೋವ್‌ಟು – ಪೂರ್ಣ ವರ್ತಮಾನಕಾಲ.

ಉದಾ: ಪೂರ್ಣ – ಈ ನಾಯಿ ಯಾಕೆ ಇಲ್ಲಿ ಮಲ್‌ಗಿತು (ಮಲ್‌ಗಿ + ಉಟ್ಟು)

ಅಪೂರ್ಣ – ಒಂದ್ ವಾರಂದ ಅಂವ ಈ ಕೆಲ್‌ಸ ಮಾಡ್‌ತುಟ್ಟು (ಮಾಡತ್ + ಉಟ್ಟು)

ಭೂತಕಾಲದ ರೂಪಗಳು:

ಅಪ್ಪ ಪ್ಯಾಟೆಗೆ ಹೋತ್ (ಹೋದನು)

ಅಪ್ಪ ಪ್ಯಾಟೆಗೆ ಹೋಗುತಿತ್ತ್, ದಾರಿಲಿ ಮಳೆ ಬಾತ್. (ಹೋಗುತ್ತಿದ್ದನು)

ಅಪ್ಪ ಪ್ಯಾಟೆಗೆ ಹೋಗಿತ್ತ್, ಅಲ್ಲಿ ಬಟ್ಟೆ ವ್ಯಾಪಾರ ಮಾಡ್‌ತ್. (ಹೋಗಿದ್ದನು)

ಹೋತ್ – (ಹೋದನು) ಸಾಮಾನ್ಯ ಭೂತಕಾಲ ರೂಪ (ಕ್ರಿಯೆ ಹಿಂದೆ ನಡೆದಿದೆ) ಎಂದು ಇದು ತಿಳಿಸುತ್ತದೆ.

ಹೋತಿತ್ತ್ – ಅಪೂರ್ಣ ಭೂತಕಾಲರೂಪ. ಕ್ರಿಯೆ ಇನ್ನೂ ಪೂರ್ಣವಾಗಿ ನಡೆದಿಲ್ಲ.

ಹೋಗಿತ್ತ್ – ಪೂರ್ಣ ಭೂತಕಾಲರೂಪ. ಒಂದು ಕ್ರಿಯೆ ನಡೆದಾದ ಮೇಲೆ ಮತ್ತೊಂದು ಕ್ರಿಯೆಯೂ ಭೂತಕಾಲದಲ್ಲಿ ನಡೆದಿದೆ ಎಂದು ಸೂಚಿಸುತ್ತದೆ.

ಹೋತ್ = (ಹೋಗ್ + ಇತ್)

ಹೋತಿತ್ತ್ = (ಹೋಗ್ತ + ಇತ್ತ್) 'ಹೋಗ್ತ' ಎಂಬ ವರ್ತಮಾನ ನ್ಯೂನ ರೂಪಕ್ಕೆ 'ಇತ್ತ್' ಎಂಬ 'ಇರು' ಧಾತುವಿನ ಭೂತಕಾಲರೂಪ ಸೇರಿದೆ. ಇದು ಅಪೂರ್ಣ ಭೂತಕಾಲರೂಪ.

ಹೋಗಿತ್ತ್ = ಹೋಗ್ + ಇತ್ತ್ ('ಹೋಗಿ' ಎಂಬ ಭೂತನ್ಯೂನ ರೂಪಕ್ಕೆ 'ಇತ್ತ್' ಎಂಬ ಭೂತಕಾಲ ರೂಪ ಸೇರಿದೆ. ಇದು ಪೂರ್ಣಭೂತಕಾಲ ರೂಪ.)

ಉದಾ: ಅಪೂರ್ಣ ಭೂತಕಾಲರೂಪಕ್ಕೆ

೧. ನಾನ್ ಬಾಕೆ ಮುಂದೆ ಅಂವ ಒಂದ್ ಕುದ್ದಿತ್ತ್.

(ನಾನು ಬರುವ ಮುಂದೆ ಅವನು ಬಂದು ಕುಳಿತಿದ್ದನು).

೨. ಅಂವ ಎರ್ಡ್ ದಿನಕ್ಕೊಮ್ಮೆ ಅಲ್ಲಿಗೆ ಹೋಗ್ತಿತ್ತ್.

(ಅವನು ಎರಡು ದಿನಕ್ಕೊಮ್ಮೆ ಅಲ್ಲಿಗೆ ಹೋಗುತ್ತಿದ್ದನು).

೩. ನಾವ್ ಬಾಕನ ಅವು ಕೆಲ್ಸ ಮಾಡ್ತಿದ್ದೊ.

(ನಾವು ಬರುವಾಗ ಅವರು ಕೆಲಸ ಮಾಡುತ್ತಿದ್ದರು).

೪. ಇಂದ್ ಅಕ್ಕ ಮನೆಗೆ ಬಂದಿತ್ತ್.

(ಇಂದು ಅಕ್ಕ ಮನೆಗೆ ಬಂದಿದ್ದಳು).

೩. ವಿಧ್ಯರ್ಥದ ರೂಪಗಳು:

೧. ಮೈಸೂರಿಗೆ ಹೋಗೊವ್ ಇಲ್ಲೆ ಇಳಕ್ಯೊಕು.

(ಮೈಸೂರಿಗೆ ಹೋಗುವವರು ಇಲ್ಲೇ ಇಳಿಯಬೇಕು).

೨. ಇಂದ್ ನೀವ್ ನಮ್ಮ ಮನೆಗೆ ದಯಮಾಡ್ಸೊಕು.

(ಇಂದು ನೀವು ನಮ್ಮ ಮನೆಗೆ ದಯಮಾಡಿಸಬೇಕು).

೩. ಹೊತ್ತಾತ್, ಇನ್ನ್ ಮನೆಗೆ ಹೊರ್ಡೊಕು.

(ಹೊತ್ತಾಯಿತು, ಇನ್ನು ಮನೆಗೆ ಹೊರಡಬೇಕು).

ಇಲ್ಲಿ ಇಳಿಯುವ ಕಾರ್ಯವೂ, ಬರುವ ಕಾರ್ಯವೂ, ಹೊರಡುವ ಕಾರ್ಯವೂ ನಡೆಯುವುದು ಅವಶ್ಯಕವೆಂದು ತೋರಿಸಿದೆ. ಆದ್ದರಿಂದ ಇವು ವಿಧ್ಯರ್ಥಕ್ಕೆ 'ಇಳ್ಯಲಿ' 'ಬರಲಿ' ಮೊದಲಾದ ರೂಪಗಳಂತೆಯೇ ಸೇರುತ್ತವೆ. ಇವೂ ಸಂಯುಕ್ತ ಕ್ರಿಯಾಪದಗಳು.

ಇಳ್ಯೊಕು = ಇಳ್ಯ + ಒಕು (ಬೇಕು)

ದಯಮಾಡ್ಸೊಕು = ದಯಮಾಡ್ಸ್ + ಒಕು (ಬೇಕು)

ಹೊರ್‌ಡೊಕು = ಹೊರ್‌ಡ್ + ಒಕು (ಬೇಕು).

ಇಲ್ಲಿ ಧಾತುವಿನ ಭಾವಾರ್ಥದ ರೂಪದ ಮುಂದೆ 'ಬೇಕ್' ಎಂಬ ಕ್ರಿಯಾರ್ಥ ಕಾವ್ಯದ ರೂಪ 'ಒಕು' ಬಂದು ಸೇರಿ ವಿಧ್ಯರ್ಥದ ಸಂಯುಕ್ತ ಕ್ರಿಯಾಪದವಾಗಿದೆ.

ನಾಳೆ ಬೆಳ್‌ಗೆ ಎಂಬ್ ಗಂಟೆಗೆ ಎಲ್ಲವೂ ಶಾಲೆಗೆ ಬಂದೇ ಬರೊಕು. ಇಲ್ಲಿ 'ಬಂದೆ' (ಬರು) ಎಂಬುದರ ಭಾವಾರ್ಥ ರೂಪದ ಮುಂದೆ 'ಬರೊಕು' (ಬರು + ಬೇಕು) ಎಂಬುದು ಸೇರಿ 'ಬರೊಕು, ಬಾಕು' (ಬರಬೇಕು) ಎಂಬ ಅರ್ಥವನ್ನೇ ಕೊಡುತ್ತದೆ. ಹೀಗೆ, ಧಾತುವಿನ ಭಾವಾರ್ಥರೂಪಕ್ಕೆ ಹಲವು ಕ್ರಿಯಾರ್ಥಕ ಪದಗಳು ಸೇರಿ ಬೇರೆ ಬೇರೆ ಅರ್ಥಗಳನ್ನು ಕೊಡುವ ಸಂಯುಕ್ತ ಕ್ರಿಯಾಪದಗಳಾಗುತ್ತವೆ. ಅವುಗಳಲ್ಲಿ ಕೆಲವು ಕೆಳಗಿನಂತಿವೆ.

ಬತ್ತ್ (ಕೂಡದು) ಆದ್ (ಆಗದು)

ನೀ ಇಂದ್ ಉಂಬಕೆಬತ್ತ್ (ನೀನು ಇಂದು ಊಟ ಮಾಡಕೂಡದು)

ಇನ್ನ್ ಹೊತ್ತ್ ಮಾಡಿಕಾದ್ (ಇನ್ನು ತಡಮಾಡಲಾಗದು).

ಇಲ್ಲಿ ಧಾತುವಿನ ಭಾವಾರ್ಥ ರೂಪಕ್ಕೆ 'ಬತ್ತ' 'ಆದ್' ಎಮಬ ಕ್ರಿಯಾರೂಪ ಸೇರಿ ಕ್ರಿಯೆ ನಡೆಯತಕ್ಕದ್ದಲ್ಲ ಎಂದು ವಿಧಿಸುತ್ತದೆ. ಇಲ್ಲಿ 'ಆದ್' ಎಂಬ ಸ್ವರಾದಿ ಪದದ ಹಿಂದೆ –ಇಕೆ ಎಂಬ ಭಾವಾರ್ಥ ಪ್ರತ್ಯಯ ಬಂದಿದೆ.

ಆಗದ್ (ಬಾರದು)

ಬರಿಗಾಲ್‌ಲಿ ನಡಿಯಕಾಗದ್ (ನಡಿಯಕೆ + ಆಗದ್)

ಜಗಳ ಮಾಡಿಕಾಗದ್ ಮಕ್ಕಳೆ (ಮಾಡಿಕೆ + ಆಗದ್)

ಮೇಲಿನ ರೂಪಗಳಲ್ಲಿ ಭಾವಾರ್ಥದ ಕ್ರಿಯೆಗೆ 'ಆಗದ್' ಎಂಬುದು ಸೇರಿದೆ. ಇಲ್ಲಿ ಕೆಲಸವಾಗಕೂಡದೆಂದೇ ಹೇಳಿದರೂ ಇದು 'ಬತ್ತ್' 'ಆದ್' ಮೊದಲಾದವುಗಳ ಅರ್ಥಕ್ಕಿಂತ ಮೃದುವಾಗಿದೆ.

ಬಡ (ಬೇಡ) ಬಡಿ (ಬೇಡಿ)

ಗೌಡಕನ್ನಡದಲ್ಲಿ ಕ್ರಿಯೆ ನಡೆಯಕೂಡದು ಎಂದು ವಿಧಿಸುವಾಗ ಏಕವಚನದಲ್ಲಿ ಬಡ (ಬೇಡ) ಬಹುವಚನದಲ್ಲಿ ಬಡಿ (ಬೇಡಿ) ಎಂಬುವು ಸೇರುತ್ತವೆ. ಇವು ಮಧ್ಯಮ ಪುರುಷದಲ್ಲಿ ಮಾತ್ರ ಬರುತ್ತವೆ.

ಉದಾ: ಜೋರು ಕಿರ್‌ಚ್‌ಬಡ (ಜೋರಾಗಿ ಕಿರಿಚಬೇಡ)

ಅಲ್ಲಿ ಕಾಡ್ ಹಾಕ್‌ಬಡ (ಅಲ್ಲಿ ಕಸ ಹಾಕಬೇಡಿ)

ನೀವ್ ಅಲ್ಲಿ ಓಡ್‌ಬಡಿ (ನೀವು ಅಲ್ಲಿ ಓಡಬೇಡಿ)

ನೀವ್ ಅಂವವಂಗೆ ಹೊಡೆಯಬಡಿ (ನೀವು ಅವನಿಗೆ ಹೊಡೆಯಬೇಡಿ)

ನಿಷೇಧಾರ್ಥ

–ಇಲ್ಲೆ : 'ಉದ್', '–ಇತ್' ಎಂಬ ಪ್ರತ್ಯಯವನ್ನುಳ್ಳ ಭಾವಾರ್ಥದ ಕ್ರಿಯೆಗೆ '–ಇಲ್ಲೆ', ಇಲೆ ಎಂಬುದು ಸೇರಿ, ಕ್ರಿಯೆ ನಡೆಯುವುದಿಲ್ಲವೆಂದು ತೋರಿಸುತ್ತದೆ.

ಉದಾ: ಎಂತ ಮಾಡ್‌ರೂ ಅಂವ ನನ್ನ ಮಾತ್ ಕೇಳ್‌ತ್‌ಲೆ (ಕೇಳ್ + ಇತ್ + ಇಲೆ)

ನಾ ಇಂದ್ ಮನೆಗೆ ಹೋದುಲೆ (ಹೋಗ್ + ಉದ್ + ಇಲೆ)

ಅಂವ ತಪ್ಪ್ ಮಾಡ್‌ತ್‌ಲೆ (ಮಾಡ್ + ಇತ್ + ಇಲೆ)

ಅಂಚಂಗ ಕಾಯಲ ತಪ್ಪುದುಲೆ (ತಪ್ಪ್ + ಉದ್ + ಇಲೆ)

ಕ್ರಿಯೆಯು ನಿಷೇಧಾರ್ಥವನ್ನು ತೋರಿಸುವುದಕ್ಕಾಗಿ ಧಾತುವಿನ ಭೂತನ್ಯೂನ, ವರ್ತಮಾನ್ಯೂನ ರೂಪಗಳಿಗೂ '–ಇಲೆ' ಎಂಬುದು ಸೇರಿಸುವುದುಂಟು.

ಉದಾ: ಅಣ್ಣ ಇನ್ನೂ ಮನೆಗೆ ಬಾತ್‌ಲೆ (ಬಾತ್ + ಇಲೆ)

ಈ ವಿಷ್‌ಯ ಅವು ನಂಗೆ ಹೇಳ್‌ತ್‌ಲೆ (ಹೇಳ್ + ಇತ್ + ಇಲೆ)

ನಾ ನಾಳೆ ಬಾದುಲೆ (ಬಾದು + ಇಲೆ)

ನೀರ್ ಸೋರುದುಲೆ (ಸೋರ್ + ಉದು + ಇಲೆ)

ಇಲ್ಲಿ ಬಾತ್‌ಲೆ, ಬಾದುಲೆ ಎಂಬ ರೂಪಗಳಲ್ಲಿ ಕ್ರಿಯೆ ಈಗ ನಡೆದಿಲ್ಲ ಅಥವಾ ನಡೆಯುತ್ತಿಲ್ಲ ಎಂದು ತಿಳಿಸಿ ಮುಂದೆ ನಡೆಯಬಹುದು ಎಂದೂ ಸೂಚಿಸುತ್ತವೆ.

ಸಂಭಾವನಾರ್ಥ:

ಭಾವಾರ್ಥದ ಕ್ರಿಯೆಗೆ 'ಉದು', 'ಉವೊ' ಎಂಬುದು ಸೇರಿ ಕ್ರಿಯೆ ನಡೆದೀತು ಎಂದು ಸಂಭಾವನಾರ್ಥದ ಅಭಿಪ್ರಾಯ ಬರುತ್ತದೆ.

ಉದಾ: ಅವು ಹೋಗಿ ಮನೆಗೆ ಎತ್ತಿರ್‌ವೊ (ತಲುಪಬಹುದು). (ಎತ್ತಿರ್ + ಉವೊ)

ಈ ಕೆಲ್‌ಸ ಮಾಡಿಕೆ ಅಂವ ಒಪ್ಪ್‌ದು (ಒಪ್ಪಬಹುದು). (ಒಪ್ಪ್ + ಉದು).

ಗೌಡ ಕನ್ನಡದ ಕ್ರಿಯಾರಚನೆಗಳ ವೈಶಿಷ್ಟ್ಯ

ಗೌಡ ಕನ್ನಡದ ಕ್ರಿಯಾರಚನೆಗಳು ಶಿಷ್ಟಕನ್ನಡಕ್ಕಿಂತ ಭಿನ್ನವಾಗಿ ಗೋಚರಿಸುತ್ತವೆ. ಇವು ಶಿಷ್ಟ ಕನ್ನಡಕ್ಕಿಂತ ಹೇಗೆ ಭಿನ್ನ ಎಂಬುದನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

೧. ಉ > ಇ (ಏ) > **u** > **ɨ**

ಶಿಷ್ಟಕನ್ನಡದ 'ಉ' ಕಾರಾಂತ ಕ್ರಿಯಾ ರಚನೆಗಳು ಗೌಡ ಕನ್ನಡದಲ್ಲಿ ವ್ಯಂಜನಾಂತದಂತೆ ಗೋಚರಿಸಿದರೂ, ಅಂತ್ಯದಲ್ಲಿ 'ಇ' ಧ್ವನಿಯಾದ ಉಪಧ್ವನಿಯಂತೆ ಬಳಕೆಯಾಗುತ್ತದೆ. ಇವೇ ಬಹಳ ಸಂಖ್ಯೆಯಲ್ಲಿವೆ.

ಶಿ.ಕ.		ಗೌ.ಕ.		S.K.		G.K.
ಅಚ್ಚು	–	ಅಚ್ಚ್	–	accu	-	accɨ
ಅಂಜು	–	ಅಂಜ್	–	anju	-	anjɨ
ಅಡಗು	–	ಅಡ್ಂಗ್	–	aḍagu	-	aḍingɨ
ಅಂಟು	–	ಅಂಟ್	–	anṭu	-	anṭɨ
ಅರಗು	–	ಅರ್ಗ್	–	aragu	-	argɨ
ಅಳು	–	ಅಳ್	–	aḷu	-	aḷɨ
ಆಗು	–	ಆಗ್	–	a:gu	-	a:gɨ
ಆಳು	–	ಆಳ್	–	a:ḷu	-	a:ḷɨ
ಇಂಗು	–	ಇಂಗ್	–	ingu	-	ingɨ
ಇಣುಕು	–	ಇಣ್ಕ್	–	iṇuku	-	iṇkɨ
ಇರು	–	ಇರ್	–	iru	-	irɨ
ಉದುರು	–	ಉದ್ರ್	–	uduru	-	udurɨ
ಎಟುಕು	–	ಎಟ್ಕ್	–	eṭaku	-	eḍkɨ (etkɨ)
ಎಣಿಸು	–	ಎಣ್ಸ್	–	enisu	-	ensɨ
ಒರಗು	–	ಒರ್ಗ್	–	oragu	-	orgɨ
ಒರಸು	–	ಒರ್ಸ್	–	orasu	-	orsɨ
ಕಚ್ಚು	–	ಕಚ್ಚ್	–	kaccu	-	kaccɨ
ಕಟ್ಟು	–	ಕಟ್ಟ್	–	kaṭṭu	-	kaṭṭɨ

ಕಂತು	–	ಕಂತ್	–	kantu	-	krntɨ
ಕರಟು	–	ಕರ್ಂಟ್	–	karaṭu	-	karnṭɨ
ಕಲಸು	–	ಕಲ್ಸ್	–	kalasu	-	kalsɨ
ಕಳಚು	–	ಕಳ್ಚ್	–	kaḷacu	-	kaḷcɨ
ಕಳುಹಿಸು	–	ಕಳ್ಸ್	–	kaḷuhisu		kaḷsɨ
ಕಾಣು	–	ಕಾಣ್	–	ka:ṇu	-	kaiṇɨ
ಕಾರು	–	ಕಾರ್	–	ka:ru	-	ka:rɨ
ಕೀಳು	–	ಕೀಳ್	–	kɨ:ḷu	-	ki:lɨ
ಕುಪ್ಪಳಿಸು	–	ಕುಪ್ಪಳ್ಸ್	–	kuppaḷisu	-	kuppuḷsɨ
ಕೂಡಿಸು	–	ಕೂಡ್ಸ್	–	ku:ḍisu	-	ku:ḍisɨ
ಕೆಡಹು	–	ಕೆಡ್ಗ್	–	keḍuhu	-	keḍgɨ
ಕೆಣಕು	–	ಕೆಣ್ಕ್	–	keṇaku	-	keṇkɨ
ಕೆತ್ತು	–	ಕೆತ್ತ್	–	kettu	-	kettɨ
ಕೆದರು	–	ಕೆದ್ರ್	–	kedaru	-	kedɨrɨ
ಕೆರಳು	–	ಕೆರ್ಳ್	–	keraḷu	-	kerḷɨ
ಕೇರು	–	ಕೇರ್	–	ke:ru	-	ke:rɨ
ಕೇಳು	–	ಕೇಳ್	–	ke:ḷu	-	ke:ḷɨ
ಕೊಂಡಾಡು	–	ಕೊಂಡಾಡ್	–	konḍa:ḍu	-	konḍa:ḍɨ
ಗಳಿಸು	–	ಗಳಸ್	–	gaḷisu	-	gaḷsɨ
ಗೀರು	–	ಗೀರ್	–	gi:ru	-	gi:rɨ
ಗುಣಿಸು	–	ಗುಣ್ಸ್	–	guṇisu	-	guṇsɨ
ಚಿಗುರು	–	ಚಿಗ್ರ್	–	ciguru	-	cigirɨ
ಚಿಮುಕು	–	ಹನ್ಕ್ಸ್	–	cimuku	-	hanksɨ
ಜಗ್ಗು	–	ಜಗ್ಗ್	–	jaggu	-	jaggɨ
ಜಿನುಗು	–	ಜಿನ್ಕ್	–	jinugu	-	jinkɨ
ತಟ್ಟು	–	ತಟ್ಟ್	–	taṭṭu	-	taṭṭɨ

ತಳ್ಳು	–	ತಳ್ಳ್	–	taḷḷu	-	taḷḷɨ
ತೊಲಗು	–	ತೊಲ್ಗ್	–	tolagu	-	todgɨ
ತೊಡಗು	–	ತೊಡ್ಗ್	–	toḍagu	-	toḍgɨ
		ತೊಡ್ಂಗ್	–	toḍngɨ		
ದಕ್ಕು	–	ದಕ್ಕ್	–	dakku	-	dakkɨ
ದಾಟು	–	ದಾಟ್	–	da:ṭu	-	da:ṭɨ
ದೋಚು	–	ದೋಚ್	–	do:cu	-	do:cɨ
ನಕ್ಕು	–	ನೆಕ್ಕ್	–	nakku	-	nekkɨ
ನಗು	–	ನೆಗಾಡ್	–	nagu	-	nega:ḍɨ
ನಡುಗು	–	ನಡ್ಗ್	–	naḍugu	-	naḍgɨ
ನಡು	–	ನಡ್	–	naḍu	-	naḍɨ
ನಾಚು	–	ನಾಚ್	–	na:cu	-	na:cɨ
ನಾಟು	–	ನಾಟ್	–	na:ṭu	-	na:ṭɨ
ನಿಲುಕು	–	ನಿಲ್ಕ್	–	niluku	-	nilkɨ
ನೀಗು	–	ನೀಕ್	–	ni:gu	-	ni:kɨ
ನುಂಗು	–	ನುಂಗ್	–	nungu	-	nungɨ
ನೆರವೇರು	–	ನೇರವೇರ್	–	nerave:ru	-	nerave:rɨ
ನೆಲಸು	–	ನೆಲ್ಸ್	–	nelasu	-	nelsɨ
ಪೆಟ್ಟು	–	ಪೆಟ್ಟ್	–	peṭṭu	-	peṭṭɨ
ಬಗ್ಗು	–	ಬೊಗ್ಗ್	–	baggu	-	boggɨ
ಬದುಕು	–	ಬೊದುಕು	–	baduku	-	bodukɨ
ಬದಲಾಗು	–	ಬದ್ಲಾಗು	–	badala:gu	-	badila:gɨ
ಬಳಲು	–	ಬಳಲ್	–	baḷalu	-	baḷalɨ
ಬಾಚು	–	ಬಾಚ್	–	ba:cu	-	ba:cɨ
ಬಾಡು	–	ಬಾಡ್	–	ba:ḍu	-	ba:ḍɨ
ಬಾಳು	–	ಬಾಳ್	–	ba:ḷu	-	ba:ḷɨ

ಬಿಚ್ಚು	ಬಿಚ್ಚ್	biccu	biccɨ
ಬಿಟ್ಟು	ಬುಟ್ಟ್	biṭṭu	buṭṭɨ
ಬಿತ್ತು	ಬಿತ್ತ್	bittu	bittɨ
ಬೀಸು	ಬೀಸ್	bi:su	bi:sɨ
ಬೀಳು	ಬೀಳ್	bi:ḷu	bi:ḷɨ
ಬೆಳಗು	ಬೆಳ್ಗ್	beḷagu	beḷgɨ
ಬೇಡು	ಬೇಡ್	be:ḍu	be:ḍɨ
ಬೊಗಳು	ಬೊಗ್ಳ್	bogaḷu	bogɨḷɨ
ಮೊಗಚು	ಮೊಗ್ಚ್	mogacu	mogcɨ
ಮಡಗು	ಮೊಡ್ಗ್	maḍagu	moḍgɨ
ಮಾರ್	ಮಾರ್	ma:ru	ma:rɨ
ಮಾಸು	ಮಾಸ್	ma:su	ma:sɨ
ಮಿಗು	ಮಾಸ್	migu	mikkɨ
ಮಿಂಚು	ಮಿಂಚ್	mincu	mincɨ
ಮೀರು	ಮೀರ್	mi:ru	mi:rɨ
ಮುಕ್ಕಳಿಸು	ಮುಕ್ಕುಳ್ಸ್	mukkaḷisu	mukkuḷsɨ
ಮುಳುಗು	ಮುಳ್ಂಗ್	muḷugu	muḷngɨ
ಮೆಟ್ಟು	ಮೆಟ್ಟ್	meṭṭu	meṭṭɨ
ಮೆತ್ತು	ಮೆತ್ತ್	mettu	mettɨ
ಸಲಹು	ಸಲ್ಗ್	salahu	salgɨ
ಸಲ್ಲು	ಸಲ್ಲ್	sallu	sallɨ
ಸಾಕು	ಸಾಂಕ್	sa:ku	sa:kɨ
ಸಿಗು	ಸಿಕ್ಕ್	sigu	sikkɨ
ಸೇದು	ಸೇದ್	se:du	se:dɨ
ಸೇರು	ಸೇರ್	se:ru	se:rɨ
ಹಂಚು	ಹಂಚ್	hancu	hancɨ

ಹಾಡು –	ಹಾಡ್ –	ha:ḍu -	ha:ḍɨ
ಹಬ್ಬು –	ಹಬ್ಬ್ –	habbu -	habbɨ
ಹರಟೆಮಾಡು –	ಹರ್ಟೆಮಾಡ್ –	haraṭemaḍu -	harṭemaḍɨ
ಹರಡು –	ಹರ್ಂಡ್ –	haraḍu -	haranḍɨ
ಹರಸು –	ಹರ್ಸ್ –	harasu -	harsɨ
ಹಾರೈಸು –	ಹಾರೈಸ್ –	ha:raysu -	ha:raysɨ
ಹಿಗ್ಗು –	ಹಿಗ್ಗ್ –	higgu -	higgɨ
ಹಿಯಾಳಿಸು –	ಹಿಯ್ಯಾಳ್ಸ್ –	hiya:ḷisu -	hiyyaḷsɨ
ಹಿಸುಕು –	ಹಿಂಚ್ –	hisuku -	hincɨ
ಹೀರು –	ಹೀರ್ –	hi:ru -	hi:rɨ
ಹೆಕ್ಕು –	ಹೆಚ್ಚ್ –	hekku -	hekkɨ
ಹೆಚ್ಚು –	ಹೆಚ್ಚ್ –	heccu -	heccɨ
ಹೆರು –	ಹೆರ್ –	heru -	herɨ
ಹೇಸು –	ಹೇಸ್ –	he:su -	he:sɨ
ಹೊಗಳು –	ಹೊಗ್ಳ್ –	hogaḷu -	hogaḷɨ
ಹೊರಡು –	ಹೊರ್ಡ್ –	horaḍu -	horaḍɨ
ಹೊರು –	ಹೊರ್ –	horu -	horɨ
ಹೊರಳು –	ಹೊಣ್ಕ್ –	horaḷu -	hoṇkɨ
ಹೋಲು –	ಹೋಲ್ –	ho:lu -	ho:lɨ

೨. ಎ > ಇ > e > i

ಶಿಷ್ಟ ಕನ್ನಡದ 'ಎ' ಕಾರಾಂತ ಕ್ರಿಯಾರಚನೆಗಳು ಗೌಡ ಕನ್ನಡದಲ್ಲಿ 'ಇ' ಕಾರಾಂತಗೊಂಡು ಬಳಕೆಯಾಗುತ್ತವೆ. ಈ ಪ್ರಕ್ರಿಯೆ ಶಿಷ್ಟ ಕನ್ನಡದ ಆಡುಮಾತಿನಲ್ಲಿ ಇರುವುದನ್ನು ಗಮನಿಸಬಹುದು.

ಶಿ.ಕ.	ಗೌ.ಕ.	SK	GK
ಕಡೆ –	ಕಡಿ –	Kaḍe -	kaḍi
ಕರೆ –	ಕರಿ –	kare -	kari

ಕಲೆ	ಕಲಿ	kale	kali
ಕೆರೆ	ಕೆರಿ	kere	keri
ಕೊರೆ	ಕೊರಿ	kore	kori
ಕೊಳೆ	ಕೊಳಿ	kole	koli
ತಡೆ	ತಡಿ	taḍe	taḍi
ತೆರೆ	ತೆಗಿ	tere	tegi
ತೊರೆ	ತೊರಿ	tore	tori
ತೊಳೆ	ತೊಳಿ	toḷe	toḷi
ನೆಗೆ	ನೆಗಿ	nege	negi
ನೆರೆ	ನೆರಿ	nere	neri
ಬಗೆ	ಬಗಿ	bage	bagi
ಬರೆ	ಬರಿ	bare	bari
ಬೆಳೆ	ಬೆಳಿ	beḷe	beḷi
ಬೆರೆ	ಬೆರಿ	bere	beri
ಮರೆ	ಮರಿ	mare	mari
ಮಸೆ	ಮೊಸಿ	mase	mosi
ಮೊಗೆ	ಮೊಗಿ	moge	mogi
ಹೊಡೆ	ಹೊಡಿ	hoḍe	hoḍi
ಹೊಳೆ	ಹೊಳಿ	hoḷe	hoḷi

೨. ಅ > ಒ >, a > o

ಶಿಷ್ಟ ಕನ್ನಡದ ಕ್ರಿಯಾರಚನೆಗಳ ಮೊದಲ ಸ್ವರ 'ಅ' ಗೌಡಕನ್ನಡದಲ್ಲಿ 'ಒ' ಆಗುತ್ತದೆ. ಇದು ಇತರ ಪದಗಳಲ್ಲೂ ಕಾಣಿಸಿಕೊಳ್ಳುತ್ತದೆ.

ಶಿ.ಕ.		ಗೌ.ಕ.		SK		GK
ತಬ್ಬು	–	ತೊಬ್ಬು	–	tabbu	-	tobbu
ಬಡಿ	–	ಬೊಡಿ	–	baḍi	-	boḍi
ಬಗೆ	–	ಬೊಗೆ	–	bage	-	boge
ಬಗ್ಗು	–	ಬೊಗ್ಗು	–	baggu	-	boggu
ಬದುಕು	–	ಬೊದುಕ್	–	baduaku	-	boduk
ಬಯ್ಯು	–	ಬೊಯಿ	–	bayyu	-	boyi
ಬಳಿ	–	ಬೊಳಿ	–	baḷi	-	boḷi
ಮಗಚು	–	ಮೊಗ್ಚ್	–	magacu	-	mogcɨ
ಮಡಗು	–	ಮೊಡ್ಗ್	–	maḍagu	-	moḍgɨ
ಮಸೆ	–	ಮೊಸೆ	–	mase	-	mose

೪. ಉ > ಒ u > o

ಹಾಗೆಯೇ ಶಿಷ್ಟಕನ್ನಡದ ಕ್ರಿಯಾರಚನೆಗಳಲ್ಲಿ ನ ಮೊದಲ ಸ್ವರ 'ಉ' ಇದ್ದುದು ಗೌಡಕನ್ನಡದ ಕೆಲವೊಂದು ರಚನೆಗಳಲ್ಲಿ 'ಒ' ಆಗುತ್ತದೆ.

ಶಿ.ಕ.		ಗೌ.ಕ.		SK		GK
ಸುರಿ	–	ಸೊರಿ	–	suri	-	sori
ಕುಣಿ	–	ಕೊಣಿ	–	koṇi	-	koṇi
ಕುದಿ	–	ಕೊದಿ	–	kudi	-	kodi
ಉಲಿ	–	ಒಲಿ	–	uli	-	oli

೫. ಉ > ಇ u > e

ಶಿಷ್ಟಕನ್ನಡದ ಕ್ರಿಯಾರಚನೆಗಳಲ್ಲಿ 'ಉ' ಕಾರಾಂತ ಪದಗಳು ಗೌಡ ಕನ್ನಡದಲ್ಲಿ 'ಇ' ಕಾರಾಂತವಾಗಿ ಕಾಣಿಸಿಕೊಳ್ಳುತ್ತದೆ.

ಶಿ.ಕ.		ಗೌ.ಕ.		SK		GK
ಉಗುಳು	–	ಉಗಿ	–	uguḷu	-	ugi
ಕಾಯು	–	ಕಾಯಿ	–	ka:yu	-	ka:yi
ಕೊಯ್ಯು	–	ಕೊಯಿ	–	koyyu	-	koyi
ನೇಯು	–	ನೇಯಿ	–	ne:yu	-	neyi
ಬೇಯು	–	ಬೇಯಿ	–	me:yu	-	me:yi
ಸಾಯು	–	ಸಾಯಿ	–	sa:yu	-	sa:yi
ಹಾಯು	–	ಹಾಯಿ	–	ha:yu	-	haiyi
ಹೊಯ್ಯು	–	ಹೊಯಿ	–	hoyyu	-	hoyi

೬. ಶಿಷ್ಟ ಕನ್ನಡದಲ್ಲಿ ಮೊದಲನೇ ಸ್ವರ ದೀರ್ಘವಾದ ಕ್ರಿಯಾಪದಗಳಿಗೆ ಗೌಡಕನ್ನಡದಲ್ಲಿ ಅನುನಾಸಿಕ ಬರುತ್ತದೆ. ಇಲ್ಲಿ ಹಳಗನ್ನಡ ಕ್ರಿಯಾರಚನೆಗಳ ಮಾದರಿಯನ್ನು ಗೌಡಕನ್ನಡ ಉಳಿಸಿಕೊಂಡಿರುವುದನ್ನು ಗಮನಿಸಬಹುದು.

ಶಿ.ಕ.		ಗೌ.ಕ.	SK	GK
ತೋಡು	–	ತೋಂಡ್–	to:ḍu	to:nḍɨ
ತಾಗು	–	ತಾಂಗ್ –	ta:gu	ta:ngɨ
ಸಾಕು	–	ಸಾಂಕ್ –	sa:ku	sa:nkɨ
ಸೋಕು	–	ಸೋಂಕು–	so:ku	so:nkɨ
ನೀಡು	–	ನೀಂಡ್ –	ne:du	ne:nḍɨ

೭. ಶಿಷ್ಟ ಕನ್ನಡದ ಕ್ರಿಯಾರಚನೆಗೆ ಪ್ರತಿಯಾಗಿ ಗೌಡ ಕನ್ನಡದಲ್ಲಿ ಭಿನ್ನವಾದ ಕ್ರಿಯಾರಚನೆಗಳನ್ನು ಕಾಣಬಹುದು. ಕೆಲವೊಂದು ಕ್ರಿಯಾರಚನೆಗಳು ಶಿಷ್ಟ ಕನ್ನಡದಲ್ಲೂ ಬಳಕೆಯಲ್ಲಿರುವುದನ್ನು ಗಮನಿಸಬಹುದು.

ಅಂಟು	–	ಅಂಡ್	–	anṭu	-	anḍi
ಅದ್ದು	–	ಕಂತ್ಸ್	–	addu	-	kantisɨ
ಇಡು	–	ಇಸ್	–	iḍu	-	isɨ

ಈಜು – ಮೀಸ್ – i:ju - mi:sɨ

ಉಮ್ಮಳ – ದುಕ್ಕುಡ್ಸು – ummaḷa - dukkuḍsu

ಉರುಳು – ಹೊಣ್ಕ್ – uruḷu - hoṇkɨ

ಉಲಿ – ಒಲಿ – uli - oli

ಊಳು – ಹೂಡು – u:ḷu - hu:ḍu

ಉಳುಕು – ಉಳ್ಕ್ – uḷuku - uḷkɨ

ಊದು – ಉರ್ಗ್ – u:du - urgɨ

ಎಡವು – ಎಡ್ಗ್ – eḍavu - eḍgɨ

ಎಣಿಸು – ಲೆಕ್ಕಮಾಡ್– eṇisu - lekkama:ḍɨ

ಎತ್ತು – ನೇಚು – ettu - ne:cɨ

ಎರಚು – ಚೋಂಪ್– eracu - co:mpɨ

ಒಯ್ಯು – ತಕಂಡ್ ಹೋಗು –oyyu - takandɨhogu

ಕರಿ – ಹೊರಿ – Kari - hori

ಕಿವಿಚು – ಹಿಂಚ್ – Kivicu - hincɨ

ಕೊಳ್ಳು – ತಕ – Koḷḷu - taka

ಚಾಚು – ನೀಂಡ್ – ca:cu - ni:ndɨ

ಕುಕ್ಕು – ಕುಟ್ಟು – Kukku - kuṭṭu.

ಚೆಲ್ಲು – ಚಲ್ಲ್ – Chellu - callɨ

ಜಗಿ – ಅಗಿ – jagi - agi

ಜಜ್ಜು – ಪೊಜ್ಜಿ ಮಾಡ್– jajju pojjimadi

ತಣಿ – ಚೆಣಿ – taṇi ceṇi

ತೇಗು –	ಹುಳಿಯಾರಿಕೆ–	te:gu	huliyarike
ನಂದು –	ಕೆಡ್ –	nandu	keḍɨ
ನರಳು –	ನರ್ಕ್ –	naraḷu	narkɨ
ನೀಡು –	ಕೊಡು –	ni: ḍu	kodu
ಬತ್ತು –	ಆರು –	battu	a:rɨ
ಬೆಚ್ಚು –	ಹೆದರ್ –	beccu	hediri
ಮರಳು –	ತಿರ್ಗಿಬಾ –	maraḷu	tirɨgiba
ಮುದುಡು –	ಮುರುಂಟು –	muduḍu	muruṇṭu
ಲಾಲಿಸು –	ಆಲ್ಸ್ –	lailisu	a:lstɨ
ಸುರಿ –	ಸೊರ್ಗ್ –	suri	sorgi
ಸುರುಂಟು –	ಚುರುಂಟು –	suruṭu	curunṭu
ಚಿಮುಕು –	ಹನ್ಕ್ಸ್ –	cimuku	hanksi

೮. ಕೆಲವು ಕ್ರಿಯಾರಚನೆಗಳು ಶಿಷ್ಟ ಕನ್ನಡದಂತೆಯೇ ಇದ್ದು ಯಾವುದೇ ಬದಲಾವಣೆಯನ್ನು ಹೊಂದಿರುವುದಿಲ್ಲ. ಇವುಗಳಲ್ಲಿ ಕೆಲವು 'ಉ' ಕಾರಾಂತವಾದರೆ ಇನ್ನೂ ಕೆಲವು 'ಇ' ಕಾರಾಂತ ಕ್ರಿಯಾರಚನೆಗಳು.

ಶಿ.ಕ.	ಗೌ.ಕ.	SK	GK
ಉಕ್ಕು –	ಉಕ್ಕು –	ukku -	ukku
ಉಡು –	ಉಡು –	uḍu -	uḍu
ಉಣು –	ಉಣು –	uṇu -	uṇu
ಉಬ್ಬು –	ಉಬ್ಬು –	ubbu -	ubbu
ಊದು –	ಊದು –	u:du -	u:du
ಊರು –	ಊರು –	u:ru -	u:ru

ಒಪ್ಪು	–	ಒಪ್ಪು	–	oppu	-	oppu
ಓಡು	–	ಓಡು	–	o:ḍu	-	o:ḍu
ಓದು	–	ಓದು	–	o:du	-	o:du
ಕುಕ್ಕು	–	ಕುಕ್ಕು	–	kukku	-	kukku
ಕುಗ್ಗು	–	ಕುಗ್ಗು	–	kuggu	-	kuggu
ಕುಟ್ಟು	–	ಕುಟ್ಟು	–	kuṭṭu	-	kuṭṭu
ಕೊಚ್ಚು	–	ಕೊಚ್ಚು	–	koccu	-	koccu
ಕೊಡು	–	ಕೊಡು	–	koḍu	-	koḍu
ಕೊಬ್ಬು	–	ಕೊಬ್ಬು	–	kobbu	-	kobbu
ಕೊಲ್ಲು	–	ಕೊಲ್ಲು	–	kollu	-	kollu
ಗುದ್ದು	–	ಗುದ್ದು	–	guddu	-	guddu
ಗೆಯ್ಯು	–	ಗೆಯ್ಯು	–	geyyu	-	geyyu
ಗೋರು	–	ಗೋರು	–	go:ru	-	go:ru
ದೂಡು	–	ದೂಡು	–	du:ḍu	-	du:ḍu
ದೂರು	–	ದೂರು	–	du:ru	-	du:ru
ನಂಬು	–	ನಂಬು	–	nambu	-	nambu
ನೂಕು	–	ನೂಕು	–	nu:ku	-	nu:ku
ನೋಡು	–	ನೋಡು	–	no:ḍu	-	no:ḍu
ಮುಕ್ಕು	–	ಮುಕ್ಕು	–	mukku	-	mukku
ಮುಟ್ಟು	–	ಮುಟ್ಟು	–	muṭṭu	-	muṭṭu
ಮೂಡು	–	ಮೂಡು	–	mu:ḍu	-	mu:ḍu

ಮೂಸು –	ಮೂಸು –	mu:su -	mu:su
ಸುಡು –	ಸುಡು –	suḍu -	suḍu
ಸುತ್ತು –	ಸುತ್ತು –	suttu -	suttu
ಸೊಕ್ಕು –	ಸೊಕ್ಕು –	sokku -	sokku
ಸೋಲು –	ಸೋಲು –	so:lu -	so:lu
ಹೊಂದು –	ಹೊಂದು –	hondu -	hondu
ಹೋಗು –	ಹೋಗು –	ho:gu -	ho:gu

'ಇ' ಕಾರಾಂತ ಕ್ರಿಯಾರಚನೆಗಳು:

ಶಿ.ಕ.	ಗೌ.ಕ.	**SK**	**GK**
ಇರಿ –	ಇರಿ –	iri -	iri
ಇಳಿ –	ಇಳಿ –	iḷi -	iḷi
ಕಲಿ –	ಕಲಿ –	kali -	kali
ಕಡಿ –	ಕಡಿ –	kaḍi -	kaḍi
ಕದಿ –	ಕದಿ –	kadi -	kadi
ಕವಿ –	ಕವಿ –	kavi -	kavi
ಗೇಲಿ –	ಗೇಲಿ –	ge:li -	ge:li
ದುಡಿ –	ದುಡಿ –	duḍi -	duḍi
ನುಡಿ –	ನುಡಿ –	nuḍi -	nuḍi
ಬಿರಿ –	ಬಿರಿ –	biri -	biri
ಮುಗಿ –	ಮುಗಿ –	mugi -	mugi
ಮುಡಿ –	ಮುಡಿ –	muḍi -	muḍi
ಮುರಿ –	ಮುರಿ –	muri -	muri
ಸುರಿ –	ಸುರಿ –	suri -	suri

ಸುಳಿ	–	ಸುಳಿ	–	suḷi	-	suḷi
ಹನಿ	–	ಹನಿ	–	hani	-	hani
ಹರಿ	–	ಹರಿ	–	hari	-	hari
ಹೊಲಿ	–	ಹೊಲಿ	–	holi	-	holi

೯. ಗೌಡ ಕನ್ನಡದ ವಿಶೇಷ ಕ್ರಿಯಾರಚನೆಗಳು ಶಿಷ್ಟ ಕನ್ನಡದಲ್ಲಿಲ್ಲದ ಗೌಡ ಕನ್ನಡದಲ್ಲಿ ಮಾತ್ರ ಬಳಕೆಯಾಗುವ ವಿಶೇಷವಾದ ಅನೇಕ ಕ್ರಿಯಾರಚನೆಗಳಿವೆ.

ಅಡೆ	–	ತೇಪೆ ಹಾಕು
ಇಸ್	–	ಇಡು
ಇಕ್ಕ್	–	ಬಡಿಸು
ಕಲ್ಕ್	–	ಕಲಸು
ಕಿವ್ಂಚ್	–	ಹಿಸುಕು, ನಾದು
ಕುದ್ದ್‌ರ್	–	ಕೂರು, ಆಸೀನವಾಗು
ಕೂಡ್	–	ಆಯುಧ (ಕತ್ತಿ, ಚಾಕು ಇತ್ಯಾದಿ)ವನ್ನು ಹರಿತಗೊಳಿಸು.
ಕೊರ್ಚ್	–	ಆಕ್ರೋಶದಿಂದ ಧ್ವನಿಮಾಡು
ಕೋಸ್	–	ಸಿಕ್ಕಿಸು, ನೇತುಹಾಕು
ಚುಳ್ಳ್	–	ಕುಣಿದಾಡು.
ಚೋಂಪ್	–	ಎರಚು
ಚಂಡಿ	–	ಒದ್ದೆಯಾಗು
ಜಿಲಾಪ್	–	ಭೇದಿಯಾಗು
ಜರಿ	–	ನಿಂದಿಸು, ವ್ಯಂಗ್ಯವಾಡು
ಜಿಡ್ಡ್	–	ಮಲಿನವಾಗು, ಕೊಳೆಯಾಗು
ತರಿ	–	ಕತ್ತರಿಸು
ತಾಂಗ್	–	ಒರಗು

ತಿರ್‌ಟ್	–	ತಿರುಚು
ತೇಪ್	–	ಲೇಪಿಸು (ಮಣ್ಣು ಅಥವಾ ಗಾರೆ)
ತೊಕ್ಕು	–	ನೀರು ಎರಚು
ತೋಂಡ್	–	ತೋಡು
ನಗಾಡ್	–	ನಗು
ನೀಂಡ್	–	ಚಾಚು
ಪೋಯಿ	–	ಚಲಿಸು, ಹೋಗು
ಪೊಂದ್	–	ಚಿಮ್ಮು
ಬಿಸಾಡ್	–	ಎಸೆ
ಬುಕ್ಕು	–	ಮಾತನಾಡುವಾಗ ತಡವರಿಸು
ಮರ್ಲ್	–	ಮತಿಭ್ರಮಣೆ ಹೊಂದು, ಹುಚ್ಚಾಗು
ಮಸ್‌ಗ್	–	ಅಲುಗಾಡು
ಮಾಸ್	–	ಕೊಳೆಯಾಗು
ಮುಗ್ಗ್	–	ಕೆಟ್ಟವಾಸನೆ ಬರು, ನಾರು
ಮೊರಿ	–	ಬೊಗಳು
ಸಮಿ	–	ಸವೆ, ನಾಶವಾಗು
ಸಾಂಕ್	–	ಸಾಕು, ಪೋಷಿಸು
ಸೋಂಕ್	–	ಸೋಕು
ಹನ್‌ಕ್ಸ್	–	ಚಿಮುಕಿಸು
ಹಾಂಟ್	–	ಸವರಿಕೊಂಡು ಹೋಗು ಅಥವಾ ಡಿಕ್ಕಿ ಹೊಡೆ.
ಹುಗ್ಗ್	–	ನುಸುಳ, ನುಗ್ಗು
ಹೆಚ್ಚ್	–	ತಾಕು, ತಗುಲು
ಹೆಡ್‌ಗ್	–	ನಡೆಯುವಾಗ ಎಡವು.

ಹೆರಿ	–	(ತೆಂಗಿನಕಾಯಿ ಮುಂತಾದವು) ತುರಿಯುವುದು.
ಹೊಡ್‌ಕ್	–	ಮೊರದಲ್ಲಿ ಕೇರು
ಹೊಣ್ಕ್	–	ಉರುಳು
ಹೊರಿ	–	(ಎಣ್ಣೆಯಲ್ಲಿ ಪದಾರ್ಥ) ಕರಿಯುವುದು.
ಹೋಸ್	–	(ಬೆಂಕಿ) ಕತ್ತಿಸು, ಉರಿಮಾಡು, ಹೊತ್ತಿಸು.

ಗೌಡ ಕನ್ನಡದ ಕ್ರಿಯಾರಚನೆಗಳು ಶಿಷ್ಟ ಕನ್ನಡಕ್ಕಿಂತ ಹೇಗೆ ಭಿನ್ನವಾಗಿವೆ ಎಂಬುದನ್ನು ಮೇಲಿನ ಉದಾಹರಣೆಗಳು ಸೂಚಿಸುತ್ತವೆ. ಅದೇ ರೀತಿಯಲ್ಲಿ ಕಾಲ, ಆಖ್ಯಾತ ಪ್ರತ್ಯಯಗಳು ಸೇರಿ ಪೂರ್ಣಕ್ರಿಯಾರೂಪಾಗಳಾಗುವ ಸಂದರ್ಭದಲ್ಲೂ ಸಹಾ ಗೌಡ ಕನ್ನಡದ ಕ್ರಿಯಾ ರಚನೆಗಳು ಶಿಷ್ಟ ಕನ್ನಡಕ್ಕಿಂತ ಭಿನ್ನವಾಗಿವೆ ಎಂಬುದನ್ನು ಗಮನಿಸಬಹುದು.

ಅಧ್ಯಾಯ ೫
ಉಪಸಂಹಾರ

"ಗೌಡ ಕನ್ನಡ" ಕನ್ನಡದ ಒಂದು ವಿಶಿಷ್ಟ ಪ್ರಬೇಧವಾಗಿದೆ. ಅರೆಭಾಷೆ, ಅರೆಗನ್ನಡ ಎಂದೆಲ್ಲ ಹೆಸರುಗಳಿರುವ ಈ ಭಾಷೆ ಗೌಡ ಜನಾಂಗದವರ ನಡುವೆ ಮತ್ತು ಮನೆಯ ನೆಲೆಯಲ್ಲಿ ಬಳಕೆಯಲ್ಲಿದೆ. ಇದನ್ನು ಬರೆಯಲು ಕನ್ನಡ ಲಿಪಿಯನ್ನೇ ಬಳಕೆ ಮಾಡಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನ ಕೇವಲ ಕೊಡಗು ಜಿಲ್ಲೆಯ ಗೌಡ ಜನಾಂಗದವರು ಮಾತನಾಡುವ ಭಾಷಾ ಪ್ರಭೇದಕ್ಕೆ ಸೀಮಿತವಾಗಿವೆ. ಶಿಷ್ಟ ಕನ್ನಡಕ್ಕಿಂತ ಅನೇಕ ರೀತಿಯಲ್ಲಿ ಭಿನ್ನತೆಯನ್ನು ಹೊಂದಿ ಕನ್ನಡದ ಒಂದು ಪ್ರಭೇದವೆನಿಸಿಕೊಂಡಿದೆ.

ಗೌಡ ಕನ್ನಡದಲ್ಲಿ ಪುಲ್ಲಿಂಗ, ಪುಲ್ಲಿಂಗೇತರ, ಸರ್ವನಾಮಗಳಲ್ಲಿ ಪುಲ್ಲಿಂಗ, ಪುಲ್ಲಿಂಗೇತರ ಎಂಬ ಎಂಬ ಎರಡು ವಿಧಗಳಿದ್ದು, ಸ್ತ್ರೀಲಿಂಗಕ್ಕೆ ಪ್ರತ್ಯೇಕ ಪದ ಇಲ್ಲ. ಸರ್ವನಾಮಗಳಲ್ಲಿ ಪುಲ್ಲಿಂಗ ಮತ್ತು ಪುಲ್ಲಿಂಗೇತರಗಳಿಗೆ ಸಂವಾದಿಯಾಗಿ ಬರುವ ಕ್ರಿಯಾಪದಗಳಲ್ಲಿ ಏಕರೀತಿಯ ನಪುಂಸಕ ಪ್ರತ್ಯಯಾಂತ ರೂಪ ಬರುತ್ತದೆ. ಗೌಡ ಕನ್ನಡದ ಸರ್ವನಾಮಗಳಲ್ಲಿ ಸ್ತ್ರೀಲಿಂಗಕ್ಕೆ ಸ್ಥಾನವಿಲ್ಲದಿದ್ದರೂ, ತದ್ಧಿತಾಂತಗಳಲ್ಲಿ ಸ್ತ್ರೀಲಿಂಗಕ್ಕೆ ಪ್ರತ್ಯಯರೂಪವಿರುವುದು ಕಂಡು ಬರುತ್ತದೆ. (ಕುರುಡಿ, ಕಳ್ಳೆ, ನಂಟತಿ).

ಗೌಡ ಕನ್ನಡದ ವಿಭಕ್ತಿ ಪ್ರತ್ಯಯಗಳೂ ಕೂಡ ಶಿಷ್ಟ ಕನ್ನಡಕ್ಕಿಂತ ವಿಭಿನ್ನವಾಗಿವೆ ಎಂದು ಗಮನಿಸಲಾಗಿದೆ. ಇಲ್ಲಿ ದ್ವಿತೀಯ ಮತ್ತು ಷಷ್ಠಿ ವಿಭಕ್ತಿ ಪ್ರತ್ಯಯಗಳು ಹಾಗೂ ತೃತೀಯ ಮತ್ತು ಪಂಚಮಿ ವಿಭಕ್ತಿ ಪ್ರತ್ಯಯಗಳು ಏಕರೂಪದಲ್ಲಿರುವುದನ್ನು ಕಾಣುತ್ತೇವೆ. ಹಳಗನ್ನಡ ಮತ್ತು ನಡುಗನ್ನಡ ರೂಪದ ಪದಗಳು (ಅಡ್‌ಗ್/ಅಡ್‌ಂಗ್), ಜೊತೆಗೆ ಹಳಗನ್ನಡ ಪದಗಳ ನೇರ ಬಳಕೆ ಗೌಡ ಕನ್ನಡದಲ್ಲಿರುವುದನ್ನು ಗಮನಿಸಲಾಗಿದೆ. ಶಿಷ್ಟ ಕನ್ನಡದ ಕೆಲವು ಕ್ರಿಯಾ ಪದಗಳು ಗೌಡ ಕನ್ನಡದಲ್ಲಿ ಸಂಕ್ಷೇಪಗೊಂಡು ಬಳಕೆಯಾಗಿದೆ. (ಬನ್ನೆ, ಬಾಕು), ಹಳಗನ್ನಡದ 'ಅಂತೆ' ಎಂಬ ಅರ್ಥ ನೀಡುವ 'ಗಡ' ಎಂಬ ಅವ್ಯಯದ ಬಳಕೆ ಗೌಡಕನ್ನಡದಲ್ಲಿದೆ.

ಈ ಅಧ್ಯಯನದ ಮುಖ್ಯ ಭಾಗವಾದ ಕ್ರಿಯಾ ರಚನೆಗಳನ್ನು ಗಮನಿಸಿದಾಗ ಶಿಷ್ಟ ಕನ್ನಡಕ್ಕಿಂತ ಬಹಳಷ್ಟು ಭಿನ್ನವಾದ ಕ್ರಿಯಾರಚನೆಗಳು ಗೌಡಕನ್ನಡದಲ್ಲಿರುವುದನ್ನು ಇಲ್ಲಿ ಕಾಣಬಹುದು. ಧ್ವನಿ ಹಂತದಲ್ಲಾಗುವ ಬದಲಾವಣೆ, ಅರ್ಥದ ಹಂತದಲ್ಲಾಗುವ ಬದಲಾವಣೆಗಳನ್ನು ಗುರುತಿಸಲಾಗಿದೆ. ಧ್ವನಿ ಹಂತದ ಭಿನ್ನತೆಗಳನ್ನು ಆರು ಭಾಗಗಳಲ್ಲಿ ವಿವರಿಸಲಾಗಿದೆ. ಅಂದರೆ, 'ಉ' ಕಾರಾಂತ ಕ್ರಿಯಾರಚನೆಗಳು ಗೌಡಕನ್ನಡದಲ್ಲಿ ಅಂತ್ಯದಲ್ಲಿ 'ಇ' ಧ್ವನಿಮಾದ ಉಪಧ್ವನಿಯಾಗಿದೆ, 'ಇ' ಕಾರಾಂತ

ಪದಗಳು 'ಎ' ಕಾರಾಂತವಾಗಿ ಬಳಕೆಯಾಗುತ್ತವೆ. ಶಿಷ್ಟ ಕನ್ನಡದ ಕ್ರಿಯಾರಚನೆಗಳ ಮೊದಲ ಸ್ವರ 'ಅ' ಗೌಡ ಕನ್ನಡದಲ್ಲಿ 'ಒ' ಆಗುತ್ತದೆ. ಜೊತೆಗೆ ಯಾವುದೇ ಬದಲಾವಣೆ ಹೊಂದದೆ ಶಿಷ್ಟ ಕನ್ನಡದಂತೆಯೇ ಇರುವ ಕ್ರಿಯಾರಚನೆಗಳು, ಗೌಡಕನ್ನಡದಲ್ಲಿದೆ. ಈ ರೀತಿಯ ಭಿನ್ನತೆಗಳನ್ನು ಎರಡು ಭಾಗಗಳಲ್ಲಿ ವಿವರಿಸಲಾಗಿದೆ. ಅಲ್ಲದೆ, ಗೌಡ ಕನ್ನಡಕ್ಕೆ ವಿಶೇಷವಾಗಿರುವ ಅಂದರೆ, ಗೌಡಕನ್ನಡದಲ್ಲಿ ಮಾತ್ರ ಬಳಕೆಯಲ್ಲಿರುವ, ಶಿಷ್ಟಕನ್ನಡದಲ್ಲಿಲ್ಲದ ಕ್ರಿಯಾ ರಚನೆಗಳನ್ನೂ ಗುರುತಿಸಲಾಗಿದೆ. ಇವುಗಳ ಸಂಖ್ಯೆ ಸುಮಾರು ೪೬, ಇವುಗಳಲ್ಲಿ ಕೆಲವು ಕನ್ನಡದ ಕ್ರಿಯಾರಚನೆಗಳಿಗೆ ಸಮೀಪವಾಗಿವೆ. ಇವುಗಳಲ್ಲಿ ಕೆಲವು ಧ್ವನಿಗಳಲ್ಲಿ, ಆದಿ ಅಂತ್ಯ ಸ್ವರಗಳಲ್ಲಿ ವ್ಯತ್ಯಾಸವನ್ನು ಶಿಷ್ಟ ಕನ್ನಡದ ಬರಹ ಮತ್ತು ಆಡು ಮಾತಿನಲ್ಲಿರುವಂತೆ ವ್ಯತ್ಯಾಸವನ್ನು ಹೊಂದಿವೆ. (ಬರೆ ; ಬರಿ)

ಕೆಲವು ಶಿಷ್ಟ ಕನ್ನಡದ ಕ್ರಿಯಾರಚನೆಗಳಿಗೆ ಪ್ರತಿಯಾಗಿ ಗೌಡಕನ್ನಡದಲ್ಲಿ ಭಿನ್ನವಾದ ಕ್ರಿಯಾರಚನೆಗಳನ್ನು ಕಾಣಬಹುದು. (ಕರಿ;ಹೊರಿ, ಚಾಚು; ನೀಂಡ್)

ಅನುಬಂಧದಲ್ಲಿ ಗೌಡ ಕನ್ನಡದ ಕ್ರಿಯಾಪದಗಳನ್ನು ಅವುಗಳ ಅರ್ಥದೊಂದಿಗೆ ನೀಡಲಾಗಿದೆ. ಒಟ್ಟಾರೆಯಾಗಿ ಗೌಡ ಕನ್ನಡದ ಕ್ರಿಯಾ ರಚನೆಗಳು ಶಿಷ್ಟ ಕನ್ನಡಕ್ಕಿಂತ ಭಿನ್ನವಾಗಿದೆ ಎಂಬುದನ್ನು ಈ ಅಧ್ಯಯನದಲ್ಲಿ ಗಮನಿಸಲಾಗಿದೆ. ಹಾಗೆಯೇ ಗೌಡಕನ್ನಡದಲ್ಲಿ ಪ್ರಕಟವಾದ ಎರಡು ಕಥೆಗಳನ್ನು ಆ ಪ್ರಭೇದದ ಪರಿಚಯವಾಗಿ ನೀಡಲಾಗಿದೆ.

ಆಕರ ಗ್ರಂಥಸೂಚಿ

೧. ಅಂಗಡಿ ಎಸ್.ಎಸ್.: ೨೦೦೦, ಕನ್ನಡ ಕ್ರಿಯಾರೂಪಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಕುಶಾಲಪ್ಪ ಗೌಡ ಕೆ: ೨೦೦೭, ಕನ್ನಡ ಸಂಕ್ಷಿಪ್ತ ವ್ಯಾಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಕುಶಾಲಪ್ಪ ಗೌಡ ಕೆ: ೧೯೯೭, ಗೌಡ ಕನ್ನಡ ಎಂಬ ಕನ್ನಡ ಪ್ರಭೇದ, ವೀಳ್ಯ, ದಕ್ಷಿಣಕನ್ನಡ ಮತ್ತು ಕೊಡಗು ಜಿಲ್ಲೆ ಗೌಡ ಸಮ್ಮೇಳನ ಸ್ಮರಣಸಂಚಿಕೆ, ಸುಳ್ಯ.

೪. ಕೃಷ್ಣಪ್ಪ ಬಿ. ಕುದುಪಜೆ : ೧೯೮೫, ಗೌಡ ಸಂಸ್ಕೃತಿ, ಕೊಡಗು ಗೌಡ ವಿದ್ಯಾಸಂಘ, ಮಡಿಕೇರಿ.

೫. ಚಿಣ್ಣಪ್ಪ ನಡಿಕೇರಿಯಂಡ: ೧೯೨೪, ಪಟ್ಟೋಲೆ ಪಳಮೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೬. ದೇವಿಪ್ರಸಾದ್ ಎನ್.ಎಸ್: ೧೯೯೯, ಕೊಡಗಿನ ಗೌಡರು ವಲಸೆ ಬಂದವರಲ್ಲ, ಕೊಡಗು ಸಂಗಾತಿ, ಸಂಚಿಕೆ ೧೨, ಸಂಪುಟ ೩.

೭. ಪೂವಪ್ಪ ಕಣಿಯೂರು: ೨೦೦೭, ತುಳು – ಗೌಡಕನ್ನಡ, ತುಳು ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ರೇಣುಕಾ ಪ್ರಸಾದ್ ಕೆ.ವಿ. (ಸಂ):೧೯೯೮, ಅಕ್ಷಯ, ದಕ್ಷಿಣ ಕನ್ನಡ ಜಿಲ್ಲೆ ೭ ನೇ ಕನ್ನಡ ಸಾಹಿತ್ಯ ಸಮ್ಮೇಳಣ ಸ್ಮರಣಸಂಚಿಕೆ, ಸುಳ್ಯ.

೯. ವಿಶ್ವನಾಥ ಬದಿಕಾನ: ೧೯೨೮, ಗೌಡಕನ್ನಡದ ಜನಪದ ಕಥೆಗಳು, ಮದಿಪು ಪ್ರಕಾಶನ, ಮಂಗಳಗಂಗೋತ್ರಿ, ಮಂಗಳೂರು.

೧೦.ಶೀಲಾಮಣಿ ಪಟ್ಟಡ (ಸಂ): ೧೯೯೯, ಕೊಡಗಿನ ಅರೆಭಾಷೆಗೌಡರು, ಕೊಡಗು ಸಂಗಾತಿ, ಸಂಚಿಕೆ ೧೭, ಸಂಪುಟ ೩.

೧೧.ಶ್ರೀ ಕಂಠಯ್ಯ ತೀ.ನಂ: ೨೦೦೪, ಕನ್ನಡ ಮಧ್ಯಮ ವ್ಯಾಕರಣ, ಗೀತಾ ಬುಕ್ ಹೌಸ್, ಮೈಸೂರು.

೧೨.ಸಂಗಮೇಶ ಸವದತ್ತಿಮಠ: ೨೦೦೩, ಕನ್ನಡ ಭಾಷಾ ಸ್ವರೂಪ, ರೂಪರಶ್ಮಿ ಪ್ರಕಾಶನ, ಕಲಬುರ್ಗಿ.

೧೩.ಸರಸ್ವತಿ ಪ್ರಕಾಶ್ ಕೋರನ: ೨೦೦೮, ಗೌಡ ಸಮುದಾಯದ ಸಾಂಸ್ಕೃತಿಕ ಅನನ್ಯತೆ ಮತ್ತು ವಿಚಾರಶೀಲತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.

೧೪.ಸಾಂಬಮೂರ್ತಿ: ೨೦೦೬, ಕನ್ನಡದಲ್ಲಿ ಪ್ರತ್ಯಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫.Kushalappa Gowda K: 1970, Gowda Kannada, Annamalai University, Tamilnadu.

ಅನುಬಂಧ – ೧

ಗೌಡ ಕನ್ನಡದ ಕ್ರಿಯಾ ರಚನೆಗಳು.

ಅಚ್ಚಿ	–	ಅಚ್ಚು
ಅಂಜ್	–	ಅಂಜು
ಅಂಟ್	–	ಮುಟ್ಟು, ತಾಕು, ಒತ್ತಿಕೊಳ್ಳು
ಅಂಡ್	–	ಒತ್ತಿಕೊಂಡು, ಹತ್ತಿರಹೋಗು.
ಅಗಿ	–	೧. ಭೂಮಿಯನ್ನು ಯಾವುದಾದರು ಉಪಕರಣದಿಂದ ಅಗೆಯುವುದು ೨. ಆಹಾರ ಮುಂತಾದುವನ್ನು ಹಲ್ಲಿನಿಂದ ಜಗಿಯುವುದು
ಅಡ್‌ಗ್/ಅಡ್‌ಂಗ್	–	ಮರೆಯಾಗು, ಬಚ್ಚಿಟ್ಟುಕೊ.
ಅಡೆ	–	ತೇಪೆಹಾಕು.
ಅಣ್‌ಸ್	–	ಕಬ್ಬಿಣದ ಉಪಕರಣಗಳನ್ನು ಮೊನಚು ಮಾಡುವುದು,
ಅಮ್‌ಕ್	–	ಅದುಮು, ಒತ್ತು, ಅಮುಕು.
ಅರ್‌ಗ್	–	ಜೀರ್ಣವಾಗು
ಅಲ್ಲಾಡ್	–	ಅಲುಗಾಡು
ಅಳಿ	–	ಅಳತೆಮಾಡು, ಪ್ರಮಾಣವನ್ನು ಕಂಡು ಹಿಡಿ,
ಅವುಸ್	–	ಬಚ್ಚಿಡು. ಅಡಗು.
ಆಗ್	–	ಆಗು
ಆಡ್	–	ಆಟವಾಡು,
ಆರ್	–	ಒಣಗು.
ಆರ್ಸ್	–	ಒಣಗಿಸು, ಒಣಗುವಂತೆ ಮಾಡು,
ಆಳ್	–	ಆಳು. ರಾಜ್ಯಭಾರ ಮಾಡು.
ಇಕ್ಕ್	–	ಬಡಿಸು.

ಇಸ್	–	ಇಡು.
ಇಂಗ್	–	ಬತ್ತು.
ಇಣ್ಕ್	–	ಇಣಕು.
ಇರ್	–	ಇರು.
ಈಜ್	–	ಈಜು, ನೀರಿನಲ್ಲಿ ಚಲಿಸು,
ಉಕ್ಕು	–	ಮೇಲಕ್ಕೆ ಉಬ್ಬು, ಹಿಗ್ಗು,
ಉಕ್ಕುಸ್	–	ಉಗುಳುವಂತೆ ಮಾಡು,
ಉಜ್ಜು	–	ಒರಸು, ಅಳಿಸು. ತಿಕ್ಕು.
ಉಡು	–	ಧರಿಸು, ತೊಡು (ವಸ್ತ್ರ)
ಉಣ್ಣ್	–	ತಿನ್ನು ಊಟಮಾಡು.
ಉದ್ರ್	–	ಕೆಳಗೆ ಬೀಳು.
ಉದ್ರ್ಸ್	–	ಉದುರಿಸು, ಕೆಳಕ್ಕೆ ಬೀಳುವಂತೆ ಮಾಡು.
ಉಬ್ಬು	–	ಹೆಚ್ಚಾಗು, ಮೇಲಕ್ಕೆ ಬರು.
ಉರಿ	–	ಸುಡು, ಜ್ವಲಿಸು,
ಉರ್ಸ್	–	ಉರಿಯುವಂತೆ ಮಾಡು.
ಉರ್ಳ್	–	ಉರುಳು.
ಉರ್ಳ್ಸ್	–	ಉರುಳಿಸು, ಕೆಳಗೆ ಬೀಳಿಸು, ಹೊರಳಾಡಿಸು.
ಉಸ್ರಾಡ್	–	ಉಸಿರಾಡು.
ಉಳ್ಕ್	–	ಉಳುಕು, ನರ ಸಿಕ್ಕಿಕೊಳ್ಳುವುದು, (ನರ) ಚಳುಕು ಹಿಡಿನೋವುಂಟಾಗು
ಉಳಿ	–	ಇರು, ನೆಲಸು, ನಿಲ್ಲು.
ಉಳ್ಸ್	–	ಇರುವಂತೆಮಾಡು, ಬಿದುಕಿಸು, ಉಳಿಸು. ಮಿಕ್ಕುವಂತೆ ಮಾಡು,
ಊದು	–	೧. ಬಾಯಿಂದ ಗಾಳಿಯನ್ನು ಹೊರಡಿಸು. ೨.ಬಾತುಕೊಳ್ಳು, ದಪ್ಪಗಾಗು, ಉಬ್ಬು.

ಊರು	–	ಊರುವುದು.
ಎಗ್‌ರಾಡ್	–	ಹಾರಾಡು, ಕೋಪದಿಂದ ಬೇರುವುದು.
ಎಟ್‌ಕ್	–	ಎಟುಕು.
ಎಣ್‌ಸ್	–	ಲೆಕ್ಕಹಾಕು.
ಎತ್ತ್	–	ಮೇಲಕ್ಕೆತ್ತು, ಏರಿಸು, ಎತ್ತಿಹಿಡಿ, ತಲುಪು, ಮುಟ್ಟು
		ಎತ್ತ್‌ಸ್ – ತಲುಪಿಸು, ತಲುಪುವಂತೆ ಮಾಡು
ಎಳಿ	–	ಜಗ್ಗು, ಸೆಳೆದುಕೊ
ಏಳ್	–	ಏಲು, ನಿಲ್ಲು , ಎಚ್ಚರವಾಗು
ಏಳ್‌ಸ್	–	ಮೇಲಕ್ಕೆ ಎಬ್ಬಿಸು, ನಿದ್ರೆಯಿಂದ ಎಚ್ಚರಗೊಳಿಸು.
ಒಕ್ಕಲ್	–	ಬೆಳೆಯಿಂದ ಕಸಕಡ್ಡಿಗಳನ್ನು ಬೇರ್ಪಡಿಸು.
		ಒಕ್ಕಣಿಮಾಡು
ಒಗಿ	–	ಬಟ್ಟೆ ತೊಳೆಯುವುದು.
ಒಪ್ಪು	–	ಸಮ್ಮತಿಸು .
ಒಪ್ಪುಸ್	–	ಸಮ್ಮತಿಸುವಂತೆ ಮಾಡು, ಅರ್ಪಿಸು.
ಕಚ್ಚ್	–	ಹಲ್ಲಿನಿಂದ ಕಡಿ, ಕಚ್ಚು.
ಕದಿ	–	ಕಳವು ಮಾಡು, ಅಪಹರಿಸು.
ಕಟ್ಟ್	–	ಕಟ್ಟು , ನಿರ್ಮಿಸು.
ಕಂತ್	–	ಮುಳುಗು,
ಕಡಿ	–	ಸೀಳು ತುಂಡರಿಸು.
ಕರಿ	–	೧. ಬರಹೇಳು ಆಮಂತ್ರಿಸು,
		೨. ಸೀದು ಹೋಗು. ಸುಟ್ಟು ಕರಕಾಗು.
		೩. (ದನದ) ಹಾಲನ್ನು ಹಿಂಡು.
ಕರ್‌ಕ್‌ಲ್	–	ಸುಟ್ಟು ಕಪ್ಪಾಗು,
ಕಲಿ	–	ಕಲಿ, ತಿಳಿದುಕೊಳ್ಳುವುದು.
ಕಲ್‌ಸ್	–	ಕಲಸು. ಬೆರಸು.
ಕಲ್‌ಕ್	–	ಕುಲುಗಿಸು, ಕಲಜ

ಕವಿ	–	ಆವರಿಸು.
ಕಂಯಿ	–	ವಿಷವಾಗು,ಕಹಿಯಾಗು.
ಕಾಸ್	–	ಬಿಸಿಮಾಡು, ಬೇಯಿಸು
ಕಾರ್	–	ವಾಂತಿಯಾಗು.
ಕಾಣ್	–	ನೋಡು.
ಕಿಚ್ಚ್	–	ಅಸೂಯೆಪಡು.
ಕಿಂವ್‌ಚ್	–	ಹಿಸುಕು, ನಾದು.
ಕೀಸ್	–	೧. ತೆಳುವುಗೊಳಿಸು. ಕೃಶಗೊಳಿಸು.
		೨. ಸಿಪ್ಪೆಯನ್ನು (ಕತ್ತಿ .ಚಾಕುವಿನಿಂದ) ತೆಗೆ
ಕುಕ್ಕ	–	ಜೋರಾಗಿ ಇಡು, ಬಟ್ಟೆಯನ್ನು ಕುಸುಕು.
ಕುಗ್ಗ	–	ಕಡಿಮೆಯಾಗು.
ಕುಡಿ	–	ಸೇವಿಸು, ಪಾನಮಾಡು.
ಕುಟ್ಟು	–	ಒನಕೆಯಿಂದ ಧಾನ್ಯವನ್ನು ಏಟುಹಾಕಿ
		ಪುಡಿಮಾಡು.ಅಥವಾ ಹೊಟ್ಟು ತೆಗೆ
ಕುತ್ತು	–	ಚುಚ್ಚು, ಇರಿ ತಿವಿ.
ಕುದ್‌ರ್	–	ವ್ಯವಸ್ಥೆಗೆ ಸರಿಹೊಂದು, ಏರ್ಪಡು, ಒದಗು,
		ತೀರ್ಮಾನವಾಗು.
ಕುದ್‌ರ್‌ಸ್	–	ವ್ಯವಸ್ಥೆಗೊಳಿಸು
ಕುದ್ದ್‌ರ್	–	ಕೂರು. ಆಸೀನವಾಗು
ಕುಲ್‌ಕ್	–	ಅಲುಗಾಡಿಸು
ಕುಂಟ್	–	ಒಂದೇ ಕಾಲಿನಮೇಲೆ ಭಾರ ಹಾಕಿ ವಿಕಾರವಾಗಿ
		ನಡೆ, ವಕ್ರವಾಗಿ ನಡೆ.
ಕೂಗ್	–	ಅಳುವುದು.
ಕೂಡ್	–	ಸೇರು, ಒಂದಾಗು, ಸಾಧ್ಯವಾಗು, ಸಂಭೋಗಿಸು,
		ಸಂಗ್ರಹಿಸು.
ಕೆತ್ತ್	–	ಆಯುಧದಿಂದ ನೆಲವನ್ನು ಅಗೆಯುವುದು.

ಕೆದ್‌ರ್	–	ಹರಡು, ಚೆದುರು, ಚೆಲ್ಲಾಪಿಲ್ಲಿಯಾಗು.
ಕೆಮ್ಮು	–	ಕಫದಿಂದ ಗಂಟಲಲ್ಲಿ ಏನಾದರೂ ಸಿಕ್ಕಿ, ಶ್ವಾಸ ಕ್ರಿಯೆಗೆ ಪ್ರತಿರೋಧವಾದಾಗ ಶಬ್ದದೊಂದಿಗೆ ಉಸಿರು ಕ್ರಿಯೆಗೆ ಹಾಕು
ಕೆಡ್	–	ಹಾಳಾಗು, ಕೆಟ್ಟುಹೋಗು
ಕೆಣ್‌ಕ್	–	ಕೆರಳಿಸು, ರೇಗಿಸು.
ಕೆಯ್	–	ಸಂಭೋಗಿಸು
ಕೆರೆ	–	ಉಗುರಿನಿಂದ ಕೆರೆ ಗುದ್ದಲಿಯಿಂದ ನೆಲದ ಮೇಲ್ಪದರವನ್ನು ತೆಳುವಾಗಿ ತೆಗೆಯುವುದು.
ಕೆರ್‌ಳ್	–	ಸಿಟ್ಟಾಗು, ಕೆರಳು
ಕೇಳ್	–	ಆಲಿಸು, ಬೇಡು
ಕೊಚ್ಚು	–	ಜಂಬದ ಮಾತು, ಹೊಗಳಿಕೊಳ್ಳುವುದು. ತುಂಡರಿಸು.
ಕೊಡು	–	ನೀಡು
ಕೊಡ್‌ಕ್	–	ಒದರು, ಕೊಡುವು
ಕೊಣಿ	–	ಕುಣಿ, ನೃತ್ಯಮಾಡು
ಕೊಬ್ಬು	–	ದಷ್ಟಪುಷ್ಟವಾಗು
ಕೊರ್‌ಚ್	–	ಆಕ್ರೋಶದಿಂದ ಧ್ವನಿಮಾಡು, ಚೀರು, ಕಿರಿಚು
ಕೊರ್‌ಗ್	–	ಸವೆ, ಸೊರಗು, ವ್ಯಥೆಪಡು
ಕೊಲ್ಲು	–	ಸಾಯಿಸು
ಕೋಸು	–	ಸಿಕ್ಕಿಸು, ನೇತುಹಾಕು
ಗದ್‌ರ್	–	ಬೆದರಿಸು, ಗರ್ಜಿಸು
ಗಳ್ಸ್	–	ಗಳಿಸು, ಪಡೆದುಕೊಳ್ಳುವುದು
ಗೀರ್	–	ಗೀರು
ಗೀಚ್	–	(ಲೇಖನಿಯಿಂದ) ವಕ್ರವಕ್ರವಾಗಿ ಬರೆ.

ಗುಣ್ಸ್	–	ಗುಣಿಸು
ಗೊಣ್‌ಗ್	–	ಅಸ್ಪಷ್ಟವಾದ ಧ್ವನಿಯಲ್ಲಿ ಮಾತನಾಡು.
ಗೋರ್	–	ಎಳೆದುಕೊಳ್ಳು
ಗೋಳ್	–	ಅಳು, ದುಃಖಿಸು
ಚಪ್ಪ್	–	ಚಪ್ಪರಿಸು.
ಚೊಲ್ಲು	–	ಸುಲಿಯುವುದು.
ಚೆಲ್ಲ್	–	ಎರಚು, ಹರಡು, ಚೆಲ್ಲು
ಚೋಂಪು	–	ಎರಚು
ಚಿರ್‌ಂಬ್	–	ಕಿವುಚು
ಚಿಮ್‌ಕ್	–	ಸಿಂಪಡಿಸು
ಚೀಪ್	–	ಹೀರು, ಸೀಪು
ಚಿಮ್ಮ್	–	ಪುಟಿ
ಜಗ್ಗ್	–	ಜಗ್ಗ
ಜಬ್ಬ್	–	ಹೀರು
ಜರಿ	–	ನಿಂದಿಸು, ವ್ಯಂಗ್ಯವಾಡು
ಜಾರು	–	ನುಣುಚಿಕೊಳ್ಳು, ಹೆಜ್ಜೆಯ ಹಿಡಿತ ತಪ್ಪು.
ಜಿನ್‌ಕ್	–	ಜಿನುಗು
ಜಿಲಾಪ್	–	ಭೇದಿಯಾಗು
ಜಿಂಟ್	–	ಚಿವುಟು
ಜಿಡ್ಡ್	–	ಕೊಳೆಯಾಗು, ಮಲಿನವಾಗು
ಜೂಗ್	–	ತೂರಾಡು
ಜೋಲು	–	ಜೋತು ಬೀಳು
ಡೊಂಕ್	–	ಓರೆಯಾಗು, ವಕ್ರವಾಗು
ತಂಪ್	–	ತಣ್ಣಗಾಗು
ತಗ	–	ತೆಗೆದುಕೊ
ತಗ್‌ಲ್	–	ತಾಕು, ಮುಟ್ಟು

ತಟ್ಪ್	–	ಬಡಿ, ತಟ್ಟು
ತಡಿ	–	ತಡೆ, ನಿಲ್ಲಿಸು
ತಡ್ರ್ಸ್	–	ತಡವರಿಸು, ತಡೆ ತಡೆದು ಮಾತನಾಡು, ಮುಗ್ಗರಿಸು
ತಣ್ಣಂಗೆ	–	ತಣ್ಣಗಾಗು
ತರ್ಸ್	–	ತರುವಂತೆ ಮಾಡು
ತರಿ	–	ಕತ್ತರಿಸು, ಸೀಳು
ತಾಂಗ್	–	ಒರಗು, ತಾಗು
ತಿನ್ನ್	–	ಉಣ್ಣು, ತಿನ್ನು
ತಿಕ್ಕ್	–	ಉಜ್ಜು
ತಿದ್ದ್	–	ತಿದ್ದು, ಸರಿಪಡಿಸು
ತಿರ್ಗ್	–	ವ್ಯತ್ಯಾಕಾರವಾಗಿ ಚಲಿಸು, ಹಿಂತಿರುಗಿ ನೋಡು.
ತಿಳಿ	–	ಶುದ್ಧವಾಗು, ಗ್ರಹಿಸು.
ತಿಳ್ಸ್	–	ಸ್ಪಷ್ಟಪಡಿಸು.
ತೀರ್	–	ಖಾಲಿಯಾಗು, ನಾಶವಾಗು, ಮಾರಣಹೋಮ
ತೀರ್ಸ್	–	ಮುಗಿಸು, ಪರಿಹಾರವಾಗು
ತಿರ್ಟ್	–	ತಿರುಚು
ತುಂಬ್	–	ಭರ್ತಿಯಾಗು
ತುಂಬ್ಸ್	–	ತುಂಬ್ಸ್ – ಭರ್ತಿಮಾಡು
ತುಕ್ಕು	–	ಅಲೆದಾಡು, ತಿರುಗಾಡು
ತುರ್ಕ್	–	ಒತ್ತಿ ತುಂಬು, ಒಳ ಸೇರಿಸು
ತುರ್ಕ್ಸ್	–	ಒತ್ತಿ ತುಂಬಿಸು
ತೂಗ್	–	ತೂಕಮಾಡು
ತೆಗಿ	–	ಹೊರತರು, ಕಳವು ಮಾಡು, ತೆಗೆದುಕೊಳ್ಳು, ತೆಗೆಯುವುದು.
ತೆಗ್ಸ್	–	ತೆಗೆಯಿಸು, ಹೊರಬರುವಂತೆ ಮಾಡು.
ತೇಲ್	–	ತೇಲು, ನೀರಿನಲ್ಲಿ ಮುಳುಗದಂತಿರು

ತೇಲ್‌ಸ್	–	ನೀರಿನಲ್ಲಿ ಮುಳುಗದೆ ಚಲಿಸುವಂತೆ ಮಾಡು, ತೇಲಿಸು
ತೇಗ್	–	ತೇಗು
ತೇಪ್	–	ಗಾರೆ, ಮಣ್ಣು, ಮುಂತಾದವುಗಳನ್ನು
ತೊಕ್ಕು	–	ನೀರು ಎರಚು
ತೊಡ್ಗ್	–	ತೊಡಗು
ತೊರಿ	–	ತೊರೆ, ತ್ಯಜಿಸು
ತೊಲ್ಗ್	–	ತೊಲಗು
ತೊಳಿ	–	ತೊಳೆ, ಸ್ವಚ್ಛ ಮಾಡು
ತೋಡ್	–	ತೋಡು
ತೋಡ್‌ಸ್	–	ತೋಡಿಸು
ದಕ್ಕ್	–	ದಕ್ಕು
ದಾಟ್	–	ದಾಟು, ಮುಂದೆ ಸಾಗು
ದುಡಿ	–	ಕೆಲಸಮಾಡು, ಸಂಪಾದಿಸು
ದುಡ್‌ಕ್	–	ಹೆಜ್ಜೆ ತಪ್ಪು, ಮುಂದಾಲೋಚನೆಯಿಲ್ಲದೆ ಕೆಲಸ ಮಾಡು, ದುಡುಕು.
ದೂಡ್	–	ತಳ್ಳು, ನೂಕು
ದೂರ್	–	ತೆಗಳು, ಹೀಯಾಳಿಸು, ನಿಂದಿಸು
ದೋಪ್	–	ದೋಚು
ನಗೆ	–	ನಗು
ನಂಚ್	–	(ಊಟದೊಂದಿಗೆ ರುಚಿಗಾಗಿ ಉಪ್ಪಿನಕಾಯ ಇತ್ಯಾದಿ) ನಂಜು
ನಡ್	–	ನೆಡು
ನಡಿ	–	ನಡೆ
ನಡ್‌ಸ್	–	ನಡೆಯುವಂತೆ ಮಾಡು
ನಡ್‌ಗ್	–	ಕಂಪಿಸು
ನರೆ	–	ಕೂದಲು ಬೆಳ್ಳಗಾಗು, ನರೆವು

ನರ್ಕ್	–	ನರಳು
ನಾಚ್	–	ನಾಚಿಕೆಪಡು
ನಾಟ್	–	ನಾಟು
ನಾರ್	–	ದುರ್ವಾಸನೆ ಬರು
ನಿಗ್ರ್	–	ನೆಟ್ಟಗಾಗು
ನಿಮ್ರ್	–	ನೆಟ್ಟಗಾಗು
ನಿಲ್ಲ್	–	ನಿಂತುಕೊಳ್ಳು, ಚಲಿಸದಿರು
ನಿಲ್ಲ್‌ಸ್	–	ಚಲಿಸದಂತೆ ಮಾಡು
ನೀಕ್	–	ತೀರಿಸು
ನೀಂಡ್	–	ನೀಡು, ಚಾಚು
ನುಂಗ್	–	ನುಂಗು, ಕಬಳಿಸು
ನುಗ್ಗ್	–	ಪ್ರವೇಶಿಸು, ನುಗ್ಗು
ನುಗ್ಗ್‌ಸ್	–	ಪ್ರವೇಶಿಸವಂತೆ ಮಾಡು
ನೂಕ್	–	ತಳ್ಳು, ದಬ್ಬು
ನೆನಿ	–	ಒದ್ದೆಯಾಗು, ತೋಯು
ನೆನಿ	–	ಸ್ಮರಿಸು
ನೆರಿ	–	ಗುಂಪುಗೂಡು
ನೊರೆ	–	ಬುರುಗು
ನೋಡ್	–	ಕಾಣು, ಪರೀಕ್ಷಿಸು, ನೋಡು
ಪರ್ಂಡ್	–	(ಉಗುರಿನಿಂದ) ಕೆರೆ, ಗೀರು
ಪಳ್ಂಗ್	–	ಪಳಗು, ಹತೋಟಿಗೆ ಬರು, ಅಭ್ಯಾಸವಾಗು
ಪಳ್ಗ್ಸ್	–	ಹತೋಟಿಗೆ ತರು.
ಪುಟಿ	–	ಮೇಲಕ್ಕೆ ಚಿಮ್ಮು
ಪೂಜು	–	ಸವರು, ನೇವರಿಸು, ಪೂಸು.
ಬಗಿ	–	ಬಗಿಯುವುದು.
ಬಗ್ಗ್	–	ಬಾಗು, ಬಗ್ಗು, ವಿನಯವನ್ನು ಹೊಂದು.

ಬಚ್ಚ್	–	ಆಯಾಸ ಹೊಂದು
ಬಡಿ	–	ಹೊಡೆ, ಬಾರಿಸು
ಬತ್ತ್	–	ಒಣಗು, ಇಂಗು
ಬರಿ	–	ಬರೆ
ಬಯಿ	–	ಮೂದಲಿಸು
ಬಯ್ಸ್	–	ಬಯ್ಯುವಂತೆ ಮಾಡು
ಬಳ್ಸ್	–	ಉಪಯೋಗಿಸು
ಬಾಚ್	–	ಬಾಚು, ತೆಗೆದುಕೊಳ್ಳು, ಎತ್ತು (ಕಸ ಇತ್ಯಾದಿ)
ಬಾಡ್	–	ಬಾಡು, ಮುದುಡು
ಬಾಳ್	–	ಜೀವಿಸು
ಬಿಚ್ಚ್	–	ತೆರವುಗೊಳಿಸು, ತೆಗೆ
ಬಿಡ್	–	ಬಿಡು, ತೊರೆ, ತ್ಯಜಿಸು
ಬಿತ್ತ್	–	ಬೀಜ ಹಾಕು, ಬಿತ್ತು
ಬಿರಿ	–	ಬಿರುಕುಂಟಾಗು, ಅರಳು
ಬಿಸಾಡು	–	ಎಸೆ
ಬೀಸ್	–	ವೇಗವಾಗಿ ಹೊಡೆ, ಗಾಳಿಹಾಕು (ಧಾನ್ಯಗಳನ್ನು ಬೀಸು)
ಬೀಳ್	–	ಬೀಳು
ಬುಕ್ಕ್	–	ತೊದಲು
ಬೆಚ್ಚ್	–	ಭಯಪಡು, ಕಂಪಿಸು
ಬೆರಿ	–	ಬೆರೆ
ಬೆವ್ರ್	–	ಬೆವರು
ಬೆಳಿ	–	ಬೆಳವಣಿಗೆ ಹೊಂದು, ಸಸ್ಯ ಸಮೃದ್ಧವಾಗು
ಬೆಳ್ಸ್	–	ಬೆಳೆಸು
ಬೇಯಿ	–	ಬೇಯುವುದು
ಬ್ಯಾಜರ	–	ಆಲಸ್ಯವನ್ನು ಹೊಂದು, ಆಸಕ್ತಿಯನ್ನು ಕಳೆದುಕೊಳ್ಳು

ಬೊಗ್ಗು	–	ಬಗ್ಗು
ಬೊಗ್ಳ್	–	ಬಗಳು
ಬೊದ್ಕ್	–	ಬದುಕು, ಜೀವಿಸು
ಮರಿ	–	ಮರೆತುಬಿಡು
ಮರ್ಲ್	–	ಮತಿಭ್ರಮಣೆ ಹೊಂದು, ಹುಚ್ಚಾಗು
ಮಲ್ಗ್	–	ಮಲಗು, ಒರಗು
ಮಲ್ಗ್ಸ್	–	ಮಲಗಿಸು
ಮಾಡ್	–	ಕಾರ್ಯರೂಪಕ್ಕೆ ತರು, ನೆರವೇರಿಸು
ಮಾಡ್ಸ್	–	ನೇರವೇರಿಸು
ಮಾಸ್	–	ಕೊಳೆಯಾಗು
ಮಾಯ್	–	ವಾಸಿಯಾಗು
ಮಾರ್	–	ಮಾರಾಟ ಮಾಡು
ಮಿಕ್ಕ್	–	ಹೆಚ್ಚಾಗು, ಉಳಿಕೆಯಾಗು
ಮಿಡಿ	–	ಮಿಡಿಯುವುದು.
ಮಿಸ್ಕ್	–	ಅದುರು, ಅಲ್ಲಾಡು
ಮಿನ್ಗ್	–	ಪ್ರಕಾಶಿಸು
ಮೀ	–	ಸ್ನಾನ ಮಾಡು
ಮೀಸ್	–	ಸ್ನಾನ ಮಾಡಿಸು
ಮೀರ್	–	ಅತಿಕ್ರಮಿಸು, ಅತಿಶಯವಾಗು
ಮುಂದ್	–	ದಾಟಿಕೊಂಡು ಹೋಗು, ಹಿಂದೆ ಬಿಟ್ಟು ಮುಂದಕ್ಕೆ ಹೋಗು
ಮುಕ್ಕು	–	ಗಬಗಬನೆ ತಿನ್ನು
ಮುಚ್ಚು	–	ಮರೆಮಾಡು, ರಹಸ್ಯವಾಗಿಡು
ಮುಟ್ಟು	–	ಸ್ಪರ್ಶಿಸು, ತಲುಪು
ಮುಡಿ	–	(ಹೂವನ್ನು) ತಲೆಯಲ್ಲಿ ಧರಿಸು
ಮುತ್ತ್	–	ಆವರಿಸು, ಸುತ್ತುವರಿ

ಮುರಿ	–	ತುಂಡು ಮಾಡು
ಮುರುಂಟು	–	ಮುಗುಡು
ಮುಸ್ಕ್	–	ಆವರಿಸು
ಮುಳ್ಂಗ್	–	ಮುಳುಗು
ಮುಳ್ಂಗ್ಸ	–	ಮುಳುಗಿಸು
ಮೂಡ್	–	ಮೂಡು, ಉದಯಿಸು
ಮೂಸ್	–	ವಾಸನೆ ನೋಡು
ಮೆಚ್ಚು	–	ಒಲಿ, ಇಷ್ಟವಾಗು
ಮೆಟ್ಟ್	–	ತುಳಿ, ಹೆಜ್ಜೆ ಇಡು
ಮೆಟ್ಟಿಸ್	–	ತುಳಿಯುವಂತೆ ಮಾಡು
ಮೆತ್ತ್	–	ಬಳಿ
ಮೆಯ್	–	(ಪ್ರಾಣಿಗಳಾದ ದನ, ಆಡು) ಆಹಾರ ತಿನ್ನು
ಮೆರಿ	–	ಮೆರೆಯುವುದು
ಮೊಗ್ಚ	–	ಮಗಚು, ತಿರುವು
ಮೊಡ್ಗ	–	ಇಡು, ಮಡಗು
ಮೊರಿ	–	ಬೊಗಳು
ರಂಪ	–	ಗಲಾಟೆ ಮಾಡು
ರಗಳೆ	–	(ಮಕ್ಕಳು) ಗಲಾಟೆ ಮಾಡು
ರೇಗ್	–	ಕೋಪಗೊಳ್ಳು, ಕೆರಳು
ರೇಗ್ಸ್	–	ಕೆರಳಿಸು
ರೋಸ್	–	ಬೇಸರಗೊಳ್ಳು
ವಾಲ್	–	ಓರೆಯಾಗು, ಒಂದು ಪಕ್ಕಕ್ಕೆ ಬಾಗು
ವಾಲಾಡ್	–	ತೂಗಾಡು, ತೂರಾಡು
ಸಂಚ್	–	ಉಪಾಯ, ಹೊಂಚು ಹಾಕು
ಸಡ್ಲ	–	ಬಿಗಿ ಇಲ್ಲದಂತಾಗು
ಸಮಿ	–	ಸವೆ, ನಾಶವಾಗು

ಸಲ್ಗ್	–	ಸಲಹು
ಸಳಿ	–	ಚಳಿ
ಸಾಕ್	–	ಸಾಕು, ಕಾಪಾಡು, ಪೋಷಣೆ ಮಾಡು
ಸಾಗ್ಸ್	–	ಸಾಗಿಸು, ನಿಭಾಯಿಸು
ಸಾರ್	–	ಸುದ್ದಿ ಹಬ್ಬಿಸು
ಸಿಕ್ಕ್	–	ಸಿಗು, ಸಿಕ್ಕಿ ಬೀಳು, ವಶವಾಗು, ಲಭಿಸು
ಸಿಗಿ	–	ಸೀಳು
ಸಿಡಿ	–	ಹಾರು
ಸಿಡ್ಕ್	–	ಕೋಪಗೊಳ್ಳು
ಸೀಂಟ್	–	ಒರಸು, ತಿಕ್ಕು
ಸೀನ್	–	ಮೂಗಿನಿಂದ ಸಶಬ್ದವಾಗಿ ಉಸಿರುಬರು
ಸುಡ್	–	ಸುಟ್ಟುಹಾಕು, ಉರಿಯಾಗು, ಬೇಯಿಸು
ಸುತ್ತ್	–	ಅಲೆದಾಡು, ಪ್ರದಕ್ಷಣೆ ಹಾಕು, ಸುರುಳಿ ಮಾಡು
ಸುರಿ	–	ಮೇಲಿನಿಂದ ಹಾಕು
ಸುರ್‌ಟ್	–	ತಿರುಚು, ಸುತ್ತು
ಸೊಕ್ಕ್	–	ಅಹಂಕಾರ ಪಡು, ದಪ್ಪವಾಗು (ಕೊಬ್ಬು)
ಸೇದ್	–	ಧೂಮಪಾನ ಮಾಡು,
		ಬಾವಿಯಿಂದ ನೀರನ್ನು ಮೇಲಕ್ಕೆತ್ತು.
ಸೇರ್	–	ತಲುಪು, ಕೂಡು
ಸೊರ್‌ಗ್	–	ಬಾಡು, ಕೃಶವಾಗು
ಸೋರ್	–	ಪ್ರವಹಿಸು
ಸೋಲ್	–	ಅಪಜಯವನ್ನು ಹೊಂದು, ದುರ್ಬಲವಾಗು
ಹಂಚ್	–	ಹಂಚು
ಹಗೆ	–	ದ್ವೇಷ ಸಾಧಿಸು
ಹನ್‌ಕ್	–	ತೊಟ್ಟಿಕ್ಕು
ಹಬ್ಬ್	–	ಹಬ್ಬು

ಹರ್ಂಡ್	–	ಅಗಲವಾಗಿ ಹಾಸು, ಹರಡು
ಹರ್ಸ್	–	ಹರಸು, ಆರ್ಶೀವಾದಿಸು
ಹಾಡ್	–	ಹಾಡು
ಹಾಂಟ್	–	ಡಿಕ್ಕಿಹೊಡೆ, ಸವರಿಕೊಂಡು ಹೋಗು
ಹಾರ್	–	ಜಿಗಿ, ಮೇಲಕ್ಕೆ ನೆಗೆ
ಹಾರ್ಸ್	–	ಹಾರುವಂತೆ ಮಾಡು
ಹಾಸ್	–	ಹರಡು
ಹಿಂಚ್	–	ಹಿಸುಕು
ಹಿಗ್ಗ್	–	ಹಿಗ್ಗು
ಹಿಂಡ್	–	ಗಟ್ಟಿಯಾಗಿ ಹಿಸುಕಿ ವಸರುವಂತೆ ಮಾಡು
ಹಿಯ್ಯಾಳ್ಸ್	–	ಹೀಯಾಳಿಸು
ಹೀರ್	–	ಹೀರಿಕೊಳ್ಳು
ಹುಗ್ಗ್	–	ನುಗ್ಗು, ನುಸುಳು
ಹುಟ್ಟ್	–	ಜನ್ಮ ಹೊಂದು
ಹುರ್ಗ್	–	ಬಾಯಿಂದ ಗಾಳಿ ಊದು
ಹುಳಿ	–	ಹುಳಿಯಾಗು
ಹೂಂಸ್	–	ಅಪಾನವಾಯುವನ್ನು ಬಿಡು
ಹೂಡ್	–	ಉಳುವುದು, ನೊಗಕಟ್ಟು
ಹೂಣ್	–	ಹೂತುಹಾಕು
ಹೆಕ್ಕ್	–	ಹೆಕ್ಕು
ಹೆಟ್ಟ್	–	ತಾಗಿಸು, ತಗುಲಿಸು
ಹೆಡ್ಗ್	–	ನಡೆಯುವಾಗ ಮುಗ್ಗರಿಸು, ಎಡವು
ಹೆಣ್ಗ್	–	ಹೋರಾಡು
ಹೆಣೆ	–	ನೇಯುವುದು
ಹೆದ್ರ್	–	ಭಯಪಡು
ಹೆದ್ರ್ಸ್	–	ಭಯಪಡಿಸು

ಹೆರ್	–	ಹೆರು, ಹಡೆಯು
ಹೆರಿ	–	ತುರಿಯುವುದು
ಹೇಲ್	–	ಮಲವಿಸರ್ಜನೆ ಮಾಡು
ಹೇಸ್	–	ಹೇಸು
ಹೇಸಿಕೆ	–	ಅಸಹ್ಯಪಡು
ಹೇಳ್	–	ನುಡಿ, ಮಾತನಾಡು, ವಿವರಿಸು
ಹೇರ್	–	ಹೊತ್ತುಕೊಳ್ಳುವುದು, ಭಾರಹಾಕು
ಹೊಗೆ	–	ಧೂಮ
ಹೊಟ್ಟ್	–	ಸ್ಫೋಟವಾಗು
ಹೊಡ್ಕ್	–	ಮೊರದಲ್ಲಿ ಕೇರು
ಹೊಡಿ	–	ಬಾರಿಸು, ನೋವಾಗುವಂತೆ ಹೊಡೆ, ಪುಡಿಮಾಡು
ಹೊಣ್ಕ್	–	ಹೊರಳಾಡು
ಹೊದಿ	–	ಹೊದಿಕೆ ಹಾಕು
ಹೊಯಿ	–	ಸುರಿ, ಹುಯ್ಯು
ಹೊರ್	–	ಭಾರ ಎತ್ತು, ಹೊರು
ಹೊರ್ಡ್	–	ಹೊರಡು, ತಯಾರಾಗು
ಹೊರ್ಳ್	–	ಉರುಳು
ಹೊರಿ	–	(ಎಣ್ಣೆಯಲ್ಲಿ) ಕರಿ, ಆಹಾರ ಪದಾರ್ಥಗಳನ್ನು ಬಾಣಲೆಯಲ್ಲಿ ಕಾಯಿಸು
ಹೊಲಿ	–	ಪ್ರಕಾಶಿಸು, ಕಳೆಯೇರು
ಹೋಲ್	–	ಸಾಟಿಯಾಗು, ಹೋಲು
ಹೋಸ್	–	ಹೊದಿಸು, ಕತ್ತಿಸು (ಬೆಂಕಿ), ಹೊತ್ತಿಸು.

ಅನುಬಂಧ - ೨

ಕಥೆ – ೧

"ಶಾರೀ, ಓ ಶಾರಿ .... ಶಾರದಾ..........

ಪೂವಣ್ಣಂಗೆ ಕಾಟ್ಲ ಮೀನ್‌ಂತೇಳಿರೆ ಪ್ರಾಣ! ಒಂದಿನ ಗೋಣಿಕೊಪ್ಪದ ಮಾರ್ಕೆಟ್ಟ್‌ಗೆ ಹೋಗಿತ್. ಅಂದ್ ದೊಡ್ಡ ದೊಡ್ಡ ಕಾಟ್ಲಾ ಮೀನ್ ಬೇರೆ ಮಾರ್ಕೇಟ್ಟ್‌ಗೆ ಬಂದಿತ್. ಇನ್ ಪೂವಣ್ಣನ ಕೇಳೊಕಾ? ಮೂರು ಕಿಲೋ ತೂಕದ ಮೀನ್‌ನೇ ತಕ್ಕಂಡತ್. ಸೀದ ಮನೆಕಡೆ ಬಾತ್. ಬಂದಂಗೆ ಅವನೇ "ಅಚ್‌ಕಟ್" ಮಾಡಿಕೆ ಕುದ್‌ಕಂಡತ್. ಸಾಮಾನ್ಯಾಗಿ ಗಂಡ್ ಜನ ಅಂಥ ಕೆಲ್ಸಕ್ಕೆಲ್ಲ ಕೂರ್‌ದ್‌ಲೆ. ಆದರೆ ಪೂವಣ್ಣ ಕಂಗಲ್ಲ. ಹೆಣ್ಣಿಗೆ ಕಷ್ಟ ಕೊಡಿಕಾಗದ್‌ಂತೇಳುವ ಪೈಕಿ. ಸರಿ, ಅಚ್‌ಕಟ್ಟೆಲ್ಲ ಆದ ಮೇಲೆ ಹೆಣ್‌ಗೆ ಹೇಳ್ತ್: "ನೋಡು ಇದರ್ಲಿ ಅರ್ಧನ ಹುಳ್ಳಂಗಾಗಿ ಗೈಮು ಮಾಡ್. ಬಾಕಿ ಇರ್‌ದರ್‌ನ ಹೆಕ್ಲಾಸ್ಸಾಗಿ ಹೊರಿ." ಹಿಂಗೆ ಹೇಳಿ ಪೂವಣ್ಣ "ಪ್ಯಾಕೆಟ್" ಅಂಗ್ಡಿಗೆ ಹೋತು.

ಎರಡು ಪ್ಯಾಕೇಟ್ "ಕಾಟಿ" ಏರಿಸಿದ ಪೂವಣ್ಣ ಮನೆಗೆ ಬಾತ್. ಮನೆಗೆ ಬಾಕನ ಅಲ್ಲಿ ಸುತ್ತಮುತ್ತೆಲ್ಲಾ ಮೀನ್‌ಗೈಮುದ್ ಗಮನ ಬಾಕನ ಇಂವನ ಬಾಯಿ ತುಂಬಾ ನೀರ್ ತುಂಬಿಕಂಡತ್. ಇನ್ ಹೋರ್ದ ಮೀನ್‌ನ ಗಮನಂತೂ ಆಹಾ! ಗಮನ ಮೂಗಿಗೆ ಬಡೀತಿದ್ದಂಗೆ ಹೊಟ್ಟೆ ತುಂಬಿ ಕಂಡ್ ಬಂದಂಗಾತ್. ಹೆಣ್ಣಿಗೆ ಹೇಳ್ತ್ "ನಾ ತೋಟಕೆ ಹೋಗಿ ಎರಡ್ ನಿಂಬುಳಿ ತನ್ನೆ. ನೀ ಆಗ ನಾಕ್ ರೊಡ್ಡಿ ಮೆತ್ತಿ ಬುಡು" ಹೆಣ್ಣ್ ಆತ್ ಮಾಡಿನೆಂತ ಹೇಳ್ತ್. ತೋಟಲಿ ಕರ್ಟ್ ನಿಂಬುಳಿನೇ ಇದ್ದದ್. ಅಂತೂ ಅದರ್ನೇ ಕೊಯ್ಕಂಡ್ ಬಾತ್. ಬಂದಂಗೆ ಆ ನಿಂಬುಳಿನ ನೀಂಬಿ ನೀಂಬಿ ನೀರ್ ಮಾಡ್ತ್. ಆ ನಿಂಬುಳಿ ಗಮನ ಈ ಮೀನ್ ಗೈಮುದು ಗಮನ, ಅಲ್ಲಿ ಪೊಕ್ಕಳ ರೊಟ್ಟಿ ಅದೆಲ್ಲಾ ಕಂಡಾಕನ ಪೂವಣ್ಣಂಗೆ ಹೆಣ್‌ನ ಮೇಲೆ ಪ್ರೀತಿ ಹೆಚ್ಚಾತ್.

"ಶಾರೀ, ಓ ಶಾರೀ, ಶಾರದಾ.......... ನೀನ್ ನಂಗೆ ಹೇಳಿ ಮಾಡ್ಸಿದ ಹೆಣ್‌ನೆ. ನೀನ್ ನನ್ನ ಚಿನ್ನನೇ. ನಿನ್ನ ಕೈಗೆ ಕೊಟ್ಟದ್ದೆಲ್ಲಾ ವಜ್ರ ಅಬುಟ್ಟದೆನೆ. ನೀನ್ ನನ್ನ ಬಂಗಾರಿನೆ" ಹಿಂಗೆ ಹೆಣ್‌ನ ಹೊಗಳ್ತಾ ಇರಕನ ಹೆಣ್‌ನ ಮುಖ ಮೊಟ್ಟೆ ಹೆಂಟೆದ್ ಮುಖ ಕೆಂಪಾದೆಲ್ಲ ಹಂಗೆ ಕೆಂಪಾತ್. ಒಂದ್ ಕಡೆಂದ ಗಂಡನ ಹೊಗಳಿಕೆ, ಇನ್ನೊಂದ್ ಕಡೆಂದ ಬೆಂಕಿದ್ ಕಾಚಲ್.

"ನೀವು ಸುಮ್ಮನಿರಿ ಒಮ್ಮೆ" ಎಂತ ಹೆಣ್ ಹೇಳಿಕಂಡ್ ರೊಟ್ಟಿದ್ ಬೂದಿನ್ನೆಲ್ಲಾ ದಡ್ ಬಡ್ತ ಹೊಡ್ದ್ ರಟ್ಟಿಸಿತ್. ಒಂದರ ಮೇಲೊಂದ್ ರೊಟ್ಟಿನ ತಂದ್ ಮೇಜದ ಮೇಲೆ ಇಸಿತ್. ಗೈಪು ಚೆಟ್ನಿನೂ, ಹೊರ್ದಮೀನ್‌ನೂ ತಂದ್ ಇಸಿತ್. ನಿಂಬುಳಿನೂ ಕೊಯ್ದ್ ಇಸಿತ್. ಪೂವಣ್ಣನ ಬಟ್ಲಿಗೆ ಇಕ್ಕಿತ್. ಅವುಳೂ ಇಕ್ಕಿಕಂಡತ್. ನಿಂಬುಳಿನ ಲಾಯ್ಕಾಗಿ ಎಲ್ಲಾ ತುಂಡುಗಳಿಗೂ ಹನಿಕಿಸಿಕಂಡೋ. ಪೂವಣ್ಣ ಬರೀ ಬಾಯಿಗೆ ಒಂದ್ ತುಂಡ್‌ನ ಇಸಿತ್. "ಆಹಾ! ಎಷ್ಟ್ ರುಚಿಯಾಗಿ ಮಾಡಿಯೊಳಾ." ಹಿಂಗೆ ಹೇಳಿಕಂಡ್ ಇಬ್ಬರೂ ಊಟ ಮಾಡ್ತಾ ಇದ್ದೊ. ಸಾಮಾನ್ಯಾಗಿ ಗದ್ದಾಳದ ಅಡುಗೆ ಮಾಡ್ದ ದಿನ ಉಂಬಕೆ ಕೂರ್‌ಕನ ಒಂದೊ ಗಂಡ, ಇಲ್ಲೆ ಹೆಣ್ ಕಾಲ್‌ಕೆರ್ಕಂಡ್ ಜಗಳ ಶುರು ಮಾಡಿವೆ. ಅಂದ್‌ನ ಊಟ ಅರ್ಧಲೇ ಆಗಿ ಜಗಳಲೇ ಊಟ ಕೊನೆ ಆದೆ. ಆದರೆ ಪೂವಣ್ಣನ ಮನೇಲಿ ಹಂಗೆ ಆತ್‌ಲೆ. ರೊಟ್ಟಿ ಪೂರಾ ಮುಗಿತಾ ಇರ್‌ಕನ ಕಡೇಗೊಂದ್ ತುಂಡ್ ಹೊರ್ದ ಮೀನ್‌ನ ಪೂವಣ್ಣ ತಿಂತಾ ಇತ್. ತಿಂಬಕನ ಏನಾತ್. ಒಂದ್ ಮುಳ್ಳು ಇವನ ದೊಂಡೆಗೆ ಕಂತಿಕಂಡತ್. ಇಂವ ಬೆರಳ್ ಹಾಕಿತ್. ಮುಳ್ಳು ಇನ್ನೂ ಒಳಗೆ ಕಂತಿಕಂಡತ್. ಹೆಣ್ ಅನನ್ನ ಮುದ್ದೆ ಮಾಡಿ ನುಂಗಿಕೆ ಕೊಟ್ಟತ್. ಇಂವ ಅದರ್ನೂ ನುಂಗಿತ್. ಆದರೂ ಮುಳ್ಳು ಬಲಾಗಿ ಕಂತಿಕಂಡತ್. ಪೂವಣ್ಣಂಗೆ ಮೂರು ಲೋಕ ಕಾಂಬಂಗಾತ್. ಏನೇನೋ ಆಗ್ತಾ ಉಟ್ಟು, ದಮ್‌ಕಟ್ಟಿದಂಗೆ ಆತ್. ಉಸ್‌ರೇ ನಿತ್‌ಹೋದಂಗೆಲ್ಲಾ ಆಗಿ ಜೋರಾಗಿ ಅಯ್ಯೋತ ಕಿರ್‌ಚಿಬುಟ್ಟದೆ.

"ಅಯ್ಯೋ ಇದೆಂತಾ ಕನ್‌ಸ್? ಕೆಸನ ಗೈಪು ತಿಂದ್ ನಿಲ್‌ಗಿದ ನಂಗೆ ಈ ಕನ್ಸ್ ಕಾಂಬೊಕಾ? ಹೆಣ್ಣ್ ಜಗಳಾಡಿಕಂಡ ತೌರು ಮನೆಗೆ ಹೋದವ್ವ ಅಲ್ಲೇ ಕುಕ್ಕುರು ಬಡ್ದಟ್ಟು, ದರ್ವೇಸಿ"ಂತ ಹೆಣ್ಣಿಗೆ ಬಯ್ಕಂಡ್ ಹಲ್ಲುಜ್ಜಿತ್. ರಾತ್ರೆದ್ ಕೆಸನ ಗೈಪು ಹಾಕಂಡ್ ತಂಗಳ ಊಟ ಮಾಡಿ ಗದ್ದೆ ಕಡೆ ಹೋತು.

ಕಥೆ – ೨

ಮೇಡಂ, ನಮ್ಮಜ್ಜಿ ತೀರಿಹೋದ್ರು......!

ಕೂಸುನ ಮೀಸಿ, ಚಂಡಿ ತೆಗ್ದ್, ಒಲೆ ಮುಂದೆ ಕುದ್ ಉಪ್ಪು ಕಲ್‌ನ ತಲೆಸುತ್ತ ತಂದ್ ಒಲೆಗೆ ಹಾಕಿ, ಒಲೆ ಮಸಿನ ಬೊಟ್ಟು ಹಾಕಿ, ನೆತ್ತಿಗೆ ಮೈಗೆ ಪೂರಾ ಪೌಡರ್ ಹಾಕಿ, ತೊಟ್ಲ್ ಕೆಳಗೆ ಧೂಪ ಹೊಗೆ ಹಾಕಿ, ಹಾಲ್‌ಕೂಡ್ಸಿ ಮಲ್‌ಗಿಸಿರೆ ಆ ಕೂಸಿಗೆ ನಿದ್ದೆಯೋ ನಿದ್ದೆ. ಸಕ್ಕರೆಯ ಸವಿನಿದ್ದೆ.ಆ ನಿದ್ದೆಲಿ ಆ ಕೂಸು ನಗಾಡುವ ಪೊರ್ಲುನ ನೋಡೊಕು. 'ಕೂಸು ದೇವ್ರೊಟ್ಟಿಗೆ ಮಾತಾಡ್ತಾ ಉಟ್ಟು, ಆ ದೇವ್ರು ಈ ಕೂಸುನ ನಗಾಡ್‌ಸ್ತಾ ಉಟ್ಟು'ತ ಅಜ್ಜಿಕ ಮಾತಾಡುದರ ನೀವೂ

ಕೇಳಿರುವಿರಿ. ಹಿಂಗೆ ನಿದ್ದೆ ಮಾಡ್ವ ಕೂಸು ಬೇಗ ಎದ್ದರೆ ಅವ್ವನ ಗೋಳು. ಮನೆ ಕೆಲ್ಸ ಅರ್ಧಂಬರ್ಧ ಆಗಿದ್ದದೆ. ಅಂತೂ ಜಾಣೆ ಅವ್ವ ಹೆಂಗಾರ್ ಕೂಸುನ ನೋಡಿಕಂಡ್, ಮನೆ ಕೆಲ್ಸ್ ಮಾಡಿಕಂಡ್ ಅತ್ತೆಗೆ ಜವಾಬು ಕೊಟ್‌ಕಂಡ್ ಸುಧಾರಿಸಿಬುಟ್ಟದೆ. ಕೂಸು ಎದ್ ದಮ್‌ಕಟ್ಟಿ ಮರ್‌ಡಕನ ಅವ್ವ ಓಡಿ ಬಂದ್ ಕೂಸುನ ಸಮಾಧಾನ ಮಾಡುವ ಪೊರ್ಲುನ ಕೇಳಿಕೆ ಇನ್ನೂ ಪೊರ್ಲಾಗಿದ್ದದೆ.

ಕೂಸು ಎಚ್ಚರಾಗಿ ಹೆಂಗೆ ಮರ್ಬದೆ ಹೇಳಿ? ಕಾಲ್‌ಬಡ್ಕಂಡ್ ತಲೆ ಕುದೋಲುನ ಮುಷ್ಠಿ ಮಾಡಿ ಎಳ್ಕಂಡ್, ಮುಖನ ಕೆಂಪು ಮಾಡಿಕಂಡ್, ಹಾಸಿಗೆನೆಲ್ಲಾ ಚೆಂಡಿ ಮಾಡಿಕಂಡ್ ಕರ್ನಾಟಕ ಶಾಸ್ತ್ರೀಯ ಸಂಗೀತನೋ, ಹಿಂದೂಸ್ಥಾನಿ ಸಂಗೀತನೋ ಅಭ್ಯಾಸ ಮಾಡುವಂಗೆ ಮರ್ಬದೆ. ಹಿಂಗಿರಕನ ಅವ್ವ ಓಡಿ ಬಂದ್: "ಓ ಓ ಓ ಆರಪ್ಪಾ ಮರುಡುದೂ...... ಇಟ್ ಬ್ಯಾಗ ಎದ್‌ಬುಟ್ರೇ ಉಲ್ಲೇಪ ಉಲ್ಲೆ ಉಲ್ಲೆ...... ಇಂದಾ ಬೋಬು ಕುಡಿ.... ಬ್ಯಾಡಾ? ಆಕಪ್ಪಾ ಬ್ಯಾಡಾ.......? ಸುಟ್‌ಬಂದ್ ಬುಡ್ತಾ............. ಉಲ್ಲೆಪ್ಪ ಉಲ್ಲೆ.... ಉಕ್ಕು ಉಂಡಿಯಾ? ಬ್ಯಾಡಾ ? ಆಕಪ್ಪಾ ಬ್ಯಾಡ........? ನಿಂಗೆ ಆರಪ್ಪಾ ಬಯ್ದವು? ಓ ! ಇವುಳಾ? ನಿಂಗೆ ನಿಂಗೆ..... ಅಬ್ಬಾ! ಈ ಕೂಸಿಗೆ ನೀ ಬೊಯ್ಯಕಾಗೊಳಾ! ನಿಲ್ ನಿಲ್, ಕೂಸುನ ಸುಮ್ಮ ಸುಮ್ಮಂಗೆ ಮರ್ಡ್ಸಿಯಲಾ". ಹಿಂಗೆ ಹೇಳಿಕಂಡ್ ದೊಡ್ಡ ಗೂಡೆಗೆ ಬಯ್ಕಂಡ್ ಆ ಗೂಡೆ ಬೆನ್ನಿಗೆ ಸುಮ್ಮನೆ ಗುದ್ದಿದಂಗೆ ಮಾಡಕನ ಈ ಕೂಸು ಮರ್ಡುದರ ನಿಲ್ಸಿದೆ. ನಗಾಡ್ದೆ.

ಎಷ್ಟೋ ಮನೆಲಿ ಕೂಸುನ ನೋಡಿಕಂಬವೇ ಇರುದುಲೆ. ಅಪ್ಪನೂ ಅವ್ವನೂ ಗಯ್ಯಕೆ ಗದ್ದೆಗೋ, ತೋಟಕೋ ಹೋದರೆ ಕೂಸ್ನಕ್ಕಲೆ ಯಾರೂ ಇಲ್ಲದೆ ಅದ್ ಏಕಾಂಗಿಯಾಗಿ ಬೆಳಿತಾ ಇದ್ದದೆ. ಎಲ್ಲೋ ಒಂದ್ ಕಡೆ ಒಂದ್ ಕೂಸುನ 'ಮುಚ್ಚಿ ಹಾಕಿ' ಕೆಲ್ಸಕ್ಕೆ ಹೋತಿದೊಗಡ! ಇನ್ನೊಂದ್ ಕಡೆ ಕೂಸುನ ಸೊಂಟಕೆ ಬಳ್ಳಿ ಹಾಕಿ ಕುರ್ಚಿ ಕಾಲಿಗೋ, ಏಣಿ ಕಾಲಿಗೋ, ಕಟ್ಲ್ ಕಾಲಿಗೋ ಕಟ್ಟಿ ಹೋತಿದೊ ಗಡ. ಬಂದ್ ನೋಡಕನ ಆ ಕೂಸು ಪೂರಾ ಗಲೀಜಿ ಮಾಡಿಕಂಡ್, ಮೈ ಕೈ ಬಾಯಿ ಪೂರಾ......... ಅಯ್ಯೊಯ್ಯೋ........!! ಅಷ್ಟಗಲ ಸಾರಸ್ಸಿ ಬುಟ್ಟಿದ್ದರೆ. ಆ ನೊಣಗಳೋ....!! ಅವ್ವ ಬಂದ ಮೇಲೆ ಅದರೆಲ್ಲಾ ಎತ್ತಿ, ತೊಳ್ಸ್, ಮೀಸಿ, ಉಣ್ಸಿ ಆಕನ ಅವ್ವನ ಸೊಂಟ ಸೋಬಾನೆ ಹೇಳ್ತಿತ್. ಈಗ ಬುಡಿ ಲೆಫ್ಟ್‌ರೈಟ್ ಬೇಬಿಸಿಟಿಂಗ್. ಅದಿಲ್ಲರೆ ಪೀಚೇಮೂಡ್ ಅಂಗನವಾಡಿ ಸಿಟಿಂಗ್!

ಒಂದ್ ಕೂಸು ಯಾಗ ನೋಡಿರೂ ಅವ್ವ ಬಾಕೆ ಮುಂದೆ ಹಾಸಿಗೆಯ ಚಂಡಿ ಮಾಡ್ತಿತ್‌ಗಡ. ಎಷ್ಟಂತ ಬಟ್ಟೆ ಬದಲಾಯಿಸುದು? ಅದ್ಕೆ ಅವುಳು ಒಂದ್ ಉಪಾಯ ಮಾಡ್ತ್‌ಗಡ. ಹೆಂಗೂ

ಅದ್ ಗಂಡ್‌ಕೂಸು. ಉಚ್ಚೆ ಒಯ್ಯೊದುರ ತಡೆದು ಸುಲಭ! ಹೆಂಗೆಂತೇಳೀ? ಕೆಲ್ಸಕೆ ಹೋಕೆ ಮುಂದೆ ಆ ಕೂಸುನ 'ಪೈಪ್'ಗೆ ನೂಲು ಕಟ್ಟಿತ್‌ಗಡ. ಹಂಗೆ ಕಟ್ಟಿ ನಲ್‌ಗಿಸಿ ಕೆಲ್ಸಕ್ಕೆ ಹೋತು. ಸರಿ, ಕೆಲ್ಸ ಮುಗ್ಸಿ ಬಾಕನ ಕೂಸು ಉಚ್ಚೇ ಒಯ್ತುಲೆ! ಯಾಕೆಂತ್ತೇರಳಿರೆ ಕೂಸು ಸತ್ತೇ ಹೋಗಿತ್!

ಕೆಲವು ಕಡೆ ಕೂಸುನ ಅತ್ತೆ ಹಕ್ಕಲೆ ಬುಟ್ ಹೋದವೆ. ಆ ಕೂಸೋ ಅಬ್ಬಬ್ಬಾ ಉರಿಕೊಳ್ಳಿ. ಮಕ್ಕಳಿಗೆ ಹಿಂಗೆ ಬಾಯಿಬುಟ್ ಯಾರೂ ಹೇಳುದುಲೆ. ಆದರೆ ಮನಸ್‌ಲೇ ಏನೇನೋ ಬಯ್ಕಂಡವೆ. ಅದರ ಎಳ್ದ್ ಹಾಕುದು, ಇದರ ಎತ್ತಿ ಹಾಕುದು, ಇನ್ನೊಂದರ ಚೂರು ಮಾಡ್ದು, ತುಂಡು ಮಾಡ್ದು, ನೀರು ಚೆಲ್ಲುದು, ಬೆಂಕಿಕೊಳ್ಳಿ ಎಳ್‌ದ್ ಬಿಸಿನೀರ್ ಪಾತ್ರೆಗೆ ಕೈ ಹಾಕುದು, ಕುಡಿವ ನೀರಿಗೆ ಕಾಫಿ ಗಸಿನ ಒಯ್ಯೊದು, ಕೊತ್ತಿಮರಿನ ಮೀಸುದು ಅದರ ಬಟ್ಟೆ ಹಿಂಡಿದಂಗೆ ಹಿಂಡುದು, ಸಿಕ್ಕಿದವುದಕೆಲ್ಲಾ ದೊಣ್ಣೆಲೆ ಬಢೇದು, ಕತ್ತಿ ತಕ್ಕಂಡ್ ಕಡೇದು....... ಹೇಳಿಕೆ ಹೋದರೆ ದಿನಬೆಳಗಾದು. ಅಂಥಾ ಪುಂಡು ಮಾಡಿವೆ. ಮಕ್ಕಳ ನೋಡಿಕಂಬೋವು ಪೂರ್ವ ಜನ್ಮಲಿ ಪಾಪ ಮಾಡ್ದವುತ ಯಾರೋ ಹೇಳ್ತಿದ್ದೊ.

ಅಲ್ಲೊಂದ್ ಕಡೆ ಕೂಸುನ ದೆಸೆಂದ ಅತ್ತೆಗೂ ಸೊಸೆಗೂ ಯಾಗೋಳು ಜಗಳ ಅತಿತ್. ಕೂಸುನ ಚಾಕರಿ ಅತ್ತೆದಾಗಿತ್. ಸೊಸೆ ಬೆಳಿಗ್ಗೆದ್ ಅಡ್ಗೆ ಮಾಡಿ ಕೆಲ್ಸಕ್ಕೆ ಹೋತಿತ್. ಈ ಕೂಸು ಅಜ್ಜಿ ಸೊಂಟಂದ ಇಳಿತನೇ ಇತ್ಲೆ. ನೆಲಕ್ಕೆ ಕಾಲ ಸೋಂಕಿಕೆಬತ್. ನೆಲಕ್ಕೆ ಕಾಲ್ ಮುಟ್ಟಿತೊ ಕಾಲ್‌ನ ಕೊಕ್ಕೆ ಮಾಡಿಕಣ್ತಾ ಇತ್. ಆಕಸ್ಮಾತ್ ನೆಲಕ್ಕೆ ಇಳ್ತೋ ಕೊತ್ತಿ ಮರ ಹತ್ತುವಂಗೆ ಓಡಿಬಂದ್ ಅಜ್ಜಿನ ಕಾಲ್ ತಬ್ಬಿಕಂಡ್ ಹತ್ತಿ ಸೊಂಟಲಿ ಕೂರ್‍ತಾ ಇತ್. ಅಜ್ಜಿಗೆ ಸೊಂಟ ಬೇನೆಂತೇಳಿರೆ ಯಾರೊಟ್ಟಿಗೆ ಹೇಳ್ದು? ಕತ್ತಲಾಕನ ಅವ್ವ ಅಲ್ಲೇ ಬಾಕನ ಇಲ್ಲಿಂದಳೇ ಈ ಕೂಸು ಚಾಡಿ ಹೇಳ್ತಾಇತ್. ಅಲ್ಲಿಗೆ ಹೊಡ್ತ್ ಇಲ್ಲಿಗೆ ಹೊಡ್ತ್, ತಿಂಬಕೆ ಕೊಟ್ಟತ್‌ಲೆ, ತಾನೇ ತಿಂಬತಿತ್. ನನ್ ಕಾಲ್ ತೊಳ್ಸಿತ್‌ಲೆ, ನಿದ್ದೆ ಮಾಡ್ಸಿತ್‌ಲೆ, ಕಥೆ ಹೇಳ್ತ್‌ಲೆ............ ಹಿಂಗ ಎಷ್ಟೋ ಪುಕಾರ್.

ಇರ್‍ಲ್ ಕಣ್ಣಿಗೆ ನಿದ್ದೆ ಹತ್ತುವ ಮುಟ್ಟ ಆ ಮನೇಲಿ ಈ ಕೂಸುಂದಾಗಿ ಅತ್ತೆಗೂ ಸೊಸೆಗೂ ಲಡಾಯಿ ಆಗ್ತಾ ಇತ್.

ಗಲಾಟೆಕೋರ ಮಕ್ಕಳ ಒಮ್ಮೆ ಇಸ್ಕೂಲಿಗೆ ಸೇರ್‍ಸಿರೆ ಸಾಕಪ್ಪಾಂತ ಮನೆವು ಒಂದ್ ವರ್ಷ ಹೆಚ್ಚಿಗೆ ಮಾಡಿ ಸೇರಿಸಿವೆ. ಪಾಪ, ಆ ಕೂಸಿಗೆ ಕಡೇಲಿ ತೊಂದರೆ ಆದೆತ ಅಪ್ಪ ಅವ್ವಂಗೆ ಗೊತ್ಲೆ. ಇಸ್ಕೂಲಿಗೆ ಹೋದ ಮಕ್ಕ ಅಲ್ಲಿ ಕೊತ್ತಿ ಮರಿಗಳಂಗೆ ಇದ್ದವೆ. ಮನೇಲಿ ಯಜಮಾನಿಕೆ ಮಾಡ್ತಾ ಇದ್ದವರ ಬಾಲ ಅಲ್ಲಿ ಕತ್ತರಿಸಿ ಹೋಗಿದ್ದದೆ. ಮೂಗು ಕೊಯ್ದ ನಾಯಿಯಂಗೆ ಸುಮ್ಮನೆ ಉಟ್ಟು

ನೋಡಿತ ಕೆಲವು ಹೇಳಿವೆ. ಕೆಲವು ಮಕ್ಕ ಚಾಡಿ ಹೇಳ್ದರ್ಲಿ ಎತ್ತಿದ ಕೈ. ಹಂಗೆ ಮಕ್ಕಳಮಾತ್ ಕೇಳಿ ಯಾರೋ ಒಕ್ಕಲೆದ್ದು ಹೋದೊ ಗಡ. ಎಲ್ಲ ಮಕ್ಕಳೂ ಒಂದೇ ಥರ ಇರ್ದುಲೆ. ಒಳ್ಳ ಮಕ್ಕ ಬೇಕಷ್ಟು ಒಳೊ.

ಕೆಲವು ಮಕ್ಕ ಕೈಲಾಗಿಗದಿದ್ದರೂ ಗುಡ್ಸುದೇನ್, ಎತ್ತುದೇನ್? ತೊಳೆದು, ಬಟ್ಟೆ ಒಗೇದು, ಕೊಟ್ ತಕಂಡ್ ಕೆಲ್ಸ ಮಾಡ್ದು........ ಒಂದೆರಡಲ್ಲಾ. ಎಲ್ಲಾ ಕೆಲ್ಸಕೂ ಕೈ ಹಾಕ್ತಾ ಇದ್ದವೆ. ಯಾಗ ಮಕ್ಕ ತಯಾರಿಗೆ ಬಂದೋ ತಕ್ಕಣಿ ಯಾವ ಕೆಲ್ಸನೂ ಮಾಡಿಕಿಲೆ. 'ಬೇಕರೆ' ಮಾಡಿಕಂತ ಹೇಳಿ ಓಡಿಬುಟ್ಟಿವೆ.

ಒಂದ್ ಹೈದ ಇಸ್ಕೂಲ್‌ಗೆ ಚಕ್ಕರ್ ಹೊಡೆದರ್ಲಿ ನಿಪುಣ. ಶನಿವಾರನೂ ಬಾದುಲೆ. ಸೋಮರನೂ ಬಾದುಲೆ. ಯಾಕೆ ಬಾತ್ಲೆಂತ ಕೇಳಿರೆ 'ಹೊಟ್ಟೆಬೇನೆ'ತ ಹೇಳ್ತಾ ಇತ್. ಹಿಂಗೆ ಒಂದೊಂದು ಚಕ್ಕರ್‌ಗೂ ಒಂದೊಂದು ಕಾರಣ ಕೊಡ್ತಾ ಇತ್. ಹಿಂಗಿಕರನ ಒಮ್ಮೆ ಮರ್ಟ್‌ಕಂಡ್ ಹೇಳ್ತ್ "ಮೇಡಂ ಮೇಡಂ ನಮ್ಮಜ್ಜಿ ತೀರಿಹೋದ್ರು ಮೇಡಂ" ಪಾಪ! ಮೇಡಮ್‌ಗೂ ಬೇಜಾರಾತ್. 'ಹೋಗು'ಂತ ಕ್ಲಾಸಿಗೆ ಕಳ್ಸಿತ್. ಇದಾಗಿ ತಿಂಗ ಕಳ್ದಿರ್ದು. ಇನ್ನೊಮ್ಮೆ ಚಕ್ಕರ್ ಹೊಡ್ತ್. "ಯಾಕೋ ಬಂದಿಲ್ಲ?" "ಮೇಡಂ ಮೇಡಂ ತಾತ ತೀರಿಹೋದ್ರು ಮೇಡಂ" ಅಯ್ಯೋ ಹೋದ ತಿಂಗ್ಳು ನಿನ್ನ ಅಜ್ಜಿ ತೀರಿ ಹೋದ್ರುಂತ ಹೇಳ್ದಿಯಲ್ಲಾ. "ಹೌದು ಮೇಡಂ, ತಾತ ಅಜ್ಜಿನೇ ನೆನ್ನೋಕ್ತ ನೆನ್ನೋಕ್ತ ಯಾವಾಗ್ಲೂ ಇರೋರು. ಅದೇ ಬೇಜಾರದಲ್ಲಿ ತಾತ ತೀರಿಕೊಂಡ್ರು ಮೇಡಂ" ಹೈದ ಕಣ್‌ನ ಪೂಜಿಕಂಡ್ ನಿತ್ತತ್. ಮೇಡಂ ಕಣ್‌ಲೂ ನೀರ್ ಬಂದಂಗಾತ್. "ಛೇ, ಪಾಪ, ಹೋಗ್ಲಿ ಬುಡು ಏನ್ ಮಾಡಕ್ಕಾಗುತ್ತೆ. ನೀನು ಕ್ಲಾಸಿಗೆ ಹೋಗಪ್ಪಾಂತ" ಮೇಡಂ ಆ ಹೈದನ ಕ್ಲಾಸಿಗೆ ಕಳ್ಸಿತ್. ಇದಾಗಿ ತಿಂಗ ಕಳ್ದಿರ್ದು.

ಒಂದಿನ ಒಂದ್ ಅಜ್ಜಿ ಇಸ್ಕೂಲಿಗೆ ಬಾತ್. ಬಂದಂಗೆ "ಮೇಡಮ್ಮು, ನನ್ನ ಮೊಮ್ಮಗ ಇಸ್ಕೂಲಿಗೆ ಸರಿಯಾಗಿ ಬತ್ತಾವುನಾಂತ ಕೇಳಾಕೆ ಬಂದಿವ್ನಿ ಮೇಡಮ್ಮುಂತ" ಹೇಳ್ತ್. "ಯಾರಜ್ಜಿ ನಿಮ್ಮ ಮೊಮ್ಮಗಾ?" –ಮೇಡಂ ಕೇಳ್ತ್. "ಅದೇ ಯಂಕಟೇಶಾ, ಒಂಬತ್ನೆನೋ ಕಾಣೆ ಹತ್ನೇನೋ ಕಾಣೆ" ಅಜ್ಜಿ ರಾಗ ಹೇಳ್ತ್. ಆ ಸ್ಕೂಲ್‌ಲಿ ವೆಂಕಟೇಶಂತೇಳುವ ಹೈದ ಒಬ್ಬನೇ ಇದ್ದದ್. ಅಂವನೇ ಚಕ್ಕರ್ ರಾಜಾ! ಮೇಡಂಗೆ ಆಶ್ಚರ್ಯ ಆತ್. "ನೀವು ನಿಜವಾಗ್ಲೂ ವೆಂಕಟೇಶನ ಅಜ್ಜೀನೆ ಹೌದಾ". –ಮೇಡಂ ಕೇಳ್ತ್ "ವಯ್! ಇದೇನ್ ಅಂತಿದ್ರಿ ಮೇಡಮ್ಮು, ನಾನೆಯಾ ಅವುನ ಅಜ್ಜಿ" "ಅಲ್ಲ ಅಜ್ಜಿ, ಎರಡು ತಿಂಗಳ ಹಿಂದೆ ನೀವು ತೀರ್ಕೋಂಡ್ರಿ, ಹೋದ ತಿಂಗಳು ತಾತನೂ ತೀರಕೊಂಡ್ರುಂತ

ನಿಮ್ಮ ಮೊಮ್ಮಗನೇ ಅಂದವುನೇ". ಮೇಡಂ ಹೇಳ್ತ. "ಎಲ್ಲಿ ಅವುನ ಕರ್ಸಿ, ಅವ್ನ ಎಕ್ಕುಟ್ಟೋಗ, ನಾನು ನನ್ನ ಗಂಡನೂ ಕಲ್‌ಗುಂಡಂಗೆ ಇದ್ದೀವಿ. ನಾವ ಇರುವಾಗ್ಲೇ ನಮ್ಮುನ್ನ ಕೊಂದವುನಲ್ಲಾ, ಮನೆಗೆ ಬರ್ಲಿ. ಅವುನ್ನ ಒಂದ್ ಗತಿ ಕಾಣುಸ್ತಿನಿಂತ" ಅಜ್ಜಿ ಕೀಲ್ ಕುದುರೆ ಹಂಗೆ ಕೊಣ್ತ್. ಮೇಡಂ ಪಿವನ್‌ನ ಕರ್ತ್. ಒಂಬತ್ತನೆ ತರಗತಿಲಿರೋ ವೆಂಟೇಶನ್ನ ಬರಹೇಳುತ ಆರ್ಡರ್ ಮಾಡ್ತ. ಪಿವನ್ ಹೋಗಿ ಒಂಬತ್ತನೆ ಕ್ಲಾಸ್ ಮೇಡಂನಕ್ಕಲೆ ಹೇಳ್ತ್ ಅಂದೂ ವೆಂಕಟೇಶ ಚಕ್ಕರ್! ಇದ್ ಬಯಲುಸೀಮೆ ಸ್ಕೂಲ್‌ಲಿ ನಡ್ದ ಕಥೆ.